بسم الله الرحمن الرحيم نحمده ونصلي على رسوله الكريم وعلى عبده المسيح الموعود

ಪ್ರವಾದಿ ಮುಹಮ್ಮದ್(ಸ)
ವಿಶೇಷ ಸಂಚಿಕೆ

ولقد نصركم الله ببدر وانتم اذلة

ಸಂಪುಟ
02

ವಾರ್ಷಿಕ ಶುಲ್ಕ
ರೂ.575/-

# ಕನ್ನಡ ಬದರ್ ವಾರ ಪತ್ರಿಕೆ


Weekly
**BADAR** Qadian
KANNADA

ಸಂಚಿಕೆ
39–40

ಸಂಪಾದಕರು:
ತಾರಿಖ್ ಅಹ್ಮದ್ ಇದ್ರೀಸ್.


**Postal Reg. No: 3000039689/2020-22** 30 ಸೆಪ್ಟೆಂಬರ್/ 07 ಅಕ್ಟೋಬರ್ 2021, 30 ತಬೂಕ್/ 07 ಅಖಾ 1400 ತಬ್‌ಲೀಗ್ ಹಿಜರಿ ಶಮ್ಸಿ, 22–29 ಸಫರ್ 1443 ಹಿಜರಿ ಖಮರಿ.



ಮಸ್ಜಿದೆ ನಬವಿ(ಸ)ನ ಒಂದು ಸುಂದರ ನೋಟ

## ಪ್ರವಾದಿಗಳಲ್ಲಿ ಎಲ್ಲರಿಗಿಂತಲೂ ಹೆಚ್ಚು ಧೈರ್ಯಶಾಲಿ




ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

"ನಾವು ನ್ಯಾಯ ನೀತಿಯ ದೃಷ್ಟಿಯಿಂದ ಎಲ್ಲ ಪ್ರವಾದಿಗಳನ್ನು ನೋಡಿದರೆ ಅವರಲ್ಲಿ ಎಲ್ಲರಿಗಿಂತಲೂ ಧೈರ್ಯಶಾಲಿಯೂ ಚೈತನ್ಯಶಾಲಿಯೂ ದೇವನಿಂದ ಅತ್ಯಂತ ಹೆಚ್ಚು ಪ್ರೀತಿಸಲ್ಪಟ್ಟವರೂ ಆದ ಪ್ರವಾದಿಯಾಗಿ ನಾವು ಒಬ್ಬರನ್ನು ಮಾತ್ರ ಕಾಣುತ್ತೇವೆ. ಅವರೇ ಪ್ರವಾದಿಗಳ ನಾಯಕರಾದ ಹಝ್ರತ್ ಮುಹಮ್ಮದ್ ಮುಸ್ತಫಾ ಅಹ್ಮದ್ ಮುಜ್ತಬಾ(ಸ)."

(ಸಿರಾಜೆ ಮುನೀರ್, ರೂಹಾನೀ ಖಝ಼ಾಈನ್, ಸಂಪುಟ–12, ಪುಟ 82)

## ಅಲ್ಲಾಹನು ಶ್ರೇಷ್ಠ ಎಂದು ಕರೆದಿರುವವನು ಎಷ್ಟು ಶ್ರೇಷ್ಠನಾಗಿರಬಹುದು?



ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ನುಡಿಯುತ್ತಾರೆ:

"ಪ್ರವಾದಿ ಮುಹಮ್ಮದ್(ಸ) ರವರು ಯಾವ ರೀತಿಯ ವ್ಯಕ್ತಿಯಾಗಿದ್ದರು? ರಸೂಲುಲ್ಲಾಹ್(ಸ) ರವರ ದರ್ಜೆಯನ್ನು ಕಂಡುಹಿಡಿಯುವುದಕ್ಕಾಗಿ ಈ ಆಯತ್‌ಗಳನ್ನು ಅವರ ಮುಂದೆ ಇರಿಸಬೇಕು. (1) **ಅನ್ನಕ ಲಅಲಾ ಖುಲುಖಿನ್ ಅಝೀಮ್** (ಅಲ್–ಕಲಮ್:05) ಮತ್ತು ಎರಡನೆಯದರಲ್ಲಿ ಅಲ್ಲಾಹನು ಹೇಳುತ್ತಾನೆ: **ವಕಾನ ಫಝ್ಲುಲ್ಲಾಹಿ ಅಲೈಕ ಅಝೀಮ.** (ಅನ್ನಿಸಾಅ್:114) ಅಲ್ಲಾಹನು ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಹು ಅಲೈಹಿವ ಸಲ್ಲಮರನ್ನು ಸೃಷ್ಠಿಯಲ್ಲಿ ಶ್ರೇಳ್ಠ ಎಂದು ಕರೆದಿರುವನು. ಮತ್ತು ಅವರ ಮೇಲೆ ಆಗಿರುವಂತಹ ಅನುಗ್ರಹವನ್ನು ಸಹ ಶ್ರೇಷ್ಠ ಎಂದು ಕರೆದಿರುವನು. ಈಗ ಯೋಚಿಸಿ ನೋಡಿ, ಯಾರನ್ನು ಅಲ್ಲಾಹನು ಶ್ರೇಷ್ಠ ಎಂದಿರುವನು ಆತನು ಎಷ್ಠರ ಮಟ್ಟಿಗೆ ಶ್ರೇಷ್ಠನಾಗಿರಬಹುದು? ಈಗ ಈ ಮಹಿಮೆಯ ಪ್ರವಾದಿಯು ಇಲ್ಲಿರುವಾಗ ನಮಗೆ ಬೇರೊಬ್ಬರನ್ನು ಅನುಸರಿಸುವಂತೆ ಮನವೊಲಿಸುವ ಅವಶ್ಯಕತೆ ಏನಿದೆ."

(ಖುತ್‌ಬಾತೆ ನೂರ್, ಪುಟ–464, ಖುತ್‌ಬ ಜುಮುಅ 25–03–1910)

## ಅವರು ನನ್ನ ಜೀವ, ನನ್ನ ಹೃದಯ, ನನ್ನ ಆಸೆ ಆಗಿದ್ದಾರೆ



ಹಝ್ರತ್ ಖಲೀಫತುಲ್ ಮಾಸಿಹ್ ಸಾನಿ(ರ) ನುಡಿಯುತ್ತಾರೆ:

"ಮುಹಮ್ಮದ್(ಸ) ಅವರ ಪ್ರೀತಿ ನನ್ನಲ್ಲಿ ಹೇಗೆ ತುಂಬಿದೆ ಎಂದು ಅವರಿಗೇನು ಗೊತ್ತು? ಅವರು ನನ್ನ ಜೀವ, ನನ್ನ ಹೃದಯ, ನನ್ನ ಆಸೆ, ನನ್ನ ಬಯಕೆ ಆಗಿದ್ದರೆ, ಅವರ ಗುಲಾಮಗಿರಿಯು ನನಗೆ ಗೌರವದ ಮೂಲವಾಗಿದೆ, ಮತ್ತು ಅವರ ಹೊಳಪು ನನಗೆ ಸಿಂಹಾಸನಕ್ಕಿಂತ ಹೆಚ್ಚು ಎಂದಾಗಿದೆ, ಅವರ ಮನೆಯ ಎದುರು ಗುಡಿಸುವಿಕೆಯ ಮುಂದೆ ಒಂದು ಸಾಮ್ರಾಜ್ಯವು ತುಚ್ಛವಾಗಿದೆ. ಅವರು ಸರ್ವಶಕ್ತನಾದ ಅಲ್ಲಾಹನನ್ನು ಪ್ರೀತಿಸುವವರಾಗಿರುವಾಗ ನಾನು ಏಕೆ ಅವರನ್ನು ಪ್ರೀತಿಸಬಾರದು. ಅವರು ಸರ್ವಶಕ್ತನಾದ ಅಲ್ಲಾಹನ ಪ್ರೀಯರಾಗಿರುವಾಗ ನಾನು ಅವರನ್ನು ಏಕೆ ಪ್ರೀತಿಸಬಾರದು? ಅವರು ಸರ್ವಶಕ್ತನಾದ ಅಲ್ಲಾಹನ ಹತ್ತಿರ ಇದ್ದಾಗ ನಾನು ಆತನಿಗೆ ಏಕೆ ಹತ್ತಿರವಾಗಬಾರದು?"

(ಅನ್ವರುಲ್ ಉಲೂಮ್, ಸಂಪುಟ–2, ಪುಟ–503)

## ಕನ್ನಡ ವಾರ ಪತ್ರಿಕೆ ಬದರ್ "ಪ್ರವಾದಿ ಮುಹಮ್ಮದ್(ಸ) ವಿಷೇಶ ಸಂಚಿಕೆ"


| | ವಿಷಯ ಸೂಚಿಕೆ | ಪುಟ |
|---|---|---|
| 01 | ಪ್ರವಾದಿ ಮುಹಮ್ಮದ್(ಸ)ರವರ ಉತ್ತುಂಗ ಸ್ಥಾನ ಪವಿತ್ರ ಖುರ್‌ಆನ್‌ನ ಬೆಳಕಿನಲ್ಲಿ | 02 |
| 02 | ತಮ್ಮ ಉಮ್ಮತ್ತಿಗೆ ಪ್ರವಾದಿ ಮುಹಮ್ಮದ್(ಸ)ರವರ ಹಿತನುಡಿಗಳು | 03 |
| 03 | ಹಝ್ರ್‌ರತ್ ಮಸೀಹ್ ಮೌಊದ್(ಅ) ರವರ ಅಧ್ಯಾಪನೆಗಳು | 04 |
| 04 | ಸಯ್ಯದುನಾ ಹಝ್ರ್‌ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ರವರ ಹೃದಯಸ್ಪರ್ಶ ಭಾಷಣ. | 05 |
| 05 | ಹಝ್ರ್‌ರತ್ ರಸೂಲುಲ್ಲಾಹ್(ಸ) ರವರು ಓರ್ವ ಮನೋವೈಜ್ಞಾನಿಕ ತಜ್ಞರ ನೆಲೆಯಲ್ಲಿ | 11 |
| 06 | ದೇವ ಏಕತ್ವದ ಕುರಿತು ಹಝ್ರ್‌ರತ್ ರಸೂಲುಲ್ಲಾಹ್(ಸ) ರವರ ಶಿಕ್ಷಣ | 13 |
| 07 | ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಮಹತ್ತಾದ ಕ್ಷಮೆ | 15 |


# ಹಝ್ರ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِي الْعَالَمِ ✿ شَرَّ السُّمُوْمِ عَدَاوَةُ الصُّلَحَاءِ

**ಖೈಸರ್ ರೂಮ್ (ರೋಮ್ ದೇಶದ ಅರಸ) ಹೇಳಿದ್ದನು. ನನಗೆ ಸಂದರ್ಭ ಒದಗಿ ಬರುತ್ತಿದ್ದರೆ ನಾನು ಹಝ್ರ್‌ರತ್ ರಸೂಲುಲ್ಲಾಹ್(ಸ) ರವರ ಕಾಲು ತೊಳೆಯುತ್ತಿದ್ದೆ. ಮಸೀಹನಿಗೋಸ್ಕರ ಒಬ್ಬ ಜಾಗೀರದಾರನಾದವನು ಹೀಗೆ ಹೇಳಿದ್ದು ಇದ್ದರೆ ಸಾಬೀತುಪಡಿಸಿ, ಅಂತಹ ವ್ಯಕ್ತಿಗೆ ಒಂದು ಸಾವಿರ ರೂಪಾಯಿ ಬಹುಮಾನ.**

ಸಯ್ಯದ್‌ನಾ ಹಝ್ರ್‌ರತ್ ಮಸೀಹ್ ಮೌಊದ್(ಅ) ರವರ ಈ ಗೌರವಯುತ ಬಹುಮಾನದ ಪಂಥಾಹ್ವಾನ ನಾವು ಅವರ ಗ್ರಂಥದ ನೂರುಲ್ ಖುರ್‌ಆನ್ ಭಾಗ-2 ರೂಹಾನಿ ಖಝಾಯಿನ್ ಸಂ. 9 ರಿಂದ ಪ್ರಸ್ತುತಪಡಿಸುತ್ತಿದ್ದೇವೆ. ಹಝುರತ್ ಮಸೀಹ್ ಮೌಊದ್(ಅ) ಅವರು ಪವಿತ್ರ ಖುರ್‌ಆನ್‌ನ ಮಹಿಮೆಗಳನ್ನು ಜಾಹೀರುಪಡಿಸಲು ನೂರುಲ್ ಖುರಆನ್ ಹೆಸರಿನ ಒಂದು ಪತ್ರಿಕೆ ಜಾರಿಗೆ ತಂದಿದ್ದರು. ಆದರೆ ಕೆಲಸದ ಒತ್ತಡದಿಂದಾಗಿ ಎರಡೇ ಅಂಕಗಳನ್ನು ಹೊರಡಿಸಲು ಸಾಧ್ಯವಾಯಿತು. ಎರಡನೆಯ ಸಂಚಿಕೆ ಅಂದರೆ ನೂರುಲ್ ಖುರ್‌ಆನ್-2 ನಲ್ಲಿ ಅವರು ಪಾದರಿ ಫತಹ್ ಮಸೀಹ್ ಸಾ॥ ಫತಹಗಢ ಜಿ. ಗುರುದಾಸಪುರ ಅವರು ಮಾಡಿದ ಆರೋಪಗಳಿಗೆ ಉತ್ತರವನ್ನು ನೀಡಿದ್ದಾರೆ. ಅವನು ನಬಿ ಶ್ರೇಷ್ಠರು. ಖಾತಮನ್ನಬಿಯೀನ್, ಇಮಾಮುತ್ತಯಿಬೀನ್, ಸಯ್ಯದುಲ್ ಮೂಮಿನೀನ್ ಹಝ್ರ್‌ರತ್ ಮುಹಮ್ಮದ್ ಮುಸ್ತಫಾ(ಸ) ಮತ್ತು ಅವರ ಧರ್ಮಪತ್ನಿಯರ ಮೇಲೆ ಆರೋಪಗಳನ್ನು ಮಾಡಿದ್ದನು. ಇಲ್ಲಿ ನಾವು ಪಾದಾರಿ ಫತಹ ಮಸೀಹ್ ಮಾಡಿದ ಆ ಆಕ್ಷೇಪವನ್ನು ಬರೆಯುತ್ತಿದ್ದೇವೆ. ಅದರ ಮೇಲೆ ಹಝ್ರ್‌ರತ್ ಮಸೀಹ್ ಮೌಊದ್(ಅ) ಒಂದು ಸಾವಿರ ರೂಪಾಯಿಗಳ ಗೌರವಯುತ ಪಂಥಾಹ್ವಾನ ನೀಡಿದ್ದರು. ಪಾದರಿ ಫತಹ ಮಸೀಹ್ ಉಮ್ಮುಲ್ ಮೂಮಿನೀನ್ ಹಝ್ರ್‌ರತ್ ಆಯಿಶಾ(ರ) ರೊಂದಿಗೆ ಹಝ್ರ್‌ರತ್ ರಸೂಲುಲ್ಲಾಹ್(ಸ) ರವರ ವಿವಾಹದ ಕುರಿತು ಆಕ್ಷೇಪ ಎತ್ತಿದ್ದನು. ಅವರ ವಯಸ್ಸು 9 ವರ್ಷ ಆಗಿರುವಾಗ ವಿವಾಹವಾಗಿದ್ದು ಶರೀಅತ್ತಿಗೆ ವಿರುದ್ಧವಾಗಿದೆ. ಹೀಗೆ ಅದು ವಿವಾಹವಲ್ಲ. ವ್ಯಭಿಚಾರವಾಗಿದೆ ಎಂದು, ಇದು ಶರೀಅತ್ತಿಗೆ ವಿರೋಧವಿದ್ದರೆ ಪಾದರಿ ಫತಹ ಮಸೀಹನಿಗೆ ಪವಿತ್ರ ಖುರ್‌ಆನ್‌ನಿಂದ ಅಲ್ಲದಿದ್ದರೂ ಕನಿಷ್ಠಪಕ್ಷ ತೌರಾತ್ ಅಥವಾ ಇಂಜೀಲಿನಿಂದಾದರೂ ಪುರಾವೆ ಒದಗಿಸಬೇಕಿತ್ತು. ಆಗ ತಿಳಿಯುತಿತ್ತು. 9 ವರ್ಷದ ಹುಡುಗಿಯೊಂದಿಗೆ ವಿವಾಹವಾಗುವುದು ಶರೀಅತ್ತಿಗೆ ವಿರೋಧವಾಗಿದೆ ಎಂದು. ಆದರೆ ಪಾದರಿ ಫತಹ ಮಸೀಹ ಯಾವುದೇ ದೈವಿಕ ಗ್ರಂಥದಿಂದಲ್ಲ. ಬದಲಾಗಿ ಬ್ರಿಟಿಷ್ ಸರಕಾರ ಕೊಟ್ಟಿರುವ ಪುರಾವೆಯಿಂದ ಕೇಳುತ್ತಿದ್ದಾನೆ. ಹಝುರತ್ ರಸೂಲುಲ್ಲಾಹ್(ಸ) ಬ್ರಿಟಿಷ್ ಸರಕಾರದಲ್ಲಿರುತ್ತಿದ್ದರೆ, ಬ್ರಿಟಿಷ್ ಸರಕಾರ ಅವರೊಂದಿಗೆ ಯಾವ ರೀತಿ ವರ್ತಿಸುತ್ತಿತ್ತು?

لَآ اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

ಪಾದರಿ ಫತಹ ಮಸೀಹನು ತನ್ನಕ ಕುತ್ಸಿತ ಬುದ್ಧಿಯಿಂದ ಒಂದು ಕಾರ್ಯವನ್ನು ಶರೀಅತ್ತಿಗೆ ವಿರುದ್ಧ ಎಂದು ಹೇಳಿ ಯಾವುದೇ ದೈವಿಕ ಗ್ರಂಥದ ಪುರಾವೆ ನೀಡದೇ ಬ್ರಿಟಿಷ್ ಸರಕಾರದ ಪುರಾವೆ ನೀಡುತ್ತಿದ್ದಾನೆ. ಈ ಪಾದರಿಗಳು ಏಕಿಷ್ಟು ಕಿಡಿಗೇಡಿತನದವರಾಗಿರುತ್ತಾರೆ. ಪವಿತ್ರರಲ್ಲಿ ಪವಿತ್ರರಾದ ಮತ್ತು ಕೋಟ್ಯಾಂತರ ಜನರ ಮಾರ್ಗದರ್ಶಕರು, ಗುರುಗಳ ಮೇಲೆ ಇಂತಹ ಹೇಯವಾದ ಆರೋಪ ಹಚ್ಚಲು ಅವರ ಹೃದಯಗಳು ಕಂಪಿಸುವುದಿಲ್ಲವೇ, ಅಷ್ಟರ ಮಟ್ಟಿಗೆ ಏಕೆ ಈ ಲಜ್ಜೆಗೆಟ್ಟವರು ಜಾರುವರು. ಇಂತಹ ಹೇಯತನಕ್ಕೆ ಅವರು ಏಕೆ ಮುಂದಾಗುತ್ತಾರೆ ಎಂಬುದಕ್ಕೆ ನಾವು ಸಯ್ಯದ್‌ನಾ ಹಝ್ರ್‌ರತ್ ಮಸೀಹ್ ಮೌಊದ್(ಅ) ರವರ ಕೆಲ ಅಧ್ಯಾಪನೆಗಳನ್ನು ಪ್ರಸ್ತುತಪಡಿಸುತ್ತೇವೆ. ಅವರು ಹೇಳುತ್ತಾರೆ.

ನೆನಪಿರಲಿ ವಾಸ್ತವದಲ್ಲಿ ಪಾದರಿ ಸಾಹೇಬರುಗಳು, ಒಬ್ಬರನ್ನು ಅಪಮಾನಿಸುವುದರಲ್ಲಿ, ಮತ್ತು ಬಯ್ಯುವುದರಲ್ಲಿ ಪ್ರಥಮ ದರ್ಜೆಯಲ್ಲಿದ್ದಾರೆ. ನಮ್ಮ ಬಳಿ ಇಂತಹ ಪಾದರಿಗಳ ಗ್ರಂಥಗಳ ಭಂಡಾರವೇ ಇದೆ. ಅವರು ತನ್ನ ದೇವಾಲಯುಗಳನ್ನೇ ನೂರಾರು ಬೈಗಳನ್ನು ಹಾಕಿದ್ದಾರೆ. (ನೂರುಲ್ ಖುರ್‌ಆನ್-2, ರೂಹಾನಿ ಖಝಾಈನ್, ಸಂಪುಟ-9, ಪುಟ-375)

ಪಾದರಿ ಸಾಹೇಬರುಗಳು ವಿಶೇಷವಾಗಿ ಪವಿತ್ರ ಖುರ್‌ಆನ್‌ನ ಮೇಲೆ ಸಯ್ಯದ್‌ನಾ ಹಝ್ರ್‌ರತ್ ಮುಹಮ್ಮದ್ ಮುಸ್ತಫಾ(ಸ) ರವರ ಪವಿತ್ರ ವ್ಯಕ್ತಿತ್ವದ ಮೇಲೆ ಕ್ರೂರ ಪ್ರಾಣಿಗಳ ರೀತಿ ಏಕೆ ಆಕ್ರಮಣ ಮಾಡುತ್ತಾರೆ. ಅದರ ಮೇಲೆ ಬೆಳಕು ಚೆಲ್ಲುತ್ತಾ ಸಯ್ಯದ್‌ನಾ ಹಝ್ರ್‌ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ:

ನಿಜ ಹೇಳಬೇಕೆಂದರೆ ಕ್ರೈಸ್ತರು ಪವಿತ್ರ ಖುರ್‌ಆನ್‌ನ ಮೇಲೆ ತುಂಬ ಕ್ರೋಧಿತರಾಗಿದ್ದಾರೆ ಮತ್ತು ಕ್ರೋಧಿತರಾಗಲು ಕಾರಣವೇನೆಂದರೆ ಪವಿತ್ರ ಖುರ್‌ಆನ್ ಕ್ರೈಸ್ತರ ಎಲ್ಲಾ ರೆಕ್ಕೆಪುಕ್ಕೆಗಳನ್ನು ಕಡಿದುಹಾಕಿದೆ. ಒಬ್ಬ ಮನುಷ್ಯನನ್ನು ದೇವನನ್ನಾಗಿ ಮಾಡಿದ್ದು ಮಿತ್ಯ ಎಂದು ತೋರಿಸಲಾಯಿತು. ಶಿಲುಬೆಯ ವಿಶ್ವಾಸವನ್ನು ಚಿಂದಿ ಮಾಡಲಾಯಿತು. ಯಾವ ಶಿಕ್ಷಣದ ಮೇಲೆ ಕ್ರೈಸ್ತರಿಗೆ ಬಹಳ ಹೆಮ್ಮೆ ಇತ್ತು. ಅದನ್ನು ಕೀಳುಮಟ್ಟದ್ದು ಮತ್ತು ನಿರರ್ಥಕ ಎಂದು ಸಾಬೀತು ಮಾಡಲಾಯಿತು. ಹೀಗಿರುವಾಗ ಕ್ರೈಸ್ತರು ತನ್ನ ಸ್ವೇಚ್ಛೆತನದಿಂದಾಗಿ ಕೋಪಿಷ್ಠರಾಗಲೇಬೇಕಿತ್ತು. ಅವರು ಏನೆಲ್ಲ ಮಿಥ್ಯ ಹೋದರು. ಅದು ಕಡಿಮೆಯೇ. (ಚಶ್ಮ ಮಸೀಹಿ, ರೂಹಾಣಿ ಖಝಾಈನ್, ಸಂಪುಟ-2., ಪುಟ-343)

ಸಯ್ಯದ್‌ನಾ ಹಝ್ರ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ.

"ಪಾದರಿಗಳ ಎದೆಯ ಮೇಲೆ ಇಸ್ಲಾಮ್ ಧರ್ಮವೇ ಬಂಡೆಯಾಗಿ ಪರಿಣಮಿಸಿದೆ. ಏಕೆಂದರೆ ಅವರ ದೃಷ್ಟಿಯಲ್ಲಿ ಎಲ್ಲಾ ಧರ್ಮಗಳು ವಿಫಲಕಾರಿಯಾಗಿದೆ. ಹಿಂದುಗಳು ಸಹ ಕ್ರೈಸ್ತರಾಗಿ ಇಸ್ಲಾಮಿನ ವಿರುದ್ಧ ಗ್ರಂಥಗಳನ್ನು ಬರೆಯುತ್ತಾರೆ. ರಾಮಚಂದ್ರ ಮತ್ತು ಠಾಕುರದಾಸ ಅವರು ತಮ್ಮೆಲ್ಲ ಶಕ್ತಿ ಪ್ರಯೋಗಿಸಿಕೊಂಡು ಇಸ್ಲಾಮಿನ ವಿರುದ್ಧ ಗ್ರಂಥಗಳನ್ನು ಬರೆದಿದ್ದಾರೆ. ಅಸಲು ಮಾತೆನೆಂದರೆ ಅವರ ಮನಸಾಕ್ಷಿ ಹೇಳುತ್ತದೆ. ಇಸ್ಲಾಮ್ ಧರ್ಮದಿಂದಲೇ ಅವರ ವಿನಾಶವಿದೆ. ಹಾಗಾಗಿ ಸಹಜವಾಗಿ ಅವರು ಭಯಪಡುತ್ತಾರೆ.

ಕೋಳಿಯು ಮರಿ ಒಂದು ಬೆಕ್ಕು ನೋಡುತ್ತಲೇ ಚೀರಲು ಪ್ರಾರಂಭಿಸುತ್ತದೆ. ಅದೇ ರಿತಿ ವಿವಿಧ ಧರ್ಮಗಳು ಸಾಮಾನ್ಯವಾಗಿ ಮತ್ತು ಪಾದರಿಗಳು ವಿಶೇಷವಾಗಿ ಇಸ್ಲಾಮ್ ಧರ್ಮದ ವಿರುದ್ಧ ತಮ್ಮ ಶಕ್ತಿ ಪ್ರದರ್ಶನ ಮಾಡುತ್ತಿದ್ದಾರೆ. ಇದಕ್ಕೆ ಕಾರಣ ಅವರಿಗೆ ದೃಢ ನಿಶ್ಚಯವಾಗಿದೆ. ಅಲ್ಲದೇ ಒಳಗೊಳಗೆ ಅವರ ಮನಸ್ಸು ಸಾಕ್ಷಿ ನೀಡುತ್ತದೆ. ಮಿಥ್ಯ ಧರ್ಮಗಳನ್ನು ಅಳಿಸಿ ಹಾಕುವ ಶಕ್ತಿಯುಲ್ಲ ಧರ್ಮ ಇಸ್ಲಾಮ್ ಮಾತ್ರವಾಗಿದೆ ಎಂದು."

(ಮಲ್ಫೂಝಾತ್, ಸಂಪುಟ-1, ಪುಟ-110, ಮುದ್ರಣ ಖಾದಿಯಾನ್ 2003)

ಇನ್ನೊಂದು ಕಾರಣದಿಂದ ಈ ದೇಶೀಯ ಮತ್ತು ಇಸ್ಲಾಮ್ ಧರ್ಮ ಬಿಟ್ಟವರು ತನುಮನದಿಂದ ಹಝ್ರ್‌ರತ್ ರಸೂಲುಲ್ಲಾಹ್(ಸ) ರವರ ಮೇಲೆ ಆಕ್ರಮಣ ಮಾಡುತ್ತಾರೆ. ಸಯ್ಯದ್‌ನಾ ಹಝ್ರ್‌ರತ್ ಮಸೀಹ್ ಮೌಊದ್(ಅ) ಈ ದೇಸಿ ಪಾದರಿಗಳ ಕುರಿತು ಹೇಳುತ್ತಾರೆ. ಈ ಮತ ಪರಿವರ್ತನೆ ಹೊಂದಿದವರೆಲ್ಲರೂ ಚರ್ಚ್‌ಗಳಲ್ಲಿ, ಹಸಿವಿನಿಂದ ಬಳಲುತ್ತಿರುವವರೆಲ್ಲರೂ ಸೇರಿದರು. ಮತ್ತು ಇವರೆಲ್ಲರೂ ಸಂಪತ್ತಿನ ಮೋಹಕ್ಕೆ ಒಳಗಾಗಿ ಮತ್ತು ಅವರ ಶ್ರೀಮಂತಿಕೆ ನೋಡಿ ಮರುಳಾಗಿದ್ದಾರೆ. ಮತ್ತೆ ಅವರು ಅವರನ್ನು ಸಂತುಷ್ಠಪಡಿಸಲು ಅನಾವಶ್ಯಕವಾಗಿ ಹಝ್ರ್‌ರತ್ ರಸೂಲುಲ್ಲಾಹ್(ಸ) ರವರ ಮೇಲೆ ಇಲ್ಲಸಲ್ಲದ ಕಠಿಣ ಶಬ್ಧಗಳನ್ನು ಉಪಯೋಗಿಸುತ್ತಾರೆ ಮತ್ತು ತನ್ನ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಹೊಸ ಹೊಸ ರೀತಿಯ ಆರೋಪಗಳನ್ನು ಮಾಡಿ ಅವರ ಕೃಪಾಕಟಾಕ್ಷಕ್ಕೆ ಪಾತ್ರರಾಗಬಯಸುತ್ತಾರೆ. (ನುರುಲ್ ಹಖ್, ಭಾಗ-1 ರೂಹಾನಿ ಖಝಾಈನ್, ಸಂಪುಟ-8, ಪುಟ-47)

ಸಯ್ಯದ್‌ನಾ ಹಝ್ರ್‌ರತ್ ಮಸೀಹ್ ಮೌಊದ್(ಅ) ನುಡಿದರು.

ನನಗೆ ಆಶ್ಚರ್ಯವಾಗುತ್ತದೆ. ಈ ಜನರು ವಿದ್ಯಾವಂತರೆನಿಸಿಕೊಂಡು ಮತ್ತು ಸಂಸ್ಕೃತಿಯ ದಾವೆ ಮಾಡುವವರು, ಕೋಟ್ಯಾನು ಕೋಟಿ ಜನರ ನೇತಾರರ ಮೇಲೆ ಕಾಲ್ಪನಿಕ ಆಧಾರಗಳ ಮೇಲೆ ಹೇಗೆ ಆಕ್ರಮಣ ಮಾಡುತ್ತಿದ್ದಾರೆ. ಅದಾಗ್ಯೂ ಸ್ವಯಂ ಅವರ ಜನರ ಚರಿತ್ರೆ ಎಷ್ಟೊಂದು ಕೀಳುಮಟ್ಟದ್ದಾಗಿವೆ ಎಂದರೆ

*(ಉಳಿದ ಭಾಗ ಪುಟ ಸಂಖ್ಯೆ 19ರಲ್ಲಿ ಮುಂದುವರಿಸಲಾಗಿದೆ)*

**ನಿಶ್ಚಯವಾಗಿಯೂ ಅಲ್ಲಾಹ್ ಮತ್ತು ಅವನ ದೂತರು ಪ್ರವಾದಿಗೆ ಅನುಗ್ರಹಗಳನ್ನು ಬಯಸುತ್ತಾರೆ.**
**ಎಲ್ಲೈ ವಿಶ್ವಾಸಿಗಳೇ, ಅವರಿಗೆ ಅನುಗ್ರಹವೂ ಶಾಂತಿಯೂ ದೊರೆಯಲಿಕ್ಕೋಸ್ಕರ ನೀವು ಸಹ ಪ್ರಾರ್ಥಿಸಿರಿ.**

# ಪ್ರವಾದಿ ಮುಹಮ್ಮದ್(ಸ)ರವರ ಉತ್ತುಂಗ ಸ್ಥಾನ ಪವಿತ್ರ ಖುರ್ಆನ್‌ನ ಬೆಳಕಿನಲ್ಲಿ

## ಪ್ರವಾದಿ ಮುಹಮ್ಮದ್(ಸ) ಅವರನ್ನು ಅನುಸರಿಸುವುದರಿಂದ ಸತ್ಯಸಂದರು, ಹುತಾತ್ಮರು, ಸಜ್ಜನರ ಮತ್ತು ಪ್ರವಾದಿಯ ಸ್ಥಾನವನ್ನು ಪಡೆಯಬಹುದು

وَمَنْ يُّطِعِ اللّٰهَ وَالرَّسُوْلَ فَاُولٰٓئِكَ مَعَ الَّذِيْنَ اَنْعَمَ اللّٰهُ عَلَيْهِمْ مِّنَ النَّبِيّٖنَ
وَالصِّدِّيْقِيْنَ وَالشُّهَدَآءِ وَالصّٰلِحِيْنَ ۚ وَحَسُنَ اُولٰٓئِكَ رَفِيْقًا ۝

ಯಾರಾದರೂ ಅಲ್ಲಾಹನಿಗೆ ವಿಧೇಯರಾಗಿ ಈ ಸಂದೇಶವಾಹಕರನ್ನು ಅನುಸರಿಸಿದರೆ, ಅವರು ಅಲ್ಲಾಹನು ಅನುಗ್ರಹಿಸಿದ ಪ್ರವಾದಿಗಳು, ಸತ್ಯಸಂಧರು, ಹುತಾತ್ಮರು ಮತ್ತು ಸಜ್ಜನರಲ್ಲಿ ಸೇರುವರು. ಅವರು ಅತ್ಯುತ್ತಮ ಸಂಗಾತಿಗಳಾಗಿದ್ದಾರೆ. (ಅನ್ನಿಸಾಅ:70)

ಹಝ್ರತ್ ಖಲೀಫತುಲ್ ಮಾಸಿಹ್ ರಾಬಿ(ರ) ಈ ಆಯತ್ತಿನ ವ್ಯಾಖ್ಯಾನದಲ್ಲಿ ಹೀಗೆ ಹೇಳುತ್ತಾರೆ:

ಈ ಆಯತ್ತಿನಲ್ಲಿ ಗಮನಿಸಬೇಕಾದ ಅನೇಕ ವಿಷಯಗಳಿವೆ. ಮೊದಲನೆಯದು **ಅರ್ರಸೂಲ್** ಎಂದರೆ ಪ್ರವಾದಿ(ಸ) ಆಗಿದ್ದಾರೆ.

ಎರಡನೆಯದಾಗಿ, ನೀವು ಈ ಸಂದೇಶವಾಹಕರನ್ನು ಅನುಸರಿಸಿದರೆ, ಪ್ರವಾದಿ, ಸತ್ಯವಂತ, ಹುತಾತ್ಮ ಮತ್ತು ನೀತಿವಂತ ಸೇರಿದಂತೆ ಜನರಲ್ಲಿ ಒಬ್ಬರಾಗುತ್ತೀರಿ. ಇದರ ಅರ್ಥ ಪ್ರವಾದಿ(ಸ) ರವರ ಅನುಸರಣೆಯಲ್ಲಿ ಪ್ರವಾದಿಯು ಆಗಬಹುದು.

ಈ ಸ್ಥಳದಲ್ಲಿ, **ಮಅ** ಪದದ ಅರ್ಥವನ್ನು ಕೆಲವು ವಿದ್ವಾಂಸರು ಅವರೊಂದಿಗೆ ಇರುತ್ತಾರೆ ಅವರಲ್ಲಿ ಇರುವುದಿಲ್ಲ ಎಂದು ಒತ್ತಾಯಪೂರ್ವಕವಾಗಿ ಅನುವಾದಿಸಿದ್ದಾರೆ. ಇದಕ್ಕೆ ಬೆಂಬಲವಾಗಿ ಅವರು ಹೇಳುತ್ತಾರೆ: **ಹಸುನ ಉಲಾಯಿಕ ರಫೀಖ** ಅವರು ಅತ್ಯುತ್ತಮ ಒಡನಾಡಿಯಾಗುತ್ತಾರೆ ಅಂದರೆ, ಅವರು ಪ್ರವಾದಿಗಳೊಂದಿಗೆ ಇರುತ್ತಾರೆ ಆದರೆ ಸ್ವತಃ ಪ್ರವಾದಿಯಲ್ಲ ಎಂದು ಹೇಳಿದರು. ಈ ಆಯತ್ತಿನ ಈ ಅನುವಾದವು ಪ್ರವಾದಿ(ಸ) ಅವರಿಗೆ ದೊಡ್ಡ ಅವಮಾನವಾಗಿದೆ. ಏಕೆಂದರೆ ಆ ಸಂದರ್ಭದಲ್ಲಿ ಈ ಆಯತ್ತಿನ ಅರ್ಥವು ಪ್ರವಾದಿಯನ್ನು ಅನುಸರಿಸುವವರು ಪ್ರವಾದಿಗಳೊಂದಿಗೆ ಇರುತ್ತಾರೆ. ಆದರೆ ಅವರು ಸ್ವತಃ ಪ್ರವಾದಿಗಳಾಗಿರುವುದಿಲ್ಲ, ಅವರು ಸತ್ಯಸಂಧರೊಂದಿಗೆ ಇರುತ್ತಾರೆ, ಆದರೆ ಅವರು ಸತ್ಯಸಂಧರಾಗಿರುವುದಿಲ್ಲ. ಅವರು ಹುತಾತ್ಮರ ಜೊತೆ ಇರುತ್ತಾರೆ. ಆದರೆ ಅವರು ಹುತಾತ್ಮರಾಗುವುದಿಲ್ಲ. ಅವರು ನೀತಿವಂತರೊಂದಿಗೆ ಇರುತ್ತಾರೆ ಆದರೆ ಅವರು ತಮ್ಮನ್ನು ತಾವು ನೀತಿವಂತರಾಗಿರುವುದಿಲ್ಲ. ಪವಿತ್ರ ಖುರ್ಆನಿನ ಅನೇಕ ಆಯತ್‌ಗಳಲ್ಲಿ, **ಮಅ** ಎಂಬ ಪದವನ್ನು **ಮಿನ್** ನ ಅರ್ಥದಲ್ಲಿ ಬಳಸಲಾಗಿದೆ. ಉದಾಹರಣೆಗೆ, ಆಲಿ ಇಮ್ರಾನ್: 194, ಅನ್ನಿಸಾಅ:147, ಅಲ್‌ಹಿಜರ್:32 ನೋಡಿ. ಇದರ ಜೊತೆಗೆ, ಇಲ್ಲಿ **ಮಅಲ್ಲಝೀನ ಅನ್‌ಅಮಲ್ಲಾಹು ಅಲೈಹಿಮ್** ನಂತರ **ಮಿನನ್ನಬಿಈನ** ಎಂದು ಹೇಳಲಾಗಿದೆ. ಇದನ್ನು **ಮಿನ್** ಬಯಾನಿಯ ಎಂದು ಹೇಳಲಾಗುತ್ತದೆ. ಅಂದರೆ ಅವರೊಂದಿಗೆ,

## ಪ್ರವಾದಿ(ಸ) ಅವರ ಅನುಸರಣೆ ಅಲ್ಲಾಹನ ಸಂಪ್ರೀತಿಗೆ ಕಾರಣವಾಗುತ್ತದೆ

قُلْ اِنْ كُنْتُمْ تُحِبُّوْنَ اللّٰهَ فَاتَّبِعُوْنِيْ يُحْبِبْكُمُ اللّٰهُ وَيَغْفِرْ لَكُمْ ذُنُوْبَكُمْ ؕ
وَاللّٰهُ غَفُوْرٌ رَّحِيْمٌ ۝

ಹೇಳು: 'ನೀವು ಅಲ್ಲಾಹನನ್ನು ಪ್ರೀತಿಸುವಿರಾದರೆ ನನ್ನನ್ನು ಅನುಸರಿಸಿರಿ. ಆಗ ಅಲ್ಲಾಹನು ನಿಮ್ಮನ್ನು ಪ್ರೀತಿಸುವನು ಮತ್ತು ನಿಮ್ಮ ಪಾಪಗಳನ್ನು ಕ್ಷಮಿಸುವನು. ಅಲ್ಲಾಹನು ಅತ್ಯಂತ ಕ್ಷಮಾಶೀಲನೂ ಕಾರುಣ್ಯ ನಿಧಿಯೂ ಆಗಿದ್ದಾನೆ. (ಆಲಿ ಇಮ್ರಾನ್:32)

**ಅಲ್ಲಾಹನ ಸಾಮಿಪ್ಯಕ್ಕೆ ದಾರಿ**

يٰۤاَيُّهَا الَّذِيْنَ اٰمَنُوا اتَّقُوا اللّٰهَ وَابْتَغُوْۤا اِلَيْهِ الْوَسِيْلَةَ وَجَاهِدُوْا فِيْ سَبِيْلِهٖ
لَعَلَّكُمْ تُفْلِحُوْنَ ۝

ಎಲ್ಲೈ ವಿಶ್ವಾಸಿಗಳೇ, ನೀವು ಅಲ್ಲಾಹನ ಭಯ ಭಕ್ತಿಯುಳ್ಳವರಾಗಿರಿ; ಅವನ ಸಾಮೀಪ್ಯವನ್ನು ಪಡೆಯುವ ಮಾರ್ಗವನ್ನು ಹುಡುಕಿರಿ; ಅವನ ಮಾರ್ಗದಲ್ಲಿ ಅತ್ಯಧಿಕ ಪರಿಶ್ರಮಿಸಿರಿ – ನೀವು ವಿಜಯಶಾಲಿಗಳಾಗಲಿಕ್ಕಾಗಿ. (ಅಲ್ ಮಾಇದಃ: 36)

ಹಝ್ರತ್ ಖಲೀಫತುಲ್ ಮಾಸಿಹ್ ರಾಬಿ(ರ) ಈ ವಚನದ ವ್ಯಾಖ್ಯಾನದಲ್ಲಿ ಹೀಗೆ ಹೇಳುತ್ತಾರೆ: ಅಲ್ಲಾಹನನ್ನು ತಲುಪುವುದು ಎಂದರೆ ಅಲ್ಲಾಹನ ಸಮೀಪವಾಗುವುದಕ್ಕೆ ಇರುವ ಮಾರ್ಗ ಎಂದರೆ ಪ್ರವಾದಿ(ಸ) ಆಗಿದೆ. ಅಲ್ಲಾಹನ ಪ್ರವಾದಿ(ಸ) ಅವರ ಮಾರ್ಗವನ್ನು ಅಳವಡಿಸಿಕೊಳ್ಳದ ಹೊರತು ಈಗ ಸರ್ವಶಕ್ತನಾದ ಅಲ್ಲಾಹನೊಂದಿಗೆ ಸಮೀಪಿಸುವುದಕ್ಕೆ ಯಾವುದೇ ನೇರ ಮಾರ್ಗವಿರುವುದಿಲ್ಲ. ಅಝಾನಿನ ನಂತರದ ದುಆ ದಲ್ಲಿ ಉಲ್ಲೇಖಿಸಿರುವ ವಸೀಲ, ಇಲ್ಲಿ ಅದೇ ವಿಷಯವನ್ನು ಬೆಂಬಲಿಸುತ್ತದೆ.

## ಪ್ರವಾದಿ(ಸ) ಅವರ ಉಪಸ್ಥಿತಿಯು ಸಮುದಾಯಕ್ಕೆ ತಾಯಿತವಾಗಿದೆ

وَمَا كَانَ اللّٰهُ لِيُعَذِّبَهُمْ وَاَنْتَ فِيْهِمْ ؕ وَمَا كَانَ اللّٰهُ مُعَذِّبَهُمْ وَهُمْ
يَسْتَغْفِرُوْنَ ۝ (ಅಲ್‌ಅನ್‌ಫಾಲ್: 34)

ಆದರೆ, ನೀನು ಅವರೊಂದಿಗೆ ಇರುವಾಗ ಅಲ್ಲಾಹನು ಅವರನ್ನು ಶಿಕ್ಷಿಸುವಂತಿರಲಿಲ್ಲ. ಅವರು ಪಾಪವಿಮುಕ್ತಿಗಾಗಿ ಪ್ರಾರ್ಥಿಸುವ ಸಂದರ್ಭದಲ್ಲೂ ಅಲ್ಲಾಹನು ಅವರನ್ನು ಶಿಕ್ಷಿಸುವವನಾಗಿರಲಿಲ್ಲ. (ಅಲ್‌ಅನ್‌ಪಾಲ್: 34)

## ಪ್ರವಾದಿ(ಸ) ರವರ ಪುನರುತ್ಥಾನದ ಅರ್ಥ

يٰۤاَيُّهَا الَّذِيْنَ اٰمَنُوا اسْتَجِيْبُوْا لِلّٰهِ وَلِلرَّسُوْلِ اِذَا دَعَاكُمْ لِمَا يُحْيِيْكُمْ ۚ
وَاعْلَمُوْۤا اَنَّ اللّٰهَ يَحُوْلُ بَيْنَ الْمَرْءِ وَقَلْبِهٖ وَاَنَّهٗۤ اِلَيْهِ تُحْشَرُوْنَ ۝

ಎಲ್ಲೈ ಸತ್ಯವಿಶ್ವಾಸಿಗಳೇ, ನೀವು ಅಲ್ಲಾಹನಿಗೆ ಮತ್ತು ಸಂದೇಶವಾಹಕರಿಗೆ – ಅವರು ನಿಮ್ಮನ್ನು ಬದುಕಿಸಲಿಕ್ಕಾಗಿ ಕರೆಯುವಾಗ ಓಗೊಡಿರಿ. ಖಂಡಿತವಾಗಿಯೂ ಅಲ್ಲಾಹನು ಮನುಷ್ಯನಿಗೂ ಅವನ ಹೃದಯಕ್ಕೂ ಮಧ್ಯೆ ಇದ್ದಾನೆಂದೂ ಅವನೆಡೆಗೆಯೇ ನೀವೆಲ್ಲರೂ ಒಂದುಗೂಡಿಸಲ್ಪಡುವಿರೆಂದೂ ಅರಿತುಕೊಳ್ಳಿರಿ. (ಅಲ್‌ಅನ್‌ಫಾಲ್: 25)

ಹಝ್ರತ್ ಖಲೀಫತುಲ್ ಮಸಿಹ್ ರಾಬಿ(ರ) ಈ ವಚನದ ವ್ಯಾಖ್ಯಾನದಲ್ಲಿ ಹೀಗೆ ಹೇಳುತ್ತಾರೆ:

ಈ ವಚನವು ಮರಣಹೊಂದಿದವರ ಪುನರುತ್ಥಾನದ ಸ್ಪಷ್ಟ ವಿವರಣೆಯನ್ನು ನೀಡುತ್ತದೆ. ಯೇಸುವಿನ ಪುನರುತ್ಥಾನವು ಸತ್ತವರನ್ನು ಪುನರುತ್ಥಾನಗೊಳಿಸುತ್ತದೆ ಎಂದು ಕ್ರೈಸ್ತರು ತಪ್ಪಾಗಿ ಭಾವಿಸುತ್ತಾರೆ. ಆದ್ದರಿಂದ ಪ್ರವಾದಿ(ಸ) ಅವರು ಆಧ್ಯಾತ್ಮಿಕ ಮರಣಹೊಂದಿದವರನ್ನು ತಮ್ಮ ಕಡೆಗೆ ಕರೆದಾಗ, ಅಂದರೆ "ನಾನು ನಿಮ್ಮನ್ನು ಮತ್ತೆ ಜೀವಂತಗೊಳಿಸುವೆನು" ಎಂದು ಹೇಳಿದಾಗ, ಅವರು ಸಮಾಧಿಯಲ್ಲಿ ಸತ್ತವರಲ್ಲ, ಆದರೆ ಅವರು ಅರೇಬಿಯಾದ ಆಧ್ಯಾತ್ಮಿಕವಾಗಿ ಮರಣ ಹೊಂದಿದವರು ಎಂಬುದು ಸ್ಪಷ್ಟವಾಯಿತು.

## ಅಲ್ಲಾಹ್ ಮತ್ತು ದೇವದೂತರು ನಿಮ್ಮ ಮೇಲೆ ದರೂದ್ ಮತ್ತು ಸಲಾಮನ್ನು ಕಳುಹಿಸಲಿ

## ಮೂಮಿನರು (ಭಯಭಕ್ತಿವುಳ್ಳವರು) ಪ್ರವಾದಿ(ಸ) ರವರ ಮೇಲೆ ದರೂದ್ ಮತ್ತು ಸಲಾಮನ್ನು ಕಳುಹಿಸಲು ಆದೇಶ

اِنَّ اللّٰهَ وَمَلٰٓئِكَتَهٗ يُصَلُّوْنَ عَلَى النَّبِيِّ ؕ يٰۤاَيُّهَا الَّذِيْنَ اٰمَنُوْا صَلُّوْا عَلَيْهِ
وَسَلِّمُوْا تَسْلِيْمًا

ನಿಶ್ಚಯವಾಗಿಯೂ ಅಲ್ಲಾಹ್ ಮತ್ತು ಅವನ ದೂತರು ಪ್ರವಾದಿಗೆ ಅನುಗ್ರಹಗಳನ್ನು ಬಯಸುತ್ತಾರೆ. ಎಲ್ಲೈ ವಿಶ್ವಾಸಿಗಳೇ, ಅವರಿಗೆ ಅನುಗ್ರಹವೂ ಶಾಂತಿಯೂ ದೊರೆಯಲಿಕ್ಕೋಸ್ಕರ ನೀವು ಸಹ ಪ್ರಾರ್ಥಿಸಿರಿ. (ಅಲ್‌ಅಹ್‌ಝಾಬ್: 57)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಈ ವಚನದ ಬಗ್ಗೆ ಹೇಳುತ್ತಾರೆ:

ಈ ವಚನವು ಪ್ರವಾದಿ(ಸ) ಅವರ ಕಾರ್ಯಗಳನ್ನು ಸರ್ವಶಕ್ತನಾದ ಅಲ್ಲಾಹನು ಅವರ ಗುಣಲಕ್ಷಣಗಳನ್ನು ವ್ಯಾಖ್ಯಾನಿಸಲು ಮಿತಿಯನ್ನು ಸೂಚಿಸಲು ಯಾವ ವಿಶೇಶ ಪದವನ್ನು ಸೂಚಿಸಲಿಲ್ಲ ಎಂದು ತೋರಿಸುತ್ತದೆ. ಪದಗಳನ್ನು ಕಂಡುಹಿಡಿಯಬಹುದಾಗಿತ್ತು ಆದರೆ ಅವುಗಳನ್ನು ಸ್ವತಃ ಬಳಸಲಿಲ್ಲ, ಅಂದರೆ, ಪ್ರವಾದಿ(ಸ) ರವರ ಉತ್ತಮ ಕಾರ್ಯಗಳ ವ್ಯಾಖ್ಯಾನವು ಮಿತಿಯಿಂದ ಹೊರಗಿವೆ. ಅಲ್ಲಾಹನ ಬೇರೆ ಯಾವುದೇ ಪ್ರವಾದಿಯ ಹೊಗಳಿಕೆಗೆ ಇಂತಹ ವಚನವನ್ನು ಬಳಸಲಿಲ್ಲ. ಪ್ರವಾದಿ(ಸ) ರವರು ತಮ್ಮ ಆತ್ಮದಲ್ಲಿ ಪ್ರಾಮಾಣಿಕ ಮತ್ತು ಪರಿಶುದ್ಧನಾಗಿದ್ದರು ಮತ್ತು ಅವರ ಕಾರ್ಯಗಳು ಅಲ್ಲಾಹನ ದೃಷ್ಟಿಯಲ್ಲಿ ಎಷ್ಟು ಹಿತಕರವಾಗಿದ್ದವೋ ಎಂದರೆ ಅಲ್ಲಾಹನು ಮುಂದಿನ ಜನರಿಗೆ ದರೂದನ್ನು ಕೃತಜ್ಞತೆಯಾಗಿ ಕಳುಹಿಸುವಂತೆ ಶಾಶ್ವತವಾಗಿ ಆಜ್ಞಾಪಿಸಿದನು."
**(ಮಲ್‌ಫೂಝಾತ್, ಸಂಪುಟ–1, ಪುಟ–32, ಮುದ್ರಣ 2018 ಖಾದಿಯಾನ್)**

# ತಮ್ಮ ಉಮ್ಮತ್ತಿಗೆ ಪ್ರವಾದಿ ಮುಹಮ್ಮದ್(ಸ)ರವರ ಹಿತನುಡಿಗಳು

✿ سَمِعْتُ رَسُوْلَ اللّٰهِ صَلَّى اللّٰهُ عَلَيْهِ وَسَلَّمَ يَقُوْلُ: اَفْضَلُ الذِّكْرِ: لَا اِلٰهَ اِلَّا اللّٰهُ وَاَفْضَلُ الدُّعَاءِ: اَلْحَمْدُ لِلّٰهِ۔ (ترمذی، کتاب الدعوات، باب دعوۃ المسلم مستجابۃ)

ಹಝ್‌ರತ್ ಜಾಬಿರ್(ರ) ಹೇಳುತ್ತಾರೆ: ನಾನು ಪ್ರವಾದಿ ಮುಹಮ್ಮದ್(ಸ) ಅವರು ಹೀಗೆ ಹೇಳುತ್ತಿರುವುದನ್ನು ಕೇಳಿದ್ದೇನೆ ಉತ್ತಮವಾದ ಝಿಕರ್ ತೌಹೀದ್ ಆಗಿದೆ, ಇದರ ಅರ್ಥ ಅಲ್ಲಾಹನನ್ನು ಹೊರತುಪಡಿಸಿ ಬೇರೆ ಯಾರು ಆರಾಧನೆಗೆ ಅರ್ಹನಲ್ಲ ಎಂದು ಒಪ್ಪಿಕೊಳ್ಳುವುದು, ಮತ್ತು ಅತ್ಯುತ್ತಮವಾದ ಪ್ರಾರ್ಥನೆ ಅಲ್‌ಹಮ್‌ದುಲಿಲ್ಲಾಹ್.

✿ قَالَ لِیْ رَسُوْلُ اللّٰهِ صَلَّى اللّٰهُ عَلَيْهِ وَسَلَّمَ: اَلَا اَدُلُّكَ عَلٰى كَنْزٍ مِنْ كُنُوْزِ الْجَنَّةِ؟ فَقُلْتُ بَلٰى يَا رَسُوْلَ اللّٰهِ! قَالَ: لَا حَوْلَ وَلَا قُوَّةَ اِلَّا بِاللّٰهِ۔
(بخاری، کتاب الدعوات، باب قول لا حول ولا قوۃ الا باللہ)

ಹಝ್‌ರತ್ ಅಬೂ ಮೂಸ ಅಶ್‌ಅರಿ(ರ) ಅವರು ಹೇಳುತ್ತಾರೆ ಪ್ರವಾದಿ(ಸ) ಹೇಳಿದರು: ಸ್ವರ್ಗದ ಒಂದು ನಿಧಿಯನ್ನು ನಾನು ನಮಗೆ ಹೇಳಬಹುದೇ? ಅದಕ್ಕೆ ನಾನು ಹೇಳಿದೆ. ಯಾ ರಸೂಲಲ್ಲಾಹ್!! ಅವಶ್ಯವಾಗಿ ಹೇಳಿ, ಅದಕ್ಕೆ ಅವರು ಹೇಳಿದರು **ಲಾಹೌಲ್** ಪಠಿಸುತ್ತಾ ಇರಿ ಅಂದರೆ ಅಂದರೆ, ಸರ್ವಶಕ್ತನಾದ ಅಲ್ಲಾಹನ ಸಹಾಯವಿಲ್ಲದೆ, ಕೆಟ್ಟದ್ದನ್ನು ತಪ್ಪಿಸುವ ಶಕ್ತಿ ಅಥವಾ ಒಳ್ಳೆಯದನ್ನು ಮಾಡುವ ಶಕ್ತಿ ನನಗಿಲ್ಲ.

✿ عَنْ سَلْمَانَ الْفَارِسِیِّ رَضِیَ اللّٰهُ عَنْهُ عَنِ النَّبِیِّ صَلَّى اللّٰهُ عَلَيْهِ وَسَلَّمَ قَالَ: اِنَّ اللّٰهَ حَيِیٌّ كَرِيْمٌ يَسْتَحْيِیْ اِذَا رَفَعَ الرَّجُلُ اِلَيْهِ يَدَيْهِ اَنْ يَّرُدَّهُمَا صِفْرًا خَائِبَيْنِ۔ (ترمذی، کتاب الدعوات)

ಹಝ್‌ರತ್ ಅಬೂ ಮೂಸ ಅಶ್‌ಅರಿ(ರ) ಅವರು ಹೇಳುತ್ತಾರೆ ಪ್ರವಾದಿ(ಸ) ಹೇಳಿದರು: ಸ್ವರ್ಗದ ಒಂದು ನಿಧಿಯನ್ನು ನಾನು ನಿಮಗೆ ಹೇಳಬಹುದೇ? ಅದಕ್ಕೆ ನಾನು ಹೇಳಿದೆ. ಯಾ ರಸೂಲಲ್ಲಾಹ್!! ಅವಶ್ಯವಾಗಿ ಹೇಳಿ, ಅದಕ್ಕೆ ಅವರು ಹೇಳಿದರು **ಲಾಹೌಲ್** ಪಠಿಸುತ್ತಾ ಇರಿ ಅಂದರೆ ಅಂದರೆ, ಸರ್ವಶಕ್ತನಾದ ಅಲ್ಲಾಹನ ಸಹಾಯವಿಲ್ಲದೆ, ಕೆಟ್ಟದ್ದನ್ನು ತಪ್ಪಿಸುವ ಶಕ್ತಿ ಅಥವಾ ಒಳ್ಳೆಯದನ್ನು ಮಾಡುವ ಶಕ್ತಿ ನನಗಿಲ್ಲ.

✿ عَنْ اَبِیْ هُرَيْرَةَ رَضِیَ اللّٰهُ عَنْهُ قَالَ: قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ: مَنْ سَرَّهُ اَنْ يَسْتَجِيْبَ اللّٰهُ لَهُ عِنْدَ الشَّدَائِدِ وَالْكُرَبِ فَلْيُكْثِرِ الدُّعَاءَ فِی الرَّخَاءِ۔ (ترمذی، ابواب الدعوات، باب دعوۃ المسلم مستجابۃ)

ಹಝ್‌ರತ್ ಅಬೂಬಕ್ಕರ್(ರ) ವರದಿ ಮಾಡುತ್ತಾರೆ ಪ್ರವಾದಿ(ಸ) ರವರು ಹೀಗೆ ಹೇಳಿದರು: ಯಾರು ಸರ್ವಶಕ್ತನಾದ ಅಲ್ಲಾಹನು ತನ್ನ ಪ್ರಾರ್ಥನೆಗಳನ್ನು ಸ್ವೀಕರಿಸಬೇಕೆಂದು ಬಯಸುತ್ತಾನೋ ಆತನು ತನ್ನ ಉದಾರ ಮತ್ತು ಆರಾಮಿನ ಕಾಲದಲ್ಲಿ ಹೆಚ್ಚಾಗಿ ದುಆ ಮಾಡಬೇಕು.

✿ عَنْ اَبِیْ هُرَيْرَةَ رَضِیَ اللّٰهُ عَنْهُ اَنَّ رَسُوْلَ اللّٰهِ صَلَّى اللّٰهُ عَلَيْهِ وَسَلَّمَ قَالَ: مَا مِنْ اَحَدٍ يُسَلِّمُ عَلَیَّ اِلَّا رَدَّ اللّٰهُ عَلَیَّ رُوْحِیْ اَرُدُّ عَلَيْهِ السَّلَامَ۔
(ابوداؤد، کتاب المناسک، باب زیارۃ القبور)

ಹಝ್‌ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ ಪ್ರವಾದಿ(ಸ) ಹೇಳಿದರು: ಯಾರು ನನಗೆ ಸಲಾಮ್ ಕಳುಹಿಸುವರೋ ಆತನಗೆ ಪ್ರತಿಕ್ರಿಯಿಸಲು ಅಲ್ಲಾಹನು ನನ್ನ ಆತ್ಮವನ್ನು ಹಿಂದಿರುಗಿಸುತ್ತಾನೆ. ಇದರಿಂದ ನಾನು ಅವರ ಸಲಾಮ್‌ಗೆ ಪ್ರತಿಕ್ರಿಯಿಸುತ್ತೇನೆ.

✿ عَنْ اَبِیْ هُرَيْرَةَ رَضِیَ اللّٰهُ عَنْهُ قَالَ قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ اِنَّمَا يُبْعَثُ النَّاسُ عَلٰى نِيَّاتِهِمْ۔ (ابن ماجہ، ابواب الزھد، باب النیۃ)

ಹಝ್‌ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ ಪ್ರವಾದಿ(ಸ) ಹೇಳಿದರು: ಜನರ ಪುನರುತ್ಥಾನವು ಅವರ ನಿಯತ್ತುಗಳ (ಉದ್ದೇಶಗಳಿಗೆ) ಅನುಗುಣವಾಗಿರುತ್ತದೆ (ಅಂದರೆ ಅವರಿಗೆ ಅವರ ಸ್ವಂತ ಉದ್ದೇಶಗಳಿಗೆ ಅನುಗುಣವಾಗಿ ಪ್ರತಿಫಲ ದೊರೆಯುತ್ತದೆ).

✿ عَنْ جَرِيْرِ بْنِ عَبْدِ اللّٰهِ رَضِیَ اللّٰهُ عَنْهُ قَالَ كُنَّا جُلُوْسًا عِنْدَ النَّبِیِّ صَلَّى اللّٰهُ عَلَيْهِ وَسَلَّمَ اِذَا نَظَرَ اِلَى الْقَمَرِ لَيْلَةَ الْبَدْرِ فَقَالَ اِنَّكُمْ سَتَرَوْنَ رَبَّكُمْ كَمَا تَرَوْنَ هٰذَا الْقَمَرَ لَا تُضَامُّوْنَ فِیْ رُؤْيَتِهٖ فَاِنِ اسْتَطَعْتُمْ اَلَّا تُغْلَبُوْا عَلٰى صَلٰوةٍ قَبْلَ طُلُوْعِ الشَّمْسِ وَصَلٰوةٍ قَبْلَ غُرُوْبِ الشَّمْسِ فَافْعَلُوْا۔

ಹಝ್‌ರತ್ ಜರೀರ್ ಬಿನ್ ಅಬ್ದುಲ್ಲಾ(ರ) ವರದಿ ಮಾಡುತ್ತಾರೆ, ನಾವು ಪ್ರವಾದಿ(ಸ) ಅವರ ಸಮ್ಮುಖದಲ್ಲಿ ಹಾಜರಾಗಿದ್ದೇವು, ಅದು ರಾತ್ರಿ ಸಮಯವಾಗಿತ್ತು. ಆಗ ಪ್ರವಾದಿ(ಸ) ರವರು ಹದಿನಾಲ್ಕನೆಯ ದಿನದ ಬೆಳದಿಂಗಳ ಚಂದ್ರನನ್ನು ನೋಡುತ್ತಾ ಹೇಳಿದರು "ನೀವು ಹದಿನಾಲ್ಕನೆ ದಿವಸದ ಚಂದ್ರನನ್ನು ನೋಡುವ ರೀತಿಯಲ್ಲಿಯೇ ಅಲ್ಲಾಹನನ್ನು ನೋಡುವಿರಿ." ಈ ಗೌರವಕ್ಕಾಗಿ ನೀವು ಶ್ರಮಿಸಲು ಬಯಸಿದರೆ, ಸಮಯಕ್ಕೆ ಸರಿಯಾಗಿ ಫಜರ್ ಮತ್ತು ಅಸರ್ ನಮಾಝನ್ನು ಮಾಡಲು ನಿರ್ಲಕ್ಷಿಸಬೇಡಿರಿ

✿ عَنْ اَبِیْ هُرَيْرَةَ رَضِیَ اللّٰهُ عَنْهُ قَالَ قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ مَنْ لَا يَشْكُرِ النَّاسَ لَا يَشْكُرِ اللّٰهَ۔

ಹಝ್‌ರತ್ ಅಬೂಹುರೈರ(ರ) ವರದಿ ಮಾಡುತ್ತಾರೆ, ಪ್ರವಾದಿ(ಸ) ಹೇಳಿದರು: ಜನರಿಗೆ ಧನ್ಯವಾದಗಳನ್ನು ಅರ್ಪಿಸದವನು ಅಲ್ಲಾಹನಗೂ ಧನ್ಯವಾದಗಳನ್ನು ಅರ್ಪಿಸುವುದಿಲ್ಲ. ಅಂದರೆ, ಒಬ್ಬ ವ್ಯಕ್ತಿಯ (ಎಹ್ಸಾನ್) ದಯೆಯ ಪರಿಣಾಮವಾಗಿ, ಇನ್ನೊಬ್ಬ ವ್ಯಕ್ತಿ ಯಾವುದೇ ಅನುಗ್ರಹ ಅಥವಾ ಒಳ್ಳೆಯತನವನ್ನು ಪಡೆದರೆ, ಸರ್ವಶಕ್ತನಾದ ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸುವುದರೊಂದಿಗೆ, ಆ ಒಳ್ಳೆಯ ವ್ಯಕ್ತಿಗೆ ಧನ್ಯವಾದಗಳನ್ನು ಅರ್ಪಿಸುವುದು ಸಹ ಅಗತ್ಯವಾಗಿರುತ್ತದೆ.

✿ عَنْ اَبِیْ هُرَيْرَةَ رَضِیَ اللّٰهُ عَنْهُ قَالَ: قَالَ النَّبِیُّ صَلَّى اللّٰهُ عَلَيْهِ وَسَلَّمَ كُلُّ اَمْرٍ ذِیْ بَالٍ لَا يُبْدَأُ فِيْهِ بِسْمِ اللّٰهِ الرَّحْمٰنِ الرَّحِيْمِ فَهُوَ اَقْطَعُ
(الجامع الصغیر للسیوطی حرف کاف، (2) کشاف)

ಹಝ್‌ರತ್ ಅಬೂಹುರೈರ(ರ) ವರದಿ ಮಾಡುತ್ತಾರೆ, ಪ್ರವಾದಿ(ಸ) ರವರು ಹೇಳಿದರು: ಪ್ರತಿಯೊಂದು ಕಾರ್ಯಗಳು ಬಿಸ್ಮಿಲ್ಲಾಹಿರ್ರ್ರಹ್ಮಾನ್ ನಿರ್ರಹೀಮ್‌ನಂದ ಪ್ರಾರಂಭಿಸಿದರೆ ಆ ಕೆಲಸವು ದೋಷಪೂರಿತ ಮತ್ತು ಅನುಗ್ರಹಗಳಿಂದ ದೂರವಿರುತ್ತದೆ

✿ عَنْ اَبِیْ مُوْسَى الْاَشْعَرِیِّ رَضِیَ اللّٰهُ عَنْهُ عَنِ النَّبِیِّ صَلَّى اللّٰهُ عَلَيْهِ وَسَلَّمَ قَالَ: مَثَلُ الَّذِیْ يَذْكُرُ رَبَّهٗ وَالَّذِیْ لَا يَذْكُرُهٗ مَثَلُ الْحَیِّ وَالْمَيِّتِ۔ وَرَوَاهُ مُسْلِمٌ فَقَالَ مَثَلُ الْبَيْتِ الَّذِیْ يُذْكَرُ اللّٰهُ فِيْهِ وَالْبَيْتِ الَّذِیْ لَا يُذْكَرُ اللّٰهُ فِيْهِ مَثَلُ الْحَیِّ وَالْمَيِّتِ۔ (بخاری، کتاب الدعوات، باب فضل ذکر اللہ تعالیٰ)

ಹಝ್‌ರತ್ ಅಬೂ ಮೂಸ ಅಶ್‌ಅರಿ(ರ) ವರದಿ ಮಾಡುತ್ತಾರೆ, ಪ್ರವಾದಿ(ಸ) ರು ಹೇಳಿದರು: ಅಲ್ಲಾಹನನ್ನು ಸ್ಮರಿಸುವವನು ಮತ್ತು ಅಲ್ಲಾಹನನ್ನು ಸ್ಮರಿಸದವನ ಉದಾಹರಣೆ ಜೀವಂತವಾಗಿರುವವ ಮತ್ತು ಸತ್ತವವನ ಹಾಗಿದೆ.

ಮುಸ್ಲಿಮ್‌ನ ವರದಿಯ ಪ್ರಕಾರ, ಪ್ರವಾದಿ(ಸ) ಹೇಳಿದರು: ಅಲ್ಲಾಹನನ್ನು ಸ್ಮರಿಸುವ ಮನೆ ಹಾಗೂ ಅಲ್ಲಾಹನನ್ನು ಸ್ಮರಿಸದೇ ಇರುವ ಮನೆಯ ಉದಾಹರಣೆ ಜೀವಂತ ಮತ್ತು ಸತ್ತವರಂತಿದೆ.

**ಅದಾಗ್ಯೂ ನಮ್ಮ ನಬಿ ಕರೀಮ್(ಸ) ಸರ್ವ ಲೋಕಗಳ ಮಾನವರಿಗೆ ಆಧ್ಯಾತ್ಮಿಕ ತರಬೇತಿ ನೀಡಲು ಆಗಮಿಸಿದ್ದರು. ಆ ಕಾರಣದಿಂದಲೇ ಹುಝೂರ್ ಅಲೈಹಿಸ್ಸಲಾತು ವಸ್ಸಲಾಮ್ ಈ ಗುಣದಲ್ಲಿ ಮಹೋನ್ನತ ಸ್ಥಾನ ಪಡೆದಿದ್ದರು. ಈ ಸ್ಥಾನಮಾನವೇ ಪವಿತ್ರ ಖುರ್‌ಆನ್ ಹಲವು ಕಡೆ ಹುಝೂರ್(ಸ) ರವರ ಬಗ್ಗೆ ಸಾಕ್ಷ್ಯ ವಹಿಸಿದೆ. ಅಲ್ಲಾಹನ ಗುಣಗಳಂತೆಯೇ ಪ್ರತಿಬಿಂಬವಾಗಿ, ಹಝ್ರತ್ ರಸೂಲುಲ್ಲಾಹ್(ಸ) ರವರ ಗುಣಗಳನ್ನು ವ್ಯಾಖ್ಯಾನಿಸಿದೆ.**

**ಸಯ್ಯದುನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಅಧ್ಯಾಪನೆ**

## ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ಖಾತಮುನ್ನಬಿಯ್ಯಿನ್ (ಪ್ರವಾದಿಗಳ ಮುದ್ರೆ) ಮತ್ತು ಖೈರುಲ್ ಮುರ್‌ಸಲೀನ್ (ಪ್ರವಾದಿಗಳಲ್ಲಿ ಅತ್ಯಂತ ಶ್ರೇಷ್ಠ) ಆಗಿದ್ದಾರೆ.

**"ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹ್"** (ಅಲ್ಲಾಹನಲ್ಲದೆ ಬೇರೆ ದೇವನಿಲ್ಲ. ಮುಹಮ್ಮದ್ ಅವನ ಪ್ರವಾದಿ) ಇದು ನಮ್ಮ ಧರ್ಮತತ್ವಗಳ ಸಾರಾಂಶವಾಗಿದೆ. ನಾವು ನಂಬಿಕೊಂಡು ಬಂದಿರುವುದು ಮತ್ತು ದೇವನ ಅನುಗ್ರಹದಿಂದ ನಂಬುತ್ತಾ ಈ ನಶ್ವರ ಲೋಕದಿಂದ ನಾವು ಅಗಲಿ ಹೋಗಲಿರುವುದು ಈ ವಿಶ್ವಾಸದೊಂದಿಗೆ ಆಗಿದೆ. ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ಖಾತಮುನ್ನಬಿಯ್ಯಿನ್ (ಪ್ರವಾದಿಗಳ ಮುದ್ರೆ) ಮತ್ತು ಖೈರುಲ್ ಮುರ್‌ಸಲೀನ್ (ಪ್ರವಾದಿಗಳಲ್ಲಿ ಅತ್ಯಂತ ಶ್ರೇಷ್ಠ) ಆಗಿದ್ದಾರೆ. ಅವರ ಹಸ್ತಗಳಿಂದ ಧರ್ಮವನ್ನು ಪರಿಪೂರ್ಣಗೊಳಿಸಲಾಗಿದೆ. ಪರಿಪೂರ್ಣತೆಗೆ ತಲುಪಿದ ಈ ಅನುಗ್ರಹದ ಮೂಲಕ ಮನುಷ್ಯನು ನೇರವಾದ ಮಾರ್ಗವನ್ನು ಅವಲಂಬಿಸಿ ದೇವನ ಸಮೀಪ ತಲುಪಲು ಸಾಧ್ಯ. ಪವಿತ್ರ ಖುರ್‌ಆನ್ ಎಲ್ಲ ದೈವಿಕ ಗ್ರಂಥಗಳಲ್ಲಿ ಅತ್ಯಂತ ಶ್ರೇಷ್ಠವಾದುದು (ಖಾತಮುಲ್ ಕುತುಬ್) ಎಂದು ನಾವು ನಂಬುತ್ತೇವೆ. ಅದರ ಉಪದೇಶಗಳು, ಅದರ ಆಜ್ಞೆಗಳು, ಅದು ನಿಷಿದ್ಧಗೊಳಿಸಿದ ಕಾರ್ಯಗಳು, ಅದು ಕಡ್ಡಾಯಗೊಳಿಸಿದ ಕಾರ್ಯಗಳು – ಇವುಗಳಲ್ಲಿ ಒಂದಿಷ್ಟು ಸಹ ಹೆಚ್ಚು ಕಮ್ಮಿ ಆಗಲಾರದು. ಪವಿತ್ರ ಖುರ್‌ಆನಿನ ಆಜ್ಞೆಗಳನ್ನು ತಿದ್ದುವ, ರದ್ದುಗೊಳಿಸುವ, ಬದಲಾಯಿಸುವ ಅಥವಾ ವ್ಯತ್ಯಾಸಗೊಳಿಸುವ ಯಾವುದೇ ದೈವಿಕ ನಿರ್ದೇಶ ಅಥವಾ ದೇವವಾಣಿ ಯಾರಿಗೂ ಉಂಟಾಗಲು ಸಾಧ್ಯವಿಲ್ಲವೆಂದು ಸಹ ನಾವು ನಂಬುತ್ತೇವೆ. ಯಾರಾದರೂ ಹಾಗೆ ಸಾಧ್ಯವಿದೆ ಎಂದು ಭಾವಿಸುವನಾದರೆ ಆತನು ನಮ್ಮ ಅಭಿಪ್ರಾಯದ ಪ್ರಕಾರ ಸತ್ಯವಿಶ್ವಾಸಿಗಳ ಸಮುದಾಯದಿಂದ ಹೊರಗಾದವನೂ ಅವಿಶ್ವಾಸಿಯೂ ಆಗುತ್ತಾನೆ. **(ಇಝಾಲೆ ಔಹಾಮ್; ರೂಹಾನೀ ಖಝಾಇನ್ ಸಂಪುಟ-3, ಪುಟ:169-170)**

## ಎಲ್ಲರಿಗಿಂತಲೂ ಧೈರ್ಯಶಾಲಿಯೂ ಚೈತನ್ಯಶಾಲಿಯೂ ದೇವನಿಂದ ಅತ್ಯಂತ ಹೆಚ್ಚು ಪ್ರೀತಿಸಲ್ಪಟ್ಟವರೂ ಆದ ಪ್ರವಾದಿ

ನಾವು ನ್ಯಾಯ ನೀತಿಯ ದೃಷ್ಟಿಯಿಂದ ಎಲ್ಲ ಪ್ರವಾದಿಗಳನ್ನು ನೋಡಿದರೆ ಅವರಲ್ಲಿ ಎಲ್ಲರಿಗಿಂತಲೂ ಧೈರ್ಯಶಾಲಿಯೂ ಚೈತನ್ಯಶಾಲಿಯೂ ದೇವನಿಂದ ಅತ್ಯಂತ ಹೆಚ್ಚು ಪ್ರೀತಿಸಲ್ಪಟ್ಟವರೂ ಆದ ಪ್ರವಾದಿಯಾಗಿ ನಾವು ಒಬ್ಬರನ್ನು ಮಾತ್ರ ಕಾಣುತ್ತೇವೆ. ಅವರೇ ಪ್ರವಾದಿಗಳ ನಾಯಕರಾದ ಹಝ್ರತ್ ಮುಹಮ್ಮದ್ ಮುಸ್ತಫಾ, ಅಹ್ಮದ್ ಮುಜ್ತಬಾ(ಸ). **(ಸಿರಾಜೆ ಮುನೀರ್; ರೂಹಾನೀ ಖಝಾಇನ್ ಸಂಪುಟ-12, ಪುಟ-82)**

## ಸದಾಕಾಲ ಆಧ್ಯಾತ್ಮಿಕ ಜೀವಿತವನ್ನು ಪ್ರದಾನ ಮಾಡಬಲ್ಲ, ವೈಭವ ಮತ್ತು ಪರಿಶುದ್ಧತೆಯ ಸಿಂಹಾಸನದಲ್ಲಿ ಆಸೀನರಾಗಿರುವ ಪ್ರವಾದಿ

ಎಲೈ ಭೂಮಿಯ ಎಲ್ಲೆಡೆಗಳಲ್ಲೂ ವಾಸಿಸುತ್ತಿರುವ ಜನರೇ, ಪೂರ್ವ ಪಶ್ಚಿಮಗಳಲ್ಲಿ ವಾಸಿಸುತ್ತಿರುವ ಮಾನವ ಆತ್ಮಗಳೇ, ನಾನು ನಿಮ್ಮೆಲ್ಲರನ್ನೂ ಬಹಳ ಒತ್ತಾಯಪೂರ್ವಕವಾಗಿ ಈ ಕಡೆಗೆ ಆಹ್ವಾನಿಸುತ್ತಿದ್ದೇನೆ: ಲೋಕದಲ್ಲಿ ಈಗಿರುವ ಸತ್ಯಧರ್ಮ ಇಸ್ಲಾಮ್ ಮಾತ್ರವಾಗಿದೆ ಮತ್ತು ಪವಿತ್ರ ಖುರ್‌ಆನ್ ವಿವರಿಸುವ ದೇವನೇ ಸತ್ಯದೇವನಾಗಿದ್ದಾನೆ. ಸದಾಕಾಲ ಆಧ್ಯಾತ್ಮಿಕ ಜೀವಿತವನ್ನು ಪ್ರದಾನ ಮಾಡಬಲ್ಲ, ವೈಭವ ಮತ್ತು ಪರಿಶುದ್ಧತೆಯ ಸಿಂಹಾಸನದಲ್ಲಿ ಆಸೀನರಾಗಿರುವ ಪ್ರವಾದಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಆಗಿದ್ದಾರೆ. **(ತಿರ್‌ಯಾಖುಲ್ ಖುಲೂಬ್; ರೂಹಾನೀ ಖಝಾಇನ್, ಸಂಪುಟ-15, ಪುಟ-141)**

## ಸರ್ವ ಲೋಕಗಳ ಮಾನವರಿಗೆ ಆಧ್ಯಾತ್ಮಿಕ ತರಬೇತಿ ನೀಡಲು ಆಗಮಿಸಿರುವ ಪ್ರವಾದಿ

ಅದಾಗ್ಯೂ ನಮ್ಮ ನಬಿ ಕರೀಮ್(ಸ) ಸರ್ವ ಲೋಕಗಳ ಮಾನವರಿಗೆ ಆಧ್ಯಾತ್ಮಿಕ ತರಬೇತಿ ನೀಡಲು ಆಗಮಿಸಿದ್ದರು. ಆ ಕಾರಣದಿಂದಲೇ ಹುಝೂರ್ ಅಲೈಹಿಸ್ಸಲಾತು ವಸ್ಸಲಾಮ್ ಈ ಗುಣದಲ್ಲಿ ಮಹೋನ್ನತ ಸ್ಥಾನ ಪಡೆದಿದ್ದರು. ಈ ಸ್ಥಾನಮಾನವೇ ಪವಿತ್ರ ಖುರ್‌ಆನ್ ಹಲವು ಕಡೆ ಹುಝೂರ್(ಸ) ರವರ ಬಗ್ಗೆ ಸಾಕ್ಷ್ಯ ವಹಿಸಿದೆ. ಅಲ್ಲಾಹನ ಗುಣಗಳಂತೆಯೇ ಪ್ರತಿಬಿಂಬವಾಗಿ, ಹಝ್ರತ್ ರಸೂಲುಲ್ಲಾಹ್(ಸ) ರವರ ಗುಣಗಳನ್ನು ವ್ಯಾಖ್ಯಾನಿಸಿದೆ. ಅಲ್ಲಾಹನು ಹೇಳಿದನು **ವಮಾಅರ್‌ಸಲ್‌ನಾಕ ಇಲ್ಲಾ ರಹ್‌ಮತನ್‌ಲಿಲ್ ಆಲಮೀನ್** (ಅಲ್‌ಅನ್ಬಿಯಾ: 108) ಮತ್ತು ನುಡಿದನು: **ಖುಲ್ ಯಾ ಅಯ್ಯುಹನ್ನಾಸು ಇನ್ನಿ ರಸೂಲುಲ್ಲಾಹಿ ಇಲೈಕುಮ್ ಜಮೀಅ. (ಅಲ್‌ಅರಾಫ್: 159)**

ಪವಿತ್ರ ಖುರ್‌ಆನಿನ ಇತರ ಸ್ಥಗಳಲ್ಲಿ ಪರಿಶೀಲಿಸಿ ನೋಡಿದಾಗ ತಿಳಿದು ಬರುವುದೇನೆಂದರೆ ಅಲ್ಲಾಹನು ಹಝ್ರತ್ ರಸೂಲುಲ್ಲಾಹ್(ಸ) ರವರನ್ನು ಅನಕ್ಷರಸ್ಥ (ಉಮ್ಮಿ) ಎಂದು ಕರೆದಿರುವನು. ಏಕೆಂದರೆ ಅಲ್ಲಾಹನ ಹೊರತು ಯಾರು ಅವರಿಗೆ ಗುರುವಾಗಿ ನಿಲ್ಲಲಿಲ್ಲ. ಅದಾಗ್ಯೂ ಅವರು ಅನಕ್ಷರಸ್ಥರಾಗಿದ್ದರು. ಹುಝೂರ್(ಸ) ದೀನಿನಲ್ಲಿ ಉಮ್ಮಿಯೂನ್ ಅನಕ್ಷರಸ್ಥ ಮಧ್ಯಮ ದರ್ಜೆಯ ಜನರಿಗೆ ಅಲ್ಲದೇ ಉನ್ನತ ದರ್ಜೆಯ ವಿದ್ವಾಂಸರನ್ನು ಮತ್ತು ಪಂಡಿತರನ್ನು ಸೇರಿಸಿದನು. ಇದರಿಂದ **ಖುಲ್ ಯಾ ಅಯ್ಯುಹನ್ನಾಸು ಇನ್ನಿ ರಸೂಲುಲ್ಲಾಹಿ ಇಲೈಕುಮ್ ಜಮೀಅ. (ಅಲ್‌ಅರಾಫ್:159)** ವಚನದ ಅರ್ಥಗರ್ಭಿತ ಜ್ಞಾನ ಭಾವಿಸಬಹುದಾಗಿದೆ. **ಜಮೀಅ** ವಿಧದ ಎರಡು ಅರ್ಥಗಳಿವೆ. ಮೊದಲನೆಯದಾಗಿ ಇಡೀ ಮಾನವ ಕುಲ ಅಥವಾ ಎಲ್ಲಾ ಸೃಷ್ಟಿ ಎಡನೆಯದಾಗಿ ಎಲ್ಲ ವರ್ಗಗಳ ಜನರಿಗಾಗಿ ಅರ್ಥಾತ್ ಮಧ್ಯಮ, ಕೆಳಸ್ತರ, ಉನ್ನತ ದರ್ಜೆಯ ವಿದ್ವಾಂಸರು ಮತ್ತು ಎಲ್ಲ ತರಹದ ಬುದ್ಧಿಮಟ್ಟ ಇರುವರಿಗೆ, ಒಟ್ಟಿನಲ್ಲಿ ಪ್ರತಿ ಬುದ್ಧಿ ಮಟ್ಟಉಳ್ಳವರ ಮತ್ತು ಪ್ರತಿ ವ್ಯವಹಾರಿಕ ಮನುಷ್ಯನು ಸಂಬಂಧ ಕಲ್ಪಿಸಬಹುದಾಗಿದೆ.

ಪವಿತ್ರ ಖುರ್‌ಆನ್ ಅಭ್ಯಸಿಸಿದಾಗ ಅಚ್ಚರಿಯಾಗುತ್ತದೆ. ಅದೇ ಅನಕ್ಷರಸ್ಥನು ಗ್ರಂಥವನ್ನೂ, ಜ್ಞಾನವನ್ನು ಮಾತ್ರ ತೋರಿಸಲಿಲ್ಲ. ಬದಲಾಗಿ ಮನಶುದ್ಧಿಯ ಮಾರ್ಗಗಳನ್ನು ತೋರಿಸಿದನು. ಎಲ್ಲಿಯವರೆಗೆ ಎಂದರೆ ಅವರಿಗೆ **ಅಯ್ಯದಹುಮ್ ಬಿರೂಹಿಲ್‌ಖುದುಸ್ (ಅಲ್‌ಮುಜಾದಲ: 23)** ಅಲ್ಲಾಹನು ಅವರ ಸತ್ಯವಿಶ್ವಾಸವನ್ನು ಅಚ್ಚೊತ್ತಿ ತನ್ನ ವಚನದಿಂದ ಅವರನ್ನು ಬಲಪಡಿಸಿದ್ದಾನೆ.)

ನೋಡಿರಿ ಮತ್ತು ವಿಚಾರ ಮಾಡಿ ನೋಡಿರಿ. ಪವಿತ್ರ ಖುರ್‌ಆನ್ ಎಲ್ಲ ಸ್ತರದವರಿಗೆ ಅವರ ಬೇಡಿಕೆಯಂತೆ ಸ್ಪಂಧಿಸಿದೆ. ಸನ್ಮಾರ್ಗ ಹಾಗೂ ಸತ್ಯಸಾಕ್ಷ್ಯಗಳ ದಾಹ ಉಳ್ಳವರಿಗೆ ಅವರ ತೃಷ್ಣೆಯನ್ನು ನೀಗಿಸಿದೆ. ಆದರೆ ಸ್ವಲ್ಪ ಯೋಚಿಸಿ ನೋಡಿ. ಈ ವಿವೇಕ ಮತ್ತು ಜ್ಞಾನದ ಸರೋವರ ಅಥವಾ ಸತ್ಯಸಂಧನತೆ ಹಾಗೂ ಪ್ರಕಾಶದ ಚಿಲುಮೆ ಯಾರಿಂದ ಉಂಟಾಗಿದೆ? ಅದೇ ಮುಹಮ್ಮದ್ ರಸೂಲುಲ್ಲಾಹ್(ಸ) ರವರನ್ನು ಒಂದೆಡೆ ಅನಕ್ಷರಸ್ಥರೆಂದು ಕರೆಯಲ್ಪಟ್ಟರು. ಇನ್ನೊಂದೆಡೆ ಮಹೋನ್ನತವಾದ ಸತ್ಯಸಾಕ್ಷ್ಯಗಳು ಅವರಿಂದ ಪ್ರಕಟವಾಗಿವೆ. ಲೋಕದ ಇತಿಹಾಸದಲ್ಲಿ ಇದರ ಉದಾಹರಣೆಯೂ ದೊರೆಯಲಾರದು. **(ಮಲ್‌ಫೂಝಾತ್, ಸಂಪುಟ-1, ಪುಟ-104, ಮುದ್ರಣ 2018 ಖಾದಿಯಾನ್)**

**ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉತ್ತಮ ಸ್ವಭಾವ ಗುಣಗಳ ಬಗ್ಗೆ ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾ ಹೇಳಿದ, ಸುವರ್ಣಾಕ್ಷರಗಳಲ್ಲಿ ಬರೆದಿಡಬಹುದಾದ ಹೇಳಿಕೆ ಈ ರೀತಿ ಇದೆ: ಕಾನ ಖುಲ್‌ಖುಹುಲ್ ಖುರ್‌ಆನ್.**

**ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಕಟ್ಟುನಿಟ್ಟಾಗಿ ಅನುಸರಿಸುವ ಮೂಲಕ ಮಾತ್ರ ಉತ್ತಮವಾದ ಪರಿಣಾಮ ಉಂಟಾಗುವುದು. ಕೇವಲ "ಲಾಇಲಾಹ ಇಲ್ಲಲ್ಲಾಹ್ ಮುಹಮ್ಮದುರ್ರಸೂಲುಲ್ಲಾಹ್" ಎಂಬ ಪೊಳ್ಳು ಘೋಷಣೆಗಳಿಂದ ಏನೂ ಸಾಧ್ಯವಾಗಲಾರದು.**

**ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದ್ದಾನೆ: ಖುಲ್ ಇನ್ ಕುನ್‌ತುಮ್ ತುಹಿಬ್ಬೂನಲ್ಲಾಹ ಫತ್ತಬಿಊನೀ ಯುಹ್‌ಬಿಬ್‌ಕುಮುಲ್ಲಾಹು ವ ಯಗ್‌ಫಿರ್‌ಲಕುಮ್ ಝುನೂಬಕುಮ್. ವಲ್ಲಾಹು ಗಫೂರುರ್ರಹೀಮ್. (ಆಲಿ ಇಮ್ರಾನ್:32) ಹೇಳು: ನೀವು ಅಲ್ಲಾಹನನ್ನು ಪ್ರೀತಿಸುವಿರಾದರೆ ನನ್ನನ್ನು ಅನುಸರಿಸಿರಿ. ಆಗ ಅಲ್ಲಾಹನು ನಿಮ್ಮನ್ನು ಪ್ರೀತಿಸುವನು ಮತ್ತು ನಿಮ್ಮ ಪಾಪಗಳನ್ನು ಕ್ಷಮಿಸುವನು. ಅಲ್ಲಾಹನು ಅತ್ಯಂತ ಕ್ಷಮಾಶೀಲನೂ ಕಾರುಣ್ಯನಿಧಿಯೂ ಆಗಿದ್ದಾನೆ.**

**ಆದರೆ ಈಗ ಅಲ್ಲಾಹನನ್ನು ಪ್ರೀತಿಸುವುದಕ್ಕೆ ಬದಲಾಗಿ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸುವುದಕ್ಕೆ ಬದಲಾಗಿ, ಲೌಕಿಕ ಲಾಭಗಳಿಸುವ ಪ್ರೀತಿಗೆ ಆದ್ಯತೆ ನೀಡಲಾಗುತ್ತಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸುವ ರೀತಿ ಹೀಗೆಯೋ?**

**ನಾನು ಸತ್ಯವಾಗಿ ಹೇಳುತ್ತೇನೆ, ನನ್ನ ಅನುಭವದ ಪ್ರಕಾರ ಹೇಳುತ್ತೇನೆ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸುವುದರಲ್ಲಿ ಸಂಪೂರ್ಣವಾಗಿ ತಲ್ಲೀನನಾಗುವವರೆಗೂ ವಾಸ್ತವಿಕ ಒಳಿತನ್ನು ಮಾಡುವವನಾಗಲು, ಅಲ್ಲಾಹನ ಸಂಪ್ರೀತಿ ಪಡೆಯುವವನಾಗಲು, ಅಲ್ಲಾಹನಂದ ಪಾರಿತೋಷಕ, ಸುಜ್ಞಾನ, ಕಶ್‌ಫ್ ಗಳಿಸುವಂತಹ ಆತ್ಮಪರಿಶುದ್ಧಿ ಗಳಿಸಲು ಸಾಧ್ಯವಿಲ್ಲ.**

**ಪ್ರವಾದಿ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉತ್ತುಂಗ ಸ್ಥಾನದ ಕುರಿತು ವಿಶ್ವಾಸವರ್ಧಕ ಪ್ರಸ್ತಾವನೆ**

ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವ ಸಲ್ಲಮರ ಉತ್ತುಂಗ ಸ್ಥಾನವನ್ನು ಕುರಿತು ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರ **20-10-2017** ರಂದು ನೀಡಿದ **ಜುಮುಅ ಖುತ್‌ಬ**. ಬದರ್ ವಾರಪತ್ರಿಕೆಯ ಪ್ರವಾದಿ ಮುಹಮ್ಮದ್[ಸ] ವಿಶೇಶ ಸಂಚಿಕೆಗಾಗಿ ಓದುಗರ ಹಿತದೃಷ್ಟಿಯಿಂದ ಪ್ರಕಟಿಸಲಾಗುತ್ತಿದೆ

ತಶಹ್ಹುದ್, ತಅವ್ವುಝ್ ಮತ್ತು ಸೂರಃ ಫಾತಿಹ ಪಠಿಸಿದ ನಂತರ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲ ಬಿನಸ್ರಿಹಿಲ್ ಅಝೀಝ್‌ರವರು ಹೀಗೆ ನುಡಿದರು:

ಇಂದಿನ ಕಾಲದಲ್ಲಿ ಎಲ್ಲದಕ್ಕಿಂತ ಹೆಚ್ಚು ದುರವಸ್ಥೆ ಮುಸ್ಲಿಮ್ ದೇಶಗಳದ್ದಾಗಿದೆ. ಅವರು ಒಬ್ಬರಿನ್ನೊಬ್ಬರ ಕೊರಳು ಕತ್ತರಿಸುವುದರಲ್ಲಿ ನಿರತರಾಗಿದ್ದಾರೆ. ಪ್ರತಿಯೊಬ್ಬನು **ಲಾಇಲಾಹ ಇಲ್ಲಲ್ಲಾಹ್** ಎಂದು ಹೇಳುತ್ತಾನೆ ಮತ್ತು **ಲಾಇಲಾಹ ಇಲ್ಲಲ್ಲಾಹ್** ಎಂದು ಹೇಳುವ ಇನ್ನೊಬ್ಬನನ್ನು ಕೊಲ್ಲುತ್ತಾನೆ. ಅವನ ಹಕ್ಕುಗಳನ್ನು ಅಪಹರಿಸುತ್ತಾನೆ. ಅವನಗೆ ಹಾನಿಯುಂಟು ಮಾಡಲು ಪ್ರಯತ್ನಿಸುತ್ತಾನೆ. ಏನು, ಈ ಜನರ ವರ್ತನೆ ಪವಿತ್ರ ಖುರ್‌ಆನಿನ ಉಪದೇಶಗಳಿಗೆ ಅನುಸಾರವಾಗಿದೆಯೇ? ಈ ಜನರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಸುಂದರ ನಡೆವಳಿಕೆಗಳನ್ನು ಅನುಸರಿಸುತ್ತಿದ್ದಾರೆಯೇ?

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉತ್ತಮ ಸ್ವಭಾವ ಗುಣಗಳ ಬಗ್ಗೆ ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾ ಹೇಳಿದ, ಸುವರ್ಣಾಕ್ಷರಗಳಲ್ಲಿ ಬರೆದಿಡಬಹುದಾದ ಹೇಳಿಕೆ ಈ ರೀತಿ ಇದೆ: **ಕಾನ ಖುಲ್‌ಖುಹುಲ್ ಖುರ್‌ಆನ್**. (ಮಸ್ನದ್ ಇಮಾಮ್ ಅಹ್ಮದ್ ಬಿನ್ ಹಂಬಲ್, ಸಂಪುಟ-8, ಪುಟ-305, ಹದೀಸ್-25816, ಆಲಿಮುಲ್ ಕುತುಬುಲ್ ಇಲ್‌ಮಿಯ ಬೈರೂತ್ 1998)

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸ್ವಭಾವಗುಣಗಳು ಹೇಗಿತ್ತೆಂದು ತಿಳಿಯಲು ಬಯಸುವುದಾದರೆ ಪವಿತ್ರ ಖುರ್‌ಆನ್‌ನಲ್ಲಿ ಅವರ ಸ್ವಭಾವಗಳ ವಿವರಣೆಗಳಿವೆ. ಅದರಲ್ಲಿ ಓದಿರಿ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಮಾದರಿಯನ್ನು ಸ್ಥಾಪಿಸಿದುದು ತನ್ನ ಅನುಯಾಯಿಗಳು ಅವುಗಳನ್ನು ಅನುಸರಿಸಲಿಕ್ಕೋಸ್ಕರವಾಗಿದೆ. ತನ್ನ ಅನುಯಾಯಿಗಳು ಕೇವಲ ಘೋಷಣೆ ಕೂಗುವವರು ಮಾತ್ರ ಆಗಬಾರದೆಂದು ಅವರು ಇಚ್ಛಿಸಿದ್ದರು. ಅಲ್ಲಾಹನು ಹೇಳಿದ್ದಾನೆ, ನನ್ನೊಂದಿಗೆ ವಾಸ್ತವಿಕ ಸಂಬಂಧ ಕೇವಲ **ಲಾಇಲಾಹ ಇಲ್ಲಲ್ಲಾಹ್** ಎಂದು ಹೇಳುವುದರಿಂದ ಆಗಲಾರದು. ನನ್ನ ಪ್ರೀತಿಯನ್ನು ನೀವು ಗಳಿಸಬೇಕಾದರೆ ನೀವು ನನಗೆ ಪ್ರಿಯಕರನಾದ ಸಂದೇಶವಾಹಕನನ್ನು ಅನುಸರಿಸಬೇಕು. ಅವರ ಸ್ವಭಾವಗುಣಗಳನ್ನು ತಮ್ಮಲ್ಲಿ ಅಳವಡಿಸಬೇಕು. ಹಾಗೆ ಮಾಡುವವರು ಮಾತ್ರ ನನಗೆ ಪ್ರಿಯರಾಗುವರು. ನಿಮಗೆ ಅಲ್ಲಾಹನ ಸಾಮೀಪ್ಯಗಳಿಸುವ ಸ್ಥಾನ ಸಿಗುವುದು. ಹಾಗೆ ಮಾಡದೆ ಕೇವಲ ಘೋಷಣೆ ಕೂಗುವುದು ಪೊಳ್ಳುತನವಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದ್ದಾನೆ: **ಖುಲ್ ಇನ್ ಕುನ್‌ತುಮ್ ತುಹಿಬ್ಬೂನಲ್ಲಾಹ ಫತ್ತಬಿಊನೀ ಯುಹ್‌ಬಿಬ್‌ಕುಮುಲ್ಲಾಹು ವ ಯಗ್‌ಫಿರ್‌ಲಕುಮ್ ಝುನೂಬಕುಮ್. ವಲ್ಲಾಹು ಗಫೂರುರ್ರಹೀಮ್. (ಆಲಿ ಇಮ್ರಾನ್:32)** ಹೇಳು: ನೀವು ಅಲ್ಲಾಹನನ್ನು ಪ್ರೀತಿಸುವಿರಾದರೆ ನನ್ನನ್ನು ಅನುಸರಿಸಿರಿ. ಆಗ ಅಲ್ಲಾಹನು ನಿಮ್ಮನ್ನು ಪ್ರೀತಿಸುವನು ಮತ್ತು ನಿಮ್ಮ ಪಾಪಗಳನ್ನು ಕ್ಷಮಿಸುವನು. ಅಲ್ಲಾಹನು ಅತ್ಯಂತ ಕ್ಷಮಾಶೀಲನೂ ಕಾರುಣ್ಯನಿಧಿಯೂ ಆಗಿದ್ದಾನೆ.

ಅಲ್ಲಾಹನು ಯಾರನ್ನು ಪ್ರೀತಿಸುತ್ತಿರುವನೋ ಅವನ ಸ್ಥಿತಿ ಇಂದಿನ ಕಾಲದ ಮುಸ್ಲಿಮರ ಸ್ಥಿತಿಯಂತೆ ಆಗಲು ಸಾಧ್ಯವೇ? ಅಲ್ಲಾಹನ ಸಾಮೀಪ್ಯಗಳಿಸಿದವರೂ ಅಲ್ಲಾಹನ ಪ್ರೀತಿಗೆ ಪಾತ್ರರಾದವರೂ ಎಂದು ಸಾಮಾನ್ಯವಾಗಿ ಮುಸ್ಲಿಮರು ಗಣಿಸುವ ಮತಪಂಡಿತರು ಲೋಕದಲ್ಲಿ ಅತ್ಯಂತ ಹೆಚ್ಚು ಕಲಹಗಳನ್ನು ಹುಟ್ಟಿಸುತ್ತಾ ಇದ್ದಾರೆ. ಇಂದಿನ ಕಾಲದ ಮುಸ್ಲಿಮ್ ಪಂಡಿತರ ಸಾಮಾನ್ಯ ಸ್ಥಿತಿ ಹೇಗಿದೆ ಎಂದರೆ ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಡೆವಳಿಕೆಗಳ ಬಗ್ಗೆ ವಾಸ್ತವಿಕತೆಗಳನ್ನು ವಿವರಿಸಿ ಕೊಡುವ ಒಬ್ಬ ಮಹಾನುಭಾವರ ಆಗಮನದ ಆವಶ್ಯಕತೆಯನ್ನು ಸೂಚಿಸುತ್ತಿದೆ. ಅಂತಹ ಮಹಾನುಭಾವರನ್ನು ಅಲ್ಲಾಹನು ತನ್ನ ವಾಗ್ದಾನ ಪ್ರಕಾರ ಕಳುಹಿಸಿ ಕೊಟ್ಟಿರುವನು. ಆದರೆ ಮತಪಂಡಿತರು ಆ ಮಹಾನುಭಾವರ ಮಾತುಗಳನ್ನು ಆಲಿಸಲು ಇಚ್ಛಿಸುವುದಿಲ್ಲ ಮತ್ತು ಜನರನ್ನು ಆಲಿಸಲು ಬಿಡುವುದೂ ಇಲ್ಲ. ಬದಲಾಗಿ ಅವರು ಅಲ್ಲಾಹನಿಂದ ಆಗಮಿಸಿದವರ ವಿರುದ್ಧ ಕುಫ್ರ್ ಫತ್ವ ಹೊರಡಿಸಿ

ಸಾಮೂಹಿಕವಾಗಿ ಭಯಭೀತಿ, ಕಲಹ ಗೊಂದಲ ಹಿಂಸಾಚಾರಗಳ ಪರಿಸ್ಥಿತಿಯನ್ನು ಉಂಟುಮಾಡಿದರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ಲೌಕಿಕ ಆಶಾಭಿಲಾಷೆಗಳನ್ನು ಈಡೇರಿಸಲು ಮತ್ತು ತನ್ನ ಹೆಮ್ಮೆಯನ್ನು ಪ್ರಕಟಿಸಲು ಅಹ್ಮದಿಯಾ ಜಮಾಅತನ್ನು ಸ್ಥಾಪಿಸಿದರೆಂದು (ನಊಧುಬಿಲ್ಲಾಹ್) ಇವರು ಪ್ರತಿದಿನ ಆಕ್ಷೇಪ ಎತ್ತುತ್ತಾರೆ.

ಆದರೆ ನಮಗೆ ಚೆನ್ನಾಗಿ ತಿಳಿದಿದೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧನಾದ ಪ್ರೇಮಿಯಾಗಿದ್ದರೆಂದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಶರೀಅತನ್ನು ಪೂರ್ಣವಾಗಿ ಲೋಕದಲ್ಲಿ ಸ್ಥಾಪಿಸಲಿಕ್ಕಾಗಿಯೇ ಅಲ್ಲಾಹನು ಅವರನ್ನು ಕಳುಹಿಸಿರುವನೆಂದು. ಪವಿತ್ರ ಖುರ್ಆನ್‌ನಲ್ಲಿ ಅಡಕವಾಗಿರುವ ಸುಜ್ಞಾನಗಳು ನಮಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮೂಲಕವೇ ದೊರಕಿತು. ಪ್ರತಿಯೊಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಪವಿತ್ರ ಖುರ್ಆನ್ ಮೂಲಕವೇ ನಮಗೆ ಮಾರ್ಗದರ್ಶನವನ್ನು ನೀಡಿದರು. ಅವರು ಪವಿತ್ರ ಖುರ್ಆನಿನ **"ಖುಲ್‌ಇನ್ ಕುನ್‌ತುಮ್ ತುಹಿಬ್ಬೂನಲ್ಲಾಹ ಫತ್ತಬಿಊನೀ ಯುಹ್‌ಬಿಬ್‌ಕುಮುಲ್ಲಾಹ್"** ಎಂಬ ವಚನವನ್ನು ವಿವಿಧ ಸಂದರ್ಭಗಳಲ್ಲಿ ವಿವಿಧ ಕೋನಗಳಿಂದಲೂ ವಿವಿಧ ಅರ್ಥ ವ್ಯಾಖ್ಯಾನಗಳಿಂದಲೂ ವಿವರಿಸಿದರು. ಇವು ಅಲ್ಲಾಹನ ಸಾಮೀಪ್ಯ ಲಭಿಸುವಂತೆ ಮಾಡುವವುಗಳು, ಅವನ ಪ್ರೀತಿಗಳಿಸುವಂತೆ ಮಾಡುವವುಗಳು, ಕಲಹಗೊಂದಲಗಳಿಂದ ಹೊರಗೆ ತರುವವುಗಳೂ ಆಗಿವೆ. ಮುಸ್ಲಿಮರಿಗೆ ಬದುಕಿ ಬಾಳಲು, ತಮ್ಮ ದೇಶಗಳಲ್ಲಿ ಶಾಂತಿ ಸ್ಥಾಪಿಸಲು, ಇಸ್ಲಾಮಿನ ವೈಭವವನ್ನು ಲೋಕದ ಮುಂದೆ ಪ್ರಕಟಿಸಲು ಇವುಗಳ ಹೊರತು ಬೇರೆ ಯಾವ ಮಾರ್ಗವೂ ಇರುವುದಿಲ್ಲ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಕಟ್ಟುನಿಟ್ಟಾಗಿ ಅನುಸರಿಸುವ ಮೂಲಕ ಮಾತ್ರ ಉತ್ತಮವಾದ ಪರಿಣಾಮ ಉಂಟಾಗುವುದು. ಕೇವಲ **"ಲಾಇಲಾಹ ಇಲ್ಲಲ್ಲಾಹ್ ಮುಹಮ್ಮದುರ್ರಸೂಲುಲ್ಲಾಹ್"** ಎಂಬ ಪೊಳ್ಳು ಘೋಷಣೆಗಳಿಂದ ಏನೂ ಸಾಧ್ಯವಾಗಲಾರದು.

ಪವಿತ್ರ ಖುರ್ಆನಿನ, ಮೇಲೆ ಪ್ರಸ್ತಾಪಿಸಿದ ವಚನಕ್ಕೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನೀಡಿದ ವ್ಯಾಖ್ಯಾನಗಳಿಂದ ಕೆಲವು ಉಲ್ಲೇಖಗಳನ್ನು ಈಗ ನಾನು ನಿಮ್ಮ ಮುಂದಿರಿಸುತ್ತೇನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

"ಮುಸ್ಲಿಮರ ಆಂತರಿಕ ಒಡಕುಗಳಿಗೆ ಕಾರಣ ಹುಬ್ಬುದ್ದುನ್‌ಯಾ (ಲೌಕಿಕ ಲಾಭದ ಪ್ರೀತಿ) ಆಗಿದೆ. ಅಲ್ಲಾಹನ ಪ್ರೀತಿಯನ್ನು ಗಳಿಸುವುದಕ್ಕೆ ಆದ್ಯತೆ ನೀಡುವವರಾಗಿದ್ದರೆ ಅವರು, ಈ ಪಂಗಡದ ತತ್ವಗಳು ಹೆಚ್ಚು ಸ್ಪಷ್ಟವಾಗಿವೆ ಎಂದು ಯೋಚಿಸಿ ಅವುಗಳನ್ನು ಸ್ವೀಕರಿಸುತ್ತಿದ್ದರು. ಮತ್ತು ಒಟ್ಟಿಗೆ ಸೇರುತ್ತಿದ್ದರು. ಲೌಕಿಕ ಲಾಭದ ಬಗ್ಗೆ ಪ್ರೀತಿಯ ಕಾರಣ ಮುಸ್ಲಿಮರಲ್ಲಿ ಈ ಕೆಡುಕುಗಳು ತಲೆದೋರಿರುವಾಗ, ಅವರ ಹೆಜ್ಜೆಗಳು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹೆಜ್ಜೆ ಗುರುತುಗಳ ಮೇಲೆ ಇಲ್ಲದಿರುವಾಗ ಇಂತಹ ಜನರನ್ನು ಮುಸ್ಲಿಮರೆಂದು ಹೇಳುವುದಾದರೂ ಹೇಗೆ? ಅಲ್ಲಾಹನು ಹೇಳಿರುವುದು **"ಖುಲ್ ಇನ್ ಕುನ್‌ತುಮ್ ತುಹಿಬ್ಬೂನಲ್ಲಾಹ ಫತ್ತಬಿಊನೀ ಯುಹ್‌ಬಿಬ್‌ಕುಮುಲ್ಲಾಹ್"** ನೀವು ಅಲ್ಲಾಹನನ್ನು ಪ್ರೀತಿಸಲು ಇಚ್ಛಿಸುವುದಾದರೆ ನನ್ನನ್ನು ಅನುಸರಿಸಿರಿ ಆಗ ಅಲ್ಲಾಹನು ನಮ್ಮ ಸ್ನೇಹಿತನಾಗುವನು ಎಂದು ಹೇಳಬೇಕೆಂದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಅಲ್ಲಾಹನು ಹೇಳಿರುವನು. ಆದರೆ ಈಗ ಅಲ್ಲಾಹನನ್ನು ಪ್ರೀತಿಸುವುದಕ್ಕೆ ಬದಲಾಗಿ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸುವುದಕ್ಕೆ ಬದಲಾಗಿ, ಲೌಕಿಕ ಲಾಭಗಳಿಸುವ ಪ್ರೀತಿಗೆ ಆದ್ಯತೆ ನೀಡಲಾಗುತ್ತಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸುವ ರೀತಿ ಹೀಗೆಯೋ? ಏನು, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಲೌಕಿಕ ಲಾಭವೇ ಹೆಚ್ಚಾಗಿದ್ದರೇ? ನಊಧುಬಿಲ್ಲಾಹ್– ಅವರು ಬಡ್ಡಿಕೋರರಾಗಿದ್ದರೆ? ಅಲ್ಲಾಹನ ಆಜ್ಞೆಗಳನ್ನು ಪಾಲಿಸುವ ಬಗ್ಗೆ ನಿರ್ಲಕ್ಷ್ಯತೆ ಹೊಂದಿದ್ದರೆ? ಮಆದಲ್ಲಾಹ್ – ಅವರಲ್ಲಿ ನಿಫಾಖ್ (ಕಾಪಟ್ಯ) ವಿತ್ತೇ? ಅವರು ಪರರನ್ನು ಮೆಚ್ಚಿಸುತ್ತಿದ್ದರೆ? ಲೌಕಿಕ ಕಾರ್ಯಗಳಿಗೆ ಧಾರ್ಮಿಕ ಕಾರ್ಯಗಳ ಮೇಲೆ ಆದ್ಯತೆ ನೀಡುತ್ತಿದ್ದರೆ? ಆದುದರಿಂದ ನೀವು ಯೋಚಿಸಿರಿ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹೆಜ್ಜೆ ಗುರುತುಗಳ ಮೇಲೆ ನಡೆಯುವುದೇ ಅವರ ಅನುಸರಣೆಯಾಗಿದೆ. ಹಾಗೆ ಮಾಡಿದರೆ ಅಲ್ಲಾಹನು ಎಂತೆಂತಹ ಅನುಗ್ರಹಗಳನ್ನು ನೀಡುವನೆಂದು ಕಂಡರಿಯಿರಿ. (ಮಲ್‌ಫೂಝಾತ್, ಸಂಪುಟ–8, ಪುಟ–348–349, ಮುದ್ರಣ 1985, ಇಂಗ್ಲೆಂಡ್)

ಇಂದಿನ ಕಾಲದಲ್ಲಿ ಮುಸ್ಲಿಮರು ಮಾಡುತ್ತಿರುವ ಕೆಲಸಗಳು ಮತ್ತು ಅವುಗಳ ವಿರುದ್ಧ ಅಲ್ಲಾಹನು ನೀಡುತ್ತಿರುವ ಕ್ರಿಯಾತ್ಮಕ ಸಾಕ್ಷ್ಯಗಳು ಮುಸ್ಲಿಮರ ಸ್ಥಿತಿ ಬಹಳ ಕೆಟ್ಟು ಹೋಗಿದೆ ಎಂಬುದನ್ನು ಸೂಚಿಸುತ್ತದೆ. ಮುಸ್ಲಿಮ್ ದೇಶಗಳು ಮುಸ್ಲಿಮ್ ದೇಶದ ವಿರುದ್ಧ ಹೋರಾಡುತ್ತಿವೆ. ಮುಸ್ಲಿಮ್ ದೇಶಗಳು ಅನ್ಯರ ಮುಂದೆ ಹೋಗಿ ಇತರ ಮುಸ್ಲಿಮ್ ದೇಶಗಳ ವಿರುದ್ಧ ಹೋರಾಡಲು ಆಯುಧ ಭಿಕ್ಷೆ ಬೇಡುತ್ತಿವೆ.

ಈಗ, ಕಳೆದ ದಿನಗಳಲ್ಲಿ ಅಮೇರಿಕಾದ ಅಧ್ಯಕ್ಷರು ಇರಾನ್‌ನ ಮೇಲೆ ಮತ್ತೆ ನಿರ್ಬಂಧಗಳನ್ನು ಹೇರಲು ಘೋಷಣೆ ನೀಡಿದ್ದಾರೆ ಅದರ ಬಗ್ಗೆ ಕಾರ್ಯಗಳನ್ನು ನಡೆಸುತ್ತಿದ್ದಾರೆ ಇದಕ್ಕೆ ಇಡೀ ಯೂರೋಪ್, ಯುರೋಪಿಯನ್ ಯೂನಿಯನ್ ಮತ್ತು ಇತರ ದೇಶಗಳು ವಿರುದ್ಧವಾಗಿವೆ. ಮತ್ತು ಇಲ್ಲಿ ಇಂಗ್ಲೆಂಡಿನಲ್ಲಿ, ಇಂಗ್ಲಿಷ್ ಅಂಕಣಕಾರರು ಅಮೇರಿಕಾದ ಅಧ್ಯಕ್ಷನ ಈ ಕೆಲಸಕ್ಕೆ ಇಡೀ ಜಗತ್ತು ವಿರುದ್ಧವಾಗಿದೆ ಎಂದು ಬರೆದಿದ್ದಾರೆ, ಯುನೈಟೆಡ್ ಸ್ಟೇಟ್ಸ್ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳುವ ಮೂರು ದೇಶಗಳನ್ನು ಹೊರತುಪಡಿಸಿ. ಒಂದು ಸ್ವತಃ ಯುನೈಟೆಡ್ ಸ್ಟೇಟ್ಸ್, ಒಂದು ಇಸ್ರೇಲ್ ಮತ್ತು ಇನ್ನೊಂದು ಸೌದಿ ಅರೇಬಿಯಾ ಆಗಿದೆ. ಈಗ ಸೌದಿ ಅರೇಬಿಯಾ ಮುಸ್ಲಿಮೇತರ ದೇಶಕ್ಕೆ ಮುಸ್ಲಿಮ್ ದೇಶದ ವಿರುದ್ಧ ಹೋರಾಡಲು ಅವಕಾಶ ನೀಡುತ್ತದ್ದಲ್ಲದೆ ಅದನ್ನು ಬೆಂಬಲಿಸುತ್ತಿದೆ. ಆದ್ದರಿಂದ ಇವು ಮುಸ್ಲಿಮರ ಪರಿಸ್ಥಿತಿಯಾಗಿದೆ ಇದರ ಚಿತ್ರವನ್ನೇ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನೀಡುತ್ತಾ ಹೇಳಿರುವುದು, ನೀವು ಒಡಕನ್ನು ಹೊಂದಿದವರಾಗಿರುವಿರಿ. ಮತ್ತೆ ನೀವು ಅಲ್ಲಾಹನ ಅನುಗ್ರಹವನ್ನು ಹೇಗೆ ತಾನೆ ಗಳಿಸಬಲ್ಲಿರಿ ಎಂದು.

ವಾಸ್ತವಿಕ ಒಳಿತನ್ನು ಗಳಿಸುವುದು ಹೇಗೆ ಎನ್ನುವುದರ ಬಗ್ಗೆ. ಅಲ್ಲಾಹನ ಅನುಗ್ರಹಗಳನ್ನು ಹೇಗ ಪಡೆಯಬಹುದು ಎಂಬುದನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ನಾನು ಸತ್ಯವಾಗಿ ಹೇಳುತ್ತೇನೆ, ನನ್ನ ಅನುಭವದ ಪ್ರಕಾರ ಹೇಳುತ್ತೇನೆ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸುವುದರಲ್ಲಿ ಸಂಪೂರ್ಣವಾಗಿ ತಲ್ಲೀನನಾಗುವವರೆಗೂ ವಾಸ್ತವಿಕ ಒಳಿತನ್ನು ಮಾಡುವವನಾಗಲು, ಅಲ್ಲಾಹನ ಸಂಪ್ರೀತಿ ಪಡೆಯುವವನಾಗಲು, ಅಲ್ಲಾಹನಂದ ಪಾರಿತೋಷಕ, ಸುಜ್ಞಾನ, ಕಶ್‌ಫ್ ಗಳಿಸುವಂತಹ ಆತ್ಮಪರಿಶುದ್ಧಿ ಗಳಿಸಲು ಸಾಧ್ಯವಿಲ್ಲ. ಇದಕ್ಕೆ ಪುರಾವೆ ಪವಿತ್ರ ಖುರ್ಆನ್‌ನಿಂದ ಲಭಿಸುತ್ತದೆ. **"ಖುಲ್ ಇನ್‌ಕುನ್‌ತುಮ್ ತುಹಿಬ್ಬೂನಲ್ಲಾಹ ಫತ್ತಬಿಊನೀ ಯುಹ್‌ಬಿಬ್‌ಕುಮುಲ್ಲಾಹ್"**. (ಮಲ್‌ಫೂಝಾತ್ ಸಂಪುಟ–1, ಪುಟ–204, ಮುದ್ರಣ 1985, ಇಂಗ್ಲೆಂಡ್) ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಲ್ಲಾಹನ ಈ ಹೇಳಿಕೆಯ ಜೀವಂತ ಸಾಕ್ಷ್ಯಾಧಾರ ಈ ಕಾಲದಲ್ಲಿ ನಾನಾಗಿದ್ದೇನೆ. ನಾನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸುವುದರಲ್ಲಿ ತಲ್ಲೀನನಾದ ಕಾರಣ ಅಲ್ಲಾಹನು ನನ್ನೊಂದಿಗೆ ಪ್ರೀತಿಯಿಂದ ವರ್ತಿಸಿದನು. ನನ್ನೊಂದಿಗೆ ಮಾತನಾಡಿದನು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸ್ಥಾನವನ್ನು ತಗ್ಗಿಸಿದ್ದಾರೆ ಎಂಬ ದೋಷಾರೋಪಕ್ಕೆ ಉತ್ತರ ನೀಡುತ್ತಾ ಅವರು ಹೇಳಿದರು: 'ನನಗೆ ದೊರಕಿದ ಸ್ಥಾನವು ನಾನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಪ್ರೀತಿಸಿ ಅವರನ್ನು ಪರಿಪೂರ್ಣವಾಗಿ ಅನುಸರಿಸುವುದರಿಂದ ಲಭಿಸಿದ್ದಾಗಿದೆ. ಅಲ್ಲಾಹನು ನನಗೆ ಅನುಗ್ರಹ ನೀಡಿದನು. ಪ್ರೀತಿಗೆ ಪಾತ್ರರಾದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಪ್ರೀತಿಸಿದುದರಿಂದ ಅಲ್ಲಾಹನು ನನ್ನನ್ನು ತನ್ನ ಪ್ರೀತಿಗೆ ಪಾತ್ರನನ್ನಾಗಿ ಮಾಡಿದನು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ನಷ್ಟವಾಗಿರುವ ವೈಭವವನ್ನು ಪುನಃ ಸ್ಥಾಪಿಸಲು ಪವಿತ್ರ ಖುರ್ಆನಿನ ಸತ್ಯತೆಯನ್ನು ಲೋಕಕ್ಕೆ ತೋರಿಸಿ ಕೊಡಲು ನನ್ನನ್ನು ಅಲ್ಲಾಹನು ಕಳುಹಿಸಿರುವನು.' (ಮಲ್‌ಫೂಝಾತ್, ಸಂಪುಟ–5, ಪುಟ–14, ಮುದ್ರಣ 1985, ಇಂಗ್ಲೆಂಡ್)

ಮತ್ತೊಂದೆಡೆ ಈ ಆಯತನ್ನು ವ್ಯಾಖ್ಯಾನಸುತ್ತ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

"ಅವರನ್ನು ನೀವು ಹೇಳಿರಿ ನೀವು ದೇವರಿಂದ ಪ್ರೀತಿಸಬೇಕೆಂದು ಮತ್ತು ನಿಮ್ಮ ಪಾಪಗಳನ್ನು ಕ್ಷಮಿಸಬೇಕೆಂದಾದರೆ, ನನಗೆ ವಿಧೇಯರಾಗುವುದು ಒಂದೇ ಮಾರ್ಗವಾಗಿದೆ." (ಈ ಆಯತ್‌ನ

ಅನುವಾದವಾಗಿದೆ) ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನನ್ನನ್ನು ಅನುಸರಿಸುವುದು ದೈವಿಕ ಕರುಣೆಯನ್ನು ನಿರಾಶೆಗೊಳಿಸಲು ಅನುಮತಿಸದ ವಿಳಯ ಎಂದರೇನು? ಇದು ಪಾಪಗಳ ಕ್ಷಮೆಗೆ ಕಾರಣವಾಗಿದೆ ಮತ್ತು ಅದನ್ನು ಅಲ್ಲಾಹನ ಪ್ರಿಯನನ್ನಾಗಿ ಮಾಡುತ್ತದೆ." (ಪ್ರವಾದಿ(ಸ) ಅವರನ್ನು ಅನುಸರಿಸುವುದು ಪಾಪಗಳ ಕ್ಷಮೆಗೆ ಕಾರಣವಾಗಿದೆ ಮತ್ತು ಅದು ಮಾತ್ರವಲ್ಲದೆ ಅಲ್ಲಾಹನ ಪ್ರಿಯನೂ ಆಗಿದೆ) ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ, "ಮತ್ತು ನೀವು ನನ್ನನ್ನು ಅನುಸರಿಸಿದರೆ ನಾವು ಅಲ್ಲಾಹನನ್ನು ಪ್ರೀತಿಸುತ್ತೇವೆ ಎಂಬ ನಿಮ್ಮ ಹೇಳಿಕೆ ಸರಿ ಮತ್ತು ನಿಜವಾಗುತ್ತದೆ." (ಅಂದರೆ, ಪ್ರವಾದಿ(ಸ) ಅವರನ್ನು ಅನುಸರಿಸಿ). ಮತ್ತೆ ಅವರು(ಅ) ಹೇಳುತ್ತಾರೆ: ಮನುಷ್ಯನು ಸರ್ವಶಕ್ತನಾದ ಅಲ್ಲಾಹನ ಪ್ರಿಯನಾಗಲು ಸಾಧ್ಯವಿಲ್ಲ ಮತ್ತು ಯಾವುದೇ ವ್ಯಕ್ತಿಯಿಂದ ಅವನಿಗೆ ಹತ್ತಿರವಾಗಲು ಅರ್ಹನಲ್ಲ ಎಂಬುದು ಈ ಆಯತ್‌ನಿಂದ ಸ್ಪಷ್ಟವಾಗಿದೆ. ಅವರ ಸ್ವ-ಶೈಲಿಯ ರೂಪಗಳ ಕಠಿಣತೆ ಮತ್ತು ಜಪದಿಂದ ಅಲ್ಲಾಹನಿಗೆ ಸಮೀಪಿಸುವುದು ಸಾಧ್ಯವಿಲ್ಲ. ಪ್ರವಾದಿ ಮುಹಮ್ಮದ್(ಸ) ಅವರಿಗೆ ವಿಧೇಯತೆಯಲ್ಲಿ ತಲ್ಲೀನನಾದರೆ ಮಾತ್ರ ಆತನು ಅಲ್ಲಾಹನ ಅನುಗ್ರಹಗಳಿಗೆ ಹಾಗೂ ಅಲ್ಲಾಹನ ಪ್ರಕಾಶಕ್ಕೆ ಪಾತ್ರನಾಗುವನು. ಮತ್ತು ಪ್ರವಾದಿ(ಸ) ರವರ ಪ್ರೀತಿಯಲ್ಲಿ ತನ್ನನ್ನು ತಾನು ಕಳೆದುಕೊಂಡವನು ಮತ್ತು ವಿಧೇಯತೆ ಹಾಗೂ ಅವರನ್ನು ಅನುಸರಿಸುವುದರಲ್ಲಿ ಅವನು ತನ್ನ ಜೀವನದ ಮೇಲೆ ಎಲ್ಲಾ ರೀತಿಯ ಮರಣವು ಉಂಟು ಮಾಡಿಕೊಂಡರೆ, ಅವನಿಗೆ ನಂಬಿಕೆ, ಪ್ರೀತಿ ಮತ್ತು ಪ್ರೀತಿಯ ಪ್ರಕಾಶವನ್ನು ನೀಡಲಾಗುತ್ತದೆ, ಅದು ಅವನನ್ನು ಅಲ್ಲಾಹನನ್ನು ಹೊರತುಪಡಿಸಿ ಮುಕ್ತಗೊಳಿಸುತ್ತಾನೆ ಮತ್ತು ಪಾಪಗಳಿಂದ ಮೋಕ್ಷ ಮತ್ತು ವಿಮೋಚನೆಗೆ ಕಾರಣವಾಗುತ್ತದೆ. ಈ ಜಗತ್ತಿನಲ್ಲಿ ಅವನು ಶುದ್ಧ ಜೀವನವನ್ನು ಕಂಡುಕೊಳ್ಳುತ್ತಾನೆ ಮತ್ತು ಇಂದ್ರಿಯಾಸಕ್ತಿಗಳ ಅಂಧಕಾರದ ಗೋರಿಗಳಿಂದ ಹೊರತಗೆಯಲ್ಪಡುತ್ತಾನೆ. ಈ ಹದೀಸ್ ಇದನ್ನೇ ಸೂಚಿಸುತ್ತದೆ. (ಪ್ರವಾದಿ(ಸ) ಹೇಳಿದರು. **"ಅನಲ್‌ಹಾಶಿರುಲ್ಲಝಿ ಯುಹ್‌ಶರುನ್ನಾಸು ಅಲಾ ಖದಮೀ"** ಅಂದರೆ, ಜನರನ್ನು ಸತ್ತವರಲ್ಲಿ ಎಬ್ಬಿಸುವವನು ನಾನು." (ಮಾಲ್‌ಫೂಝಾತ್, ಸಂಪುಟ-2, ಪುಟ-183, ಆವೃತ್ತಿ 1985, ಇಂಗ್ಲೆಂಡ್) ಆಧ್ಯಾತ್ಮಿಕ ಸತ್ತವರನ್ನು ಎಬ್ಬಿಸುವವರಾಗಿದ್ದಾರೆ. ನಿಮ್ಮನ್ನು ಅನುಸರಿಸುವವರನ್ನು ಸರ್ವಶಕ್ತನಾದ ಅಲ್ಲಾಹನು ಪ್ರೀತಿಸಲಿದ್ದಾನೆ.

ಮತ್ತೊಂದೆಡೆ ಈ ಆಯತನ್ನು ವ್ಯಾಖ್ಯಾನಸುತ್ತ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಈ ಎಲ್ಲಾ ಕೆಲಸಗಳು ಈಗ ನಡೆಯುತ್ತಾ ಇವೆ. ಆದರೆ ಕಣ್ಣಿಗೆ ಪಟ್ಟಿಯನ್ನು ಕಟ್ಟಿಕೊಂಡಿರುವವರು ಈ ಕೆಲಸಗಳನ್ನು ಕಾಣುವುದಿಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅತ್ಯಂತ ಭವ್ಯವಾದ ಸಾತ್ವಿಕತೆಯನ್ನು ಗಳಿಸಲು ಅಲ್ಲಾಹನು ಒಂದು ಮಾರ್ಗವನ್ನು ಮಾತ್ರ ತೆರೆದಿಟ್ಟಿದ್ದಾನೆ. ಅದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಣೆ ಮಾಡುವುದಾಗಿದೆ. ಪವಿತ್ರ ಖುರ್‌ಆನಿನ ವಚನ ಇದನ್ನೇ ಸೂಚಿಸುತ್ತದೆ. **"ಖುಲ್ ಇನ್‌ಕುನ್‌ತುವ್ ತುಹಿಬ್ಬೂನಲ್ಲಾಹ ಫತ್ತಬಿಊನೀ ಯುಹ್‌ಬಿಬ್‌ಕುಮುಲ್ಲಾಹ್."** (ಹೇಳು ನೀವು ಅಲ್ಲಾಹನ ಸ್ನೇಹಿತರಾಗಲು ಬಯಸುವಿರಾದರೆ ನನ್ನನ್ನು ಅನುಸರಿಸಿರಿ ಆಗ ಅಲ್ಲಾಹನು ನಿಮ್ಮನ್ನು ಪ್ರೀತಿಸುವನು). ಇದರ ಅರ್ಥ ನೀವು ಆಚಾರ ರೂಪದಲ್ಲಿ ನಮಾಝ್ ಮಾಡಿರಿ ಎಂದಲ್ಲ. ನಮಾಝ್ ಎಂದರೇನು, ಉಪವಾಸ ಎಂದರೇನು? ಒಂದು ಕೆಲಸ ಮಾಡುವುದು ಮತ್ತು ಒಂದು ಕೆಲಸ ಮಾಡದೆ ಇರುವುದಾಗಿದೆ ಅವು. ನಮಾಝ್ ಕೇವಲ ಆಚಾರ ರೂಪದಲ್ಲಿರಬಾರದು. ನಮಾಝ್‌ಗಳನ್ನು ಕ್ರಮಬದ್ಧವಾಗಿ ಅನುಷ್ಠಿಸಬೇಕು. ಅವುಗಳಿಗೆ ನಿಶ್ಚಯಿಸಿರುವ ಸಮಯಗಳಲ್ಲಿ ಅನುಷ್ಠಿಸಬೇಕು. ಅಲ್ಲಾಹನ ಮುಂದೆ ನಿಂತಿರುವೆನೆಂದು ಯೋಚಿಸುತ್ತಾ ಆರಾಧನೆ ಮಾಡಬೇಕು. ಇಲ್ಲವಾದರೆ ಆ ಆರಾಧನೆಗಳು ಕೇವಲ ಆಚಾರ ರೂಪದ ಆರಾಧನೆಗಳಾಗುವುದು. ಇಸ್ಲಾಮ್ ಎಂದರೆ ಆಚಾರದ ಹೆಸರಲ್ಲ. ಇಸ್ಲಾಮ್ ಎಂದರೆ ಬಲಿಯರ್ಪಿಸುವ ಕುರಿಯ ಹಾಗೆ ತಲೆಯೊಡ್ಡುವುದಾಗಿದೆ. ಇದರ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿರುವುದು, ನನ್ನ ಜೀವಿತ, ನನ್ನ ಮೃತ್ಯು, ನನ್ನ ಬಲಿದಾನಗಳು, ಅಲ್ಲಾಹನಿಗೋಸ್ಕರವೇ ಆಗಿವೆ. ನಾನು ಎಲ್ಲದಕ್ಕಿಂತಲೂ ಮೊದಲು ನನ್ನ ಕೊರಳನ್ನು ಒಡ್ಡುತ್ತಿದ್ದೇನೆ ಎಂದು. (ಮಲ್‌ಫೂಝಾತ್, ಸಂಪುಟ-2, ಪುಟ-186, ಆವೃತ್ತಿ 1985, ಇಂಗ್ಲೆಂಡ್)

ವಾಸ್ತವಿಕವಾಗಿ ಅನುಸರಣೆ ದೋರುವವರು ತಮ್ಮ ಆರಾಧನೆಗಳ ಮಟ್ಟವನ್ನು ಉನ್ನತಗೊಳಿಸುತ್ತಾರೆ. ಆದುದರಿಂದ ನಮ್ಮ ಪೈಕಿ ಪ್ರತಿಯೊಬ್ಬನು ತನ್ನನ್ನು ಪರಿಶೋಧಿಸಬೇಕು. ನಾವು ಅನುಸರಣೆ ದೋರುವವರು ಎಂಬ ನಮ್ಮ ವಾದ ಸಹ ಪೊಳ್ಳಾಗದಿರಲು ನೋಡಬೇಕು.

ಮತ್ತೆ ಪ್ರವಾದಿ(ಸ) ರವರು ಪರಿಪೂರ್ಣ ಏಕದೇವ ಆರಾಧಕರಾಗಿದ್ದರು ಎಂಬುದಕ್ಕೆ ಸಂಬಂಧಿಸಿದಂತೆ ಹೇಳುತ್ತಾರೆ, ಸರ್ವಶಕ್ತನಾದ ಅಲ್ಲಾಹನು ಹೀಗೆ ಹೇಳಿದನು: "ಓ ರಸೂಲ್! ಅವರಿಗೆ ಹೇಳಿ, "ನೀವು ಅಲ್ಲಾಹನನ್ನು ಪ್ರೀತಿಸುವುದಾದರೆ ನನ್ನನ್ನು ಅನುಸರಿಸಿ." (ಇದು ಆಯತ್ತಿನ ಅನುವಾದವಾಗಿದೆ) "ಅಲ್ಲಾಹನು ನಿಮ್ಮನ್ನು ತನ್ನ ಪ್ರಿಯನನ್ನಾಗಿ ಮಾಡುತ್ತಾನೆ" ಎಂದು ಹೇಳಿದರು. ಪ್ರವಾದಿ(ರ) ರವರ ಪರಿಪೂರ್ಣ ವಿಧೇಯತೆ ಮನುಷ್ಯನನ್ನು ಅಲ್ಲಾಹನ ಪ್ರಿಯನ ಸ್ಥಾನಕ್ಕೆ ಕರೆದೊಯ್ಯುತ್ತದೆ, ಅದು ಅವನು ಪರಿಪೂರ್ಣ ಏಕದೇವೋಪಾಸನೆಯ ಮಾದರಿಯೆಂದು ತೋರಿಸುತ್ತದೆ. (ಮಲ್‌ಫೂಝಾತ್, ಸಂಪುಟ-8, ಪುಟ-115, ಆವೃತ್ತಿ 1985, ಇಂಗ್ಲೆಂಡ್) ಅಂದರೆ ನೀವು ಪರಿಪೂರ್ಣ ಏಕದೇವತಾವಾದಿ ಎಂದು ಇದರಿಂದ ತಿಳಿದುಬರುತ್ತದೆ ಎಂದು ವಾದಿಸುತ್ತಿದ್ದಾರೆ.

ಇನ್ನೊಂದೆಡೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ: ಪ್ರವಾದಿ(ಸ) ರವರ ನೈತಿಕತೆ ಮತ್ತು ನಡವಳಿಕೆಯನ್ನು ತನ್ನ ಮಾರ್ಗದರ್ಶಿಯನ್ನಾಗಿ ಮಾಡದ ಹೊರತು ಮನುಷ್ಯನು ತನ್ನೊಳಗೆ ಸರ್ವಶಕ್ತನಾದ ಅಲ್ಲಾಹನ ಪ್ರೀತಿಯನ್ನು ಸೃಷ್ಟಿಸಲು ಸಾಧ್ಯವಿಲ್ಲ. ಆದ್ದರಿಂದ, ಸರ್ವಶಕ್ತನಾದ ಅಲ್ಲಾಹನು ಸ್ವತಃ ಈ ಬಗ್ಗೆ ಹೇಳಿದ್ದಾನೆ: **"ಖುಲ್ ಇನ್‌ಕುನ್ತುಮ್ ತುಹಿಬ್ಬೂನಲ್ಲಾಹ ಫತ್ತಬಿಊನಿ ಯುಹ್‌ಬಿಬ್‌ಕುಮುಲ್ಲಾಹ್."** ಅಂದರೆ ನಿಮ್ಮ ನೈತಿಕ ಶ್ರೇಷ್ಠತೆಯ ಬಣ್ಣವನ್ನು ನಿಮ್ಮೊಳಗೆ ಸೃಷ್ಟಿಸುವುದು ನಿಜವಾದ ವಿಧೇಯತೆ. (ಮಲ್‌ಫೂಝಾತ್, ಸಂಪುಟ-3, ಪುಟ-87, ಆವೃತ್ತಿ 1985, ಇಂಗ್ಲೆಂಡ್)

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಸರಣೆ ಒಂದನೆಯದಾಗಿ ಆರಾಧನೆಯ ರೂಪದಲ್ಲಿ ಎರಡನೆಯದಾಗಿ ಸುಸ್ವಭಾವಗಳ ರೂಪದಲ್ಲಿರಬೇಕು. ಸತ್ಯವಾದ ಅನುಸರಣೆ ಏನೆಂದರೆ ಪವಿತ್ರ ಖುರ್‌ಆನ್‌ನಲ್ಲಿ ಪ್ರಸ್ತಾಪಿಸಲಾದ ಸದ್ಗುಣಗಳನ್ನು ನಮ್ಮಲ್ಲಿ ಹುಟ್ಟುವಂತೆ ಮಾಡುವುದಾಗಿದೆ. ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾ ಹೇಳಿದ್ದರು: **"ಕಾನ ಖುಲುಖುಹುಲ್ ಖುರ್‌ಆನ್."** ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸದ್ಗುಣಗಳ ಬಗ್ಗೆ ತಿಳಿಯಲು ಪವಿತ್ರ ಖುರ್‌ಆನನ್ನು ಓದಿರಿ, ಪವಿತ್ರ ಖುರ್‌ಆನ್ ಅವುಗಳನ್ನು ವಿವರಿಸುತ್ತವೆ ಎಂದು. ನಾವು ಈ ಕಾರಣದಿಂದಲೂ ಪವಿತ್ರ ಖುರ್‌ಆನನ್ನು ಓದುವ ಆವಶ್ಯಕತೆ ಇದೆ. ನಾವು ಅನ್ಯರಿಗೆ ಉಪದೇಶಿಸುವ ಮೊದಲು ಸ್ವತಃ ನಮ್ಮನ್ನು ಪರಿಶೋಧಿಸುವುದು ಆವಶ್ಯಕವಾಗಿದೆ. ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿದವರಾಗಿರುವಾಗ ಪವಿತ್ರ ಖುರ್‌ಆನನ್ನು ನಮ್ಮ ಕರ್ಮಗಳ ಮಾರ್ಗನಿರ್ದೇಶಕವಾಗಿ ಎಷ್ಟರ ಮಟ್ಟಿಗೆ ಮಾಡಿಕೊಂಡಿದ್ದೇವೆ ಎಂದು ಪರಿಶೋಧಿಸಬೇಕು. ಇದು ಬೈಅತ್ ಶರತ್ತುಗಳ ಒಂದು ಭಾಗವೂ ಆಗಿದೆ. ಸತ್ಯಸಂಧತೆಯಲ್ಲಿ ನಾವು ಎಷ್ಟರ ಮಟ್ಟಿಗೆ ನೆಲೆ ನಿಂತಿದ್ದೇವೆ ಎಂದು ಸಹ ಪರಿಶೋಧಿಸಬೇಕು. ನ್ಯಾಯ ಪಾಲನೆಯನ್ನು ಎಷ್ಟರ ಮಟ್ಟಿಗೆ ಮಾಡುತ್ತಿದ್ದೇವೆ. ಜನರ ಹಕ್ಕುಗಳನ್ನು ಈಡೇರಿಸಿಕೊಡಲು ಎಷ್ಟರ ಮಟ್ಟಿಗೆ ನಾವು ಪ್ರಯತ್ನಿಸುತ್ತಿದ್ದೇವೆ ಎಂದೆಲ್ಲಾ ನಾವು ಪರಿಶೋಧಿಸುವ ಅಗತ್ಯವಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದೆಡೆ ಹೀಗೆ ಹೇಳುತ್ತಾರೆ:

ಪ್ರತಿಯೊಬ್ಬ ಮನುಷ್ಯನಿಗೆ ಸ್ವತಃ ಅಲ್ಲಾಹನನ್ನು ಭೇಟಿಯಾಗುವ ಶಕ್ತಿ ಇಲ್ಲ. ಅದಕ್ಕೋಸ್ಕರ ಒಂದು ಮಾಧ್ಯಮದ ಆವಶ್ಯಕತೆ ಇದೆ. ಈ ಮಾಧ್ಯಮ ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಾಗಿದ್ದಾರೆ. ಆದುದರಿಂದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಬಿಟ್ಟು ಬಿಡುವವನು ಎಂದೂ ಜಯಶಾಲಿಯಾಗಲಾರನು. ಮನುಷ್ಯನು ವಾಸ್ತವಿಕವಾಗಿ ಅಬ್‌ದ್ ಅಥವಾ ಗುಲಾಮ್ ಆಗಿದ್ದಾನೆ. ತನ್ನ ಮಾಲಿಕನು ನೀಡಿದ ಆಜ್ಞೆಯನ್ನು ಪಾಲಿಸುವುದು ಗುಲಾಮನ ಕೆಲಸವಾಗಿದೆ. ಆದುದರಿಂದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಗ್ರಹ ಪಡೆಯಬೇಕೆಂದು ಬಯಸುವವರು ಅವರ ಗುಲಾಮನಾಗಬೇಕಾದುದು ಆವಶ್ಯಕವಾಗಿದೆ. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಹೇಳುತ್ತಾನೆ: **"ಖುಲ್ ಯಾ ಇಬಾದಿಯಲ್ಲಧೀನ ಅಸ್‌ರಫೂ ಅಲಾ ಅನ್‌ಫುಸಿಹಿಮ್"** (ಹೇಳು, ತಮ್ಮ ಜೀವಗಳ ಮೇಲೆ ದೌರ್ಜನ್ಯ ಮಾಡಿರುವ ನನ್ನ ಗುಲಾಮರೇ). ಈ ವಚನದಲ್ಲಿ ಇಬಾದೀ ಎಂಬ ಶಬ್ದ ಬಳಸಲಾಗಿದೆ. ಇದರ ಅರ್ಥ ನನ್ನ ಗುಲಾಮರೇ ಎಂದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಗುಲಾಮರಾಗಲು ಅವರಿಗೋಸ್ಕರ ದುರೂದ್ ಪ್ರಾರ್ಥನೆ ಮಾಡುವುದು ಮತ್ತು ಅವರ

ಯಾವುದೇ ಆಜ್ಞೆಗೆ ಅವಿಧೇಯವಾಗದೆ ಎಲ್ಲ ಆಜ್ಞೆಗಳನ್ನು ಪಾಲಿಸುವುದು ಆವಶ್ಯಕವಾಗಿದೆ. ಅಲ್ಲಾಹನು ಹೀಗೆ ಆದೇಶಿಸಿರುವನು **"ಖುಲ್ ಇನ್‌ಕುನ್‌ತುವ್ ತುಹಿಬ್ಬೂನಲ್ಲಹ ಫತ್ತಬಿಊನೀ ಯುಹ್‌ಬಿಬ್ ಕುಮುಲ್ಲಹ್"** ಅಂದರೆ ಹೇಳು ನೀವು ಅಲ್ಲಾಹನ ಸ್ನೇಹಿತರಾಗಲು ಬಯಸುವಿರಾದರೆ ನನ್ನನ್ನು ಅನುಸರಿಸಿರಿ ಆಗ ಅಲ್ಲಾಹನು ನಿಮ್ಮನ್ನು ಪ್ರೀತಿಸುವನು. (ಮಲ್‌ಫೂಝಾತ್, ಸಂಪುಟ–5, ಪುಟ–324–322, ಆವೃತ್ತಿ 1985, ಇಂಗ್ಲೇಂಡ್)

ಹೀಗಾಗಿ ಅತ್ಯಂತ ಪಾಪಿಷ್ಟನು ಸಹ ಇಸ್ತಿಗ್‌ಫಾರ್ ಮಾಡುವವನಾದರೆ ಮತ್ತು ಪ್ರವಾದಿ(ಸ) ರನ್ನು ಅನುಸರಿಸುವನು ತನ್ನ ನಿಜವಾಗಿಯು ಪರಿವರ್ತನೆ ಮಾಡಲು ಬಯಸಿದ್ದವನಾದರೆ ಅಲ್ಲಾಹನ ಪ್ರೀಯನಾಗಬಹುದು.

ಮತ್ತೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಲ್ಲಾಹನನ್ನು ಸಂತೋಷಪಡಿಸಲು ಇರುವ ಒಂದೇ ಮಾರ್ಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು ಸತ್ಯವಾಗಿ ಅನುಸರಣೆ ಮಾಡುವುದಾಗಿದೆ. ಜನರು ವಿವಿಧ ರೀತಿಗಳ ಆಚಾರಗಳಲ್ಲಿ ಬಂಧಿತರಾಗಿದ್ದಾರೆ. ಒಬ್ಬನು ಮೃತನಾದರೆ ವಿವಿಧ ರೀತಿಯ ಆಚಾರಗಳೂ ನವೀನಾಚಾರಗಳೂ ಮಾಡಲ್ಪಡುತ್ತವೆ. ಆದರೆ ವಾಸ್ತವಿಕವಾಗಿ ಮಾಡಬೇಕಾದುದು ಮೃತನಿಗೋಸ್ಕರ ಪ್ರಾರ್ಥನೆಯಾಗಿದೆ. ಈ ರೀತಿಯ ಆಚರಣೆಗಳನ್ನು ಮಾಡುವುದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ವಿರೋಧ ಮಾತ್ರವಲ್ಲ, ಅವರಿಗೆ ಅಪಮಾನಕರವೂ ಆಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಉಪದೇಶಿಸಿದುದು ನಮಗೆ ಸಾಕಾಗಲಾರದೆಂದು ಅವರು ಯೋಚಿಸುತ್ತಾರೆ. ಅವರು ಉಪದೇಶಿಸಿದ್ದು ನಮಗೆ ಸಾಕು ಎಂಬ ಅಭಿಪ್ರಾಯವನ್ನು ಈ ಜನರು ಹೊಂದಿದ್ದರೆ ಹೊಸ ಆಚಾರಗಳನ್ನು ರೂಪಿಸುವ ಆವಶ್ಯಕತೆ ಏನಿದೆ? (ಮಲ್‌ಫೂಝಾತ್, ಸಂಪುಟ–5, ಪುಟ–440, ಆವೃತ್ತಿ 1985, ಇಂಗ್ಲೇಂಡ್)

ಆದ್ದರಿಂದ ನಮ್ಮ ವಿರುದ್ಧ ಕುಫರ್ ಫತ್ವಾಗಳನ್ನು ಹೊರಡಿಸುವವರು ತಮ್ಮನ್ನು ಪರಿಶೀಲಿಸಿಕೊಳ್ಳಬೇಕು. ನಂತರ ಇನ್ನೊಂದು ಸ್ಥಳದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲಹಿಸ್ಸಲಾಮ್ ಹೇಳುತ್ತಾರೆ:

"ನೀವು ಅಲ್ಲಾಹನನ್ನು ಪ್ರೀತಿಸುತ್ತಿದ್ದರೆ ನನ್ನನ್ನು ಅನುಸರಿಸಿ. ಈ ಅನುಸರಿಸುವಿಕೆಯ ಫಲಿತಾಂಶವೆಂದರೆ ಅಲ್ಲಾಹನು ನಿಮ್ಮನ್ನು ಪ್ರೀತಿಸುತ್ತಾನೆ ಮತ್ತು ನಿಮ್ಮ ಪಾಪಗಳನ್ನು ಕ್ಷಮಿಸುತ್ತಾನೆ." ಅವರು ಹೇಳುತ್ತಾರೆ, ಈ ಆಯತ್‌ನಿಂದ ಸ್ಪಷ್ಟವಾಗುವುದೇನೆಂದರೆ ಮನುಶ್ಯನು ಪರಿಪೂರ್ಣವಾಗಿ ಪ್ರವಾದಿ(ಸ) ರವರನ್ನು ಅನುಸರಿಸದಿದ್ದರೆ ಅವನು ಅಲ್ಲಾಹನ ಅನುಗ್ರಹಗಳನ್ನು ಪಡೆಯಲು ಸಾಧ್ಯವಾಗುವುದಿಲ್ಲ ಮತ್ತು ಅವನ ಪಾಪಿ ಜೀವನದ ಬೆಂಕಿಯನ್ನು ತಂಪಾಗಿಸಲು ಹಾಗೂ ಮಾನಸಿಕ ಭಾವನೆಗಳನ್ನು ಸಂತೃಪ್ತಿಗೊಳಿಸಲು ದೈವಜ್ಞಾನ ಮತ್ತು ಅಂತರ್ದೃಷ್ಠಿ ಅವನಿಗೆ ನೀಡಲಾಗುವುದಿಲ್ಲ. ಇಂತಹ ಜನರು **'ಉಲಾಮಾ ಉಮ್ಮತಿ'** ಪರಿಕಲ್ಪನೆಗೆ ಸೇರುವವರಾಗಿದ್ದಾರೆ." (ಮಲ್‌ಫೂಝಾತ್, ಸಂಪುಟ–8, ಪುಟಗಳು 96–97, 1985 ಆವೃತ್ತಿ, ಯುಕೆ)

ನಿಮ್ಮ ಇಂದ್ರಿಯಾಸಕ್ತಿಗಳನ್ನು ತಣ್ಣಗಾಗಿಸಲು ನೀವು ಬಯಸಿದರೆ, ನೀವು ಪ್ರವಾದಿ(ಸ) ಅವರನ್ನು ಸಂಪೂರ್ಣವಾಗಿ ಅನುಸರಿಸಬೇಕು. ಅಲ್ಲಾಹನಿಂದ ದೈವಜ್ಞಾನ ಹಾಗೂ ಅಂತರ್ದೃಷ್ಠಿಯನ್ನು ಪಡೆಯಬೇಕಾದರೆ. ಅಲ್ಲಾಹನ ಪ್ರಿಯನಾಗಲು, ನೀವು ಅವರನ್ನು ಅನುಸರಿಸಬೇಕು. ಪಾಪ ಜೀವನದಿಂದ ಮೋಕ್ಷ ಪಡೆಯಬೇಕಾದರೆ ನೀವು ಅವರನ್ನು ಅನುಸರಿಸಬೇಕಾಗುವುದು. ಯಾರು ಇದನ್ನೆಲ್ಲ ಮಾಡುತ್ತಾರೊ ಪ್ರವಾದಿ(ಸ) ಹೇಳಿದ ಹಂತವನ್ನು ತಲುಪುವವರಾಗುತ್ತಾರೆ ಪ್ರವಾದಿ(ಸ) ಹೇಳಿದರು ನನ್ನ ಉಮ್ಮತ್ತಿನ ವಿದ್ವಾಂಸರು ಬನಿ ಇಸ್ರಾಯೇಲ್‌ನ ಪ್ರವಾದಿಗಳಂತೆ ಇದ್ದಾರೆ. (ಮುಲ್ಲಾ ಅಲಿ ಖಾರಿ ಅವರಿಂದ ಅಲ್– ಮೌಝುಆತ್ ಲಿಲ್ ಕುಬ್ರ, ಪುಟ–159, ಹದೀಸ್–614, ಕರಾಚಿಯ ಅರಾಮ್ ಬಾಗ್‌ನ ಪ್ರಾಚೀನ ಗ್ರಂಥಾಲಯ ಪ್ರಕಟಿಸಿದೆ)

ಆದರೆ ಇಂದಿನ ವಿದ್ವಾಂಸರು ಅದರಲ್ಲಿ ಭಾಗಿಯಾಗಿಲ್ಲ. ಅವರು ಆ ಸ್ಥಾನವನ್ನು ಪಡೆಯುವುದಿಲ್ಲ. ಏಕೆಂದರೆ ಪ್ರವಾದಿ(ಸ) ರವರ ಅನುಗ್ರಹದಿಂದ ಅವರಿಗೆ ಮನವರಿಕೆಯಾಗುವುದಿಲ್ಲ. ಅದು ಪ್ರಯೋಜನಕಾರಿ ಎಂದು ಅವರಿಗೆ ಅರ್ಥವಾಗುವುದಿಲ್ಲ.

ನಂತರ ಪ್ರವಾದಿ(ಸ) ರ ಸ್ಥಾನದ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಪ್ರವಾದಿ(ಸ) ರವರ ಶ್ರೇಷ್ಠ ಸ್ಥಾನವೆಂದರೆ ಅವರು ಅಲ್ಲಾಹನ ಪ್ರಿಯರು. ಆದರೆ ಸರ್ವಶಕ್ತನಾದ ಅಲ್ಲಾಹನು ಇತರ ಜನರಿಗೆ ಈ ಸ್ಥಳವನ್ನು ತಲುಪುವ ಮಾರ್ಗವನ್ನು ತೋರಿಸಿದರು. ಅವರು ಹೇಳಿದಂತೆ, **"ಇನ್ ಕುನ್‌ತುಮ್ ತುಹಿಬ್ಬೂನಲ್ಲಾಹ ಫತ್ತಬಿಊನ ಯುಹ್‌ಬಿಬ್ ಕುಮುಲ್ಲಾಹ್"** ಅಂದರೆ, ನೀವು ಅಲ್ಲಾಹನಿಂದ ಪ್ರೀತಿಸಬೇಕೆಂದು ಬಯಸಿದರೆ ನನ್ನನ್ನು ಅನುಸರಿಸಿ ಎಂದು ಅವರಿಗೆ ತಿಳಿಸಿ. ಅಲ್ಲಾಹನು ನಿಮ್ಮನ್ನು ತನ್ನ ಪ್ರಿಯನನ್ನಾಗಿ ಮಾಡುತ್ತಾನೆ." (ಅಲ್ಲಾಹನು ಪ್ರವಾದಿ(ಸ) ಅವರಿಂದ ಈ ಘೋಷಣೆಯನ್ನು ಮಾಡಿಸಿದನು) "ಈಗ ಪ್ರವಾದಿ(ಸ) ರವರ ಪರಿಪೂರ್ಣ ವಿಧೇಯತೆ ಅಲ್ಲಾಹನ ಪ್ರೀಯನನ್ನಾಗಿಸುತ್ತಾನೆ. ಇನ್ನೇನು ಬೇಕು? (ಮ್ ಲ್ ಫ್ ೂರ್ ಝಾತ್, ಸಂಪುಟ–8, ಪುಟ–65, 1985 ಇಂಗ್ಲೆಂಡ್ ಆವೃತ್ತಿ)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಇನ್ನೊಂದು ಸ್ಥಳದಲ್ಲಿ ಹೇಳುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸದೆ ಮೋಕ್ಷ ಸಿಗಬಹುದೆಂದು ಹೇಳುವವನು ಸುಳ್ಳುಗಾರನಾಗಿದ್ದಾನೆ. ಆದರೆ, ಅಲ್ಲಾಹನು ನಮಗೆ ಮನವರಿಕೆ ಮಾಡಿಕೊಟ್ಟಿರುವುದು ಈ ಹೇಳಿಕೆಗೆ ವಿರುದ್ಧವಾಗಿದೆ. ಅಲ್ಲಾಹನು ಹೇಳುತ್ತಾನೆ: **"ಖುಲ್ ಇನ್‌ಕುನ್‌ತುವ್ ತುಹಿಬ್ಬೂನಲ್ಲಾಹ ಫತ್ತಬಿಊನೀ ಯುಹ್‌ಬಿಬ್‌ಕುಮುಲ್ಲಾಹ್."** ಓ ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ನೀನು ಜನರೊಂದಿಗೆ ಹೇಳು, ನೀವು ಅಲ್ಲಾಹನನ್ನು ಪ್ರೀತಿಸುವವರಾದರೆ ನೀವು ನನ್ನನ್ನು ಅನುಸರಿಸಿರಿ. ಆಗ ನೀವು ಅಲ್ಲಾಹನಿಗೆ ಪ್ರಿಯಕರರಾಗುವಿರಿ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸದಿದ್ದರೆ ಯಾವ ಮೋಕ್ಷವೂ ಲಭಿಸಲಾರದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ದ್ವೇಷಿಸುವವರಿಗೆ ಎಂದೂ ಒಳಿತುಂಟಾಗಲಾರದು. (ಮಲ್‌ಫೂಝಾತ್ ಸಂಪುಟ–8, ಪುಟ–434–435, 1985 ಆವೃತ್ತಿ, ಇಂಗ್ಲೆಂಡ್)

ಇದು ನಮ್ಮ ನಂಬಿಕೆಯ ಒಂದು ಭಾಗ ಆಗಿದೆ.

ಪ್ರವಾದಿ(ಸ) ರ ಸ್ಥಾನದ ಬಗ್ಗೆ ನೀವು ಒಬ್ಬ ಕ್ರೈಸ್ತನೊಂದಿಗೆ ವಾದಿಸುತ್ತಿದ್ದೀರಿ. ಪ್ರಶ್ನೆಗಳಿಗೆ ಉತ್ತರಿಸಲಾಗುತ್ತಿದೆ. ಈ ಕ್ರಿಶ್ಚಿಯನ್ ಹಝ್ರತ್ ಈಸ ಮಸೀಹ್(ಅ) ರ ಸ್ಥಾನದ ಬಗ್ಗೆ ಈಸ ಮಸೀಹ್(ಅ) ಸ್ವತಃ ತಮ್ಮ ಬಗ್ಗೆ ಹೇಳಿದ್ದಾರೆ. ಅವರು ಹೇಳುತ್ತಾರೆ: "ನನ್ನ ಬಳಿಗೆ ಬನ್ನಿ ನೀವು ದಣಿದಿದ್ದೀರಿ ನಾನು ನಿಮಗೆ ವಿಶ್ರಾಂತಿ ನೀಡುವೆನು" ಮತ್ತು ಅವರು (ಸಹ ಹೇಳಿದರು), "ನಾನು ಪ್ರಕಾಶ ಮತ್ತು ನಾನು ದಾರಿಯಾಗಿರುವೆನು," ನಾನು ಜೀವನ ಮತ್ತು ಸತ್ಯವಾಗಿದ್ದೇನೆ. (ಅಂದರೆ, ನಾನು ಪ್ರಕಾಶ. ನಾನು ಮಾರ್ಗದರ್ಶಕ, ನಾನು ಜೀವನವನ್ನು ಕೊಡುವವನು, ನನ್ನ ಬಳಿಗೆ ಬನ್ನಿ. ಅದಕ್ಕೆ ಕ್ರೈಸ್ತನು ಪ್ರಶ್ನಿಸಿದನು: ಇಂತಹ ಪದಗಳನ್ನು ಇಸ್ಲಾಮ್ ಧರ್ಮದ ಸಂಸ್ಥಾಪಕರಾದ ಪ್ರವಾದಿ(ಸ) ಎಲ್ಲಾದರೂ ತಮ್ಮ ಬಗ್ಗೆ ನುಡಿದಿದ್ದಾರೆಯೇ? ಅದಕ್ಕೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಮ್ ಉತ್ತರಿಸುತ್ತಾ ಹೇಳಿದರು: "ಇದು ಪವಿತ್ರ ಖುರ್‌ಆನಿನಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ "ನೀವು ಅಲ್ಲಾಹನನ್ನು ಪ್ರೀತಿಸುತ್ತಿದ್ದರೆ ನನ್ನನ್ನು ಅನುಸರಿಸಿ. ಈ ಅನುಸರಿಸುವಿಕೆಯ ಫಲಿತಾಂಶವೆಂದರೆ ಅಲ್ಲಾಹನು ನಿಮ್ಮನ್ನು ಪ್ರೀತಿಸುತ್ತಾನೆ ಮತ್ತು ನಿಮ್ಮ ಪಾಪಗಳನ್ನು ಕ್ಷಮಿಸುತ್ತಾನೆ." ಮುಂದೆ ಹೇಳುತ್ತಾರೆ "ಈ ವಾಗ್ದಾನ ಅಂದರೆ ನನ್ನನ್ನು ಅನುಸರಿಸಿದರೆ ಮನುಷ್ಯ ಅಲ್ಲಾಹನ ಪ್ರೀತಿಗೆ ಪಾತ್ರನಾಗುತ್ತಾನೆ. ಇದು ಈಸ ಮಸೀಹ್(ಅ)ನ ಮುಂಚೆಯ ಎಲ್ಲಾ ಮಾತುಗಳಿಂದ ಉತ್ತಮವಾಗಿದೆ ಏಕೆಂದರೆ ಇದಕ್ಕಿಂದ ಉತ್ತುಂಗ ಸ್ಥಾನ ಯಾವುದೂ ಇಲ್ಲ." (ಈಸ ಮಸೀಹರು ಪ್ರಕಾಶ ಪಡೆಯಿರಿ ಎಂದು ಹೇಳಿರುವುದು ಆದರೆ ಅಲ್ಲಾಹನು ಇಲ್ಲಿ ಪ್ರವಾದಿ(ಸ) ಅವರಿಗೆ ಹೇಳಿದನು ನೀವು ಹೇಳಿರಿ ಯಾರು ನನ್ನನ್ನು ಅನುಸರಿಸುತ್ತಾರೋ ಆತನು ಅಲ್ಲಾಹನ ಪ್ರೀತಿಗೆ ಪಾತ್ರನಾಗುತ್ತಾನೆ ಮತ್ತು ಆತನ ಪಾಪಗಳನ್ನು ಕ್ಷಮಿಸಲ್ಪಡುತ್ತವೆ. (ಸಿರಾಜುದ್ದೀನ್ ಇಸಾಯ್ ಕೆ ಚಾರ್ ಸವಾಲ್, ರೂಹಾನಿ ಖಝಾಈನ್, ಸಂಪುಟ–12, ಪುಟ–372)

ಇದು ಎಲ್ಲೆಡೆ ಕ್ರಿಶ್ಚಿಯನ್ ಪಾದ್ರಿಗಳು ಕ್ರಿಶ್ಚಿಯನ್ ಧರ್ಮವನ್ನು ಬೋಧಿಸುತ್ತಿದ್ದ ಕಾಲವಾಗಿತ್ತು. ಭಾರತದಲ್ಲಿ ಲಕ್ಷಾಂತರ ಮುಸ್ಲಿಮರು ಕ್ರೈಸ್ತರಾಗಿದ್ದರು. ಮುಸ್ಲಿಮ್ ವಿದ್ವಾಂಸರು ಮತ್ತು ಇತರ ನಾಯಕರು ಇಸ್ಲಾಮ್ ಧರ್ಮವನ್ನು ರಕ್ಷಿಸಲು ಮತ್ತು ಪ್ರವಾದಿ(ಸ) ರವರ ಸ್ಥಾನ ಮತ್ತು ವೈಭವವನ್ನು ಮುಸ್ಲಿಮೇತರರನ್ನು ಮೌನಗೊಳಿಸುವ ರೀತಿಯಲ್ಲಿ ವಿವರಿಸುವ ಶಕ್ತಿಯನ್ನು ಹೊಂದಿರಲಿಲ್ಲ. ಅಂತಹ ಸಮಯದಲ್ಲಿ, ವಾಗ್ದತ್ತ ಮೆಸ್ಸೀಹ(ಅ) ಅವರನ್ನು ಎದುರಿಸಿದರು. ಇಸ್ಲಾಮ್ ಧರ್ಮ ಮತ್ತು ಪ್ರವಾದಿ(ಸ) ರವರ ಮಹಿಮೆಯನ್ನು ಜಗತ್ತಿಗೆ ಪ್ರಸ್ತುತಪಡಿಸಲು ಸರ್ವಶಕ್ತನಾದ ಅಲ್ಲಾಹನು ಅವರನ್ನು ಕಳುಹಿಸಿದನು. ಇಸ್ಲಾಮ್ ಧರ್ಮದ ಮೇಲೆ ಕ್ರಿಶ್ಚಿಯನ್ ಪಾದ್ರಿಗಳ ದಾಳಿಯನ್ನು ಎದುರಿಸಲು ಅಲ್ಲಾಹನ ಈ ಪೆಹಲ್ವಾನ, ಸಾಕ್ಷ್ಯಾಧಾರಗಳೊಂದಿಗೆ

ಹಾಗೂ ಪುರಾವೆಗಳೊಂದಿಗೆ ಎದುರಿಸಿದನು ಎಂಬುದಕ್ಕೆ ಭಾರತದ ಇತಿಹಾಸ ಸಾಕ್ಷಿಯಾಗಿದೆ. ಕೇವಲ ತಡೆಯಲಿಲ್ಲ ಬದಲು ಅವರನ್ನು ಹಿಮ್ಮೆಟ್ಟಿಸಿದ್ದನು ಎಂಬುದಕ್ಕೆ ಅಂದಿನ ಕಾಲದ ಮುಸ್ಲಿಮರು ಸಾಕ್ಷಿಯಾಗಿದ್ದಾರೆ ಮತ್ತು ಅವರು ಅದನ್ನು ವ್ಯಕ್ತಪಡಿಸಿದರು. ನಾವು ಅದನ್ನು ಇತಿಹಾಸದಲ್ಲಿ ಕಾಣುತ್ತೇವೆ, ಮತ್ತು ನಮ್ಮ ಈ ಕಾಲದ ವಿದ್ವಾಂಸರು ಸಹ ಒಪ್ಪಿಕೊಂಡಿದ್ದಾರೆ. ಕೆಲವು ವರ್ಷಗಳ ಹಿಂದೆ ನಿಧನರಾದ ಡಾ. ಇಸ್ರಾರ್ ಅಹ್ಮದ್ ಸಹ ಆ ಕಾಲದಲ್ಲಿ ವಾಸ್ತವವಾಗಿ, ಇಸ್ಲಾಮ್ ಧರ್ಮವನ್ನು ಸಮರ್ಥಿಸಿದವರು ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನ(ಅ) ಎಂದು ಒಪ್ಪಿಕೊಂಡಿದ್ದರು. ಆದಾಗ್ಯೂ, ಇಸ್ಲಾಮ್ ಧರ್ಮ ಮತ್ತು ಪ್ರವಾದಿ(ಸ) ರನ್ನು ವೈಭವೀಕರಿಸುವಲ್ಲಿ ಅವರು ಮಾಡಿದಂತೆ ಬೇರೆ ಯಾವುದೇ ಮುಸ್ಲಿಮ್ ವಿದ್ವಾಂಸರು ಮಾಡಲು ಸಾಧ್ಯವಾಗಲಿಲ್ಲ ಎಂಬುದು ಸತ್ಯವಾಗಿದೆ.

ಮತ್ತೆ **"ಖುಲ್ ಇನ್‌ಕುನ್‌ತುಮ್"** ಎಂದು ಪ್ರಾರಂಭವಾಗುವ ಪವಿತ್ರ ಖುರ್‌ಆನ್ ವಚನ ಮೂಲಕ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹಝ್ರತ್ ಈಸಾ ಅಲೈಹಿಸ್ಸಲಾಮರು ಮೃತರಾದ ಬಗ್ಗೆ ಸುಂದರವಾದ ರೀತಿಯಲ್ಲಿ ಸಾಕ್ಷ್ಯಾಧಾರ ನೀಡಿದ್ದಾರೆ. ವಿಶಿಷ್ಟವಾಗಿ ಅರಬಿಗಳು ಹಝ್ರತ್ ಈಸಾ ಅಲೈಹಿಸ್ಸಲಾಮರು ಆಕಾಶದಲ್ಲಿ ಜೀವಿಸಿರುವುದಾಗಿ ನಂಬುತ್ತಿದ್ದಾರೆ. ಅವರಿಗೆ ಅದರ ಬಗ್ಗೆ ದೃಢವಾದ ಅಭಿಪ್ರಾಯವಿದೆ. ಈ ನಂಬಿಕೆಯನ್ನು ರದ್ದುಪಡಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

"ನನ್ನ ದೃಷ್ಟಿಯಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸುವವನೇ ಸತ್ಯವಿಶ್ವಾಸಿಯಾಗಿದ್ದಾನೆ. ಯಾವುದಾದರೂ ಪದವಿಯನ್ನು ಗಳಿಸಲು ಅವನಿಂದ ಮಾತ್ರ ಸಾಧ್ಯ. ಅಲ್ಲಾಹನೇ ಪವಿತ್ರ ಖುರ್‌ಆನಿನಲ್ಲಿ ಈ ರೀತಿ ಹೇಳಿರುವನು: **"ಖುಲ್ ಇನ್‌ಕುನ್‌ತುಮ್ ತುಹಿಬ್ಬೂನಲ್ಲಾಹ ಫತ್ತಬಿಊನೀ ಯುಹ್‌ಬಿಬ್‌ಕುಮುಲ್ಲಾಹ್."** (ಹೇಳು, ನೀವು ಅಲ್ಲಾಹನನ್ನು ಪ್ರೀತಿಸುವುದಾದರೆ ನನ್ನನ್ನು ಅನುಸರಿಸಿರಿ ಆ ಮೂಲಕ ಅಲ್ಲಾಹನು ನಿಮ್ಮನ್ನು ಪ್ರೀತಿಸುವನು). ಪ್ರೀತಿ ಆವಶ್ಯಪಡುವುದೇನೆಂದರೆ ಪ್ರೀತಿಗೆ ಪಾತ್ರನಾದವನ ಕೆಲಸದೊಂದಿಗೆ ಸಹ ಒಂದು ಸಂಬಂಧ ಇರಬೇಕು. ಮರಣ ಹೊಂದುವುದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸುನ್ನತ್ ಆಗಿದೆ. ಎಂದರೆ ಅವರು ಮೃತರಾದರು. ಅವರು ಮೃತರಾಗಿ ತೋರಿಸಿರುವಾಗ ಜೀವದಿಂದಿರುವವರು ಯಾರು? ಅಥವಾ ಜೀವದಿಂದಿರಲು ಆಶಿಸುವವರು ಯಾರು? ಅಥವಾ ಬೇರೆ ಯಾರ ಬಗ್ಗೆಯಾದರೂ ಜೀವಿಸಿರಬೇಕೆಂದು ಆಶಿಸುವವರು ಯಾರು? ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಪ್ರೀತಿ ಆವಶ್ಯಪಡುವುದು, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರೀತಿಯಲ್ಲಿ ಎಷ್ಟು ಮಗ್ನನಾಗಬೇಕೆಂದರೆ ತನ್ನ ಇಂದ್ರಿಯಾಸಕ್ತಿಗಳನ್ನು ಅದುಮಿಡಬೇಕು ಮತ್ತು ತಾನು ಯಾರ ಅನುಯಾಯಿ ಎಂದು ಯೋಚಿಸಬೇಕು. ಇಂತಹ ಸ್ಥಿತಿಯಲ್ಲಿ, ಹಝ್ರತ್ ಈಸಾ ಅಲೈಹಿಸ್ಸಲಾಮ್ ಬಗ್ಗೆ ಅವರು ಈಗ ಸಹ ಜೀವಿಸಿರುವರೆಂದು ನಂಬುವವನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸುವವ ಮತ್ತು ಪ್ರೀತಿಸುವವ ಎಂದು ವಾದಿಸಲು ಹೇಗೆ ತಾನೆ ಸಾಧ್ಯ?
(ಮಲ್‌ಫೂಝಾತ್, ಸಂಪುಟ–8, ಪುಟ–228–229, 1985 ಆವೃತ್ತಿ, ಇಂಗ್ಲೆಂಡ್)

ಒಂದೆಡೆ, ಪ್ರವಾದಿ(ಸ) ರ ಮೇಲಿನ ಪ್ರೀತಿಯ ಹಕ್ಕು ಮತ್ತು ಅವರ ಇರಿಸುವ ವಿಧೇಯತೆಯ ದಾವೆ. ಮತ್ತೊಂದೆಡೆ, ಈಸ ಮಸೀಹರು ಜೀವಂತವಾಗಿದ್ದಾರೆ ಎಂದು ಹೇಳುವ ಮೂಲಕ ಅವರನ್ನು ಶ್ರೇಷ್ಠರೆಂದು ಕರೆಯಲಾಗುತ್ತದೆ. ಆದುದರಿಂದ ಇಂದು ವಾಗ್ದತ್ತ ಮೆಸ್ಸೀಹ್(ಅ) ಇಸ್ಲಾಮ್ ಮತ್ತು ಪ್ರವಾದಿ(ಸ) ರನ್ನು ಎಲ್ಲ ರೀತಿಯಲ್ಲೂ ಸಮರ್ಥಿಸಿಕೊಂಡಿದ್ದಾರೆ ಮತ್ತು ಅವರ ಘನತೆಯನ್ನು ಹೆಚ್ಚಿಸಿದ್ದಾರೆ. ಮತ್ತು ಅದು ಅವರ ಆಗಮನದ ಉದ್ದೇಶವೂ ಆಗಿತ್ತು. ಅದರ ಬಗ್ಗೆ ವಿದ್ವಾಂಸರು ಯಾವಾಗಲೂ ಆಕ್ಷೇಪಿಸುತ್ತಾರೆ.

ಜೀವಂತ ಪ್ರವಾದಿ ಮುಹಮ್ಮದ್(ಸ) ಅವರಾಗಿದ್ದಾರೆ ಎಂದು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಈ ಜನರು ಪವಿತ್ರ ಖುರ್‌ಆನ್ ಹಾಗೂ ಸುನ್ನತ್‌ಗೆ ವಿರುದ್ಧವಾಗಿ, ಈಸ ಮಸೀಹನು ಸ್ವರ್ಗದಲ್ಲಿ ಜೀವಂತವಾಗಿದ್ದಾರೆ ಎಂದು ಹೇಳಿದಾಗ, ಪಾದ್ರಿಗಳು ಟೀಕಿಸಲು ಅವಕಾಶವನ್ನು ಪಡೆಯುತ್ತಾರೆ ಮತ್ತು ಅವರು ತಕ್ಷಣ ನಮ್ಮ ಪ್ರವಾದಿ(ಸ) ಸತ್ತಿದ್ದಾರೆ ಮತ್ತು ಅವರು ಭೂಮಿಯ ಮೇಲೆ ಇರುವುದನ್ನು ಸೂಚಿಸುತ್ತಾರೆ. ಮುಆಝುಲ್ಲಾಹ್." (ಅರಬ್ ಜಗತ್ತಿನಲ್ಲಿ ಭಾರಿ ಅಶಾಂತಿಗೆ ಕಾರಣವಾದ ಟಿವಿ ಚಾನೆಲ್‌ಗಳಲ್ಲಿ ಇದು ನಡೆಯುತ್ತಿದೆ. ಅಂತಿಮವಾಗಿ, ನಮ್ಮ ಸಾಕ್ಷ್ಯಾಧರಗಳನ್ನು ಕೇಳಿದಾಗ, ಎಂ.ಟಿ.ಎ ನಲ್ಲಿ ಅರೇಬಿಕ್ ಕಾರ್ಯಕ್ರಮಗಳಾದ "ಹವಾರ್" ಕಾರ್ಯಕ್ರಮಗಳನ್ನು ಆಲಿಸಿದ ನಂತರ ಅನೇಕ ಜನರು ಇಳ್ಟಪಟ್ಟಿದ್ದಾರೆ ಅದು ಮತ್ತು ಈ ಸಾಕ್ಷ್ಯಾಧಾರಗಳಿಗೆ ಅವರಿಗೆ ಮನವರಿಕೆಯಾಯಿತು, ಆದರೆ ವಿದ್ವಾಂಸರಿಗೆ ಇನ್ನೂ ಮನವರಿಕೆಯಾಗಿಲ್ಲ.) ಅವರು ಸತ್ತಿದ್ದಾರೆ ಎಂದು ಅವರು ಅವಮಾನಕರವಾಗಿ ಹೇಳುತ್ತಾರೆ." ಕ್ರಿಶ್ಚಿಯನ್ ಪಾದ್ರಿಗಳು ಈಸ ಮಸೀಹರು ಜೀವಂತ ಮತ್ತು ಸ್ವರ್ಗೀಯರೆಂದು ಹೇಳುತ್ತಾರೆ, ಮತ್ತು ಅದೇ ಸಮಯದಲ್ಲಿ ಪ್ರವಾದಿಯನ್ನು ಅವಮಾನಿಸುತ್ತಾ, ಕ್ರಿಶ್ಚಿಯನ್ನರು ಅವರು ಸತ್ತಿದ್ದಾರೆಂದು ಹೇಳುತ್ತಾರೆ. ಇದು ಅವರ ಅಪಪ್ರಚಾರವಾಗಿದೆ. ನೀವು ಯೋಚನೆ ಮಾಡಿ ಹೇಳಿ, "ಇದರ ಬಗ್ಗೆ ಯೋಚಿಸಿ, ಪ್ರವಾದಿ(ಸ) ರವರು ಎಲ್ಲಾ ಪ್ರವಾದಿಗಳಲ್ಲಿ ಶ್ರೇಷ್ಠರು ಮತ್ತು ಪ್ರವಾದಿಗಳಲ್ಲಿ ಕೊನೆಯವರು ಎಂದು ನಂಬಿ ಅವರ ಮಹತ್ವತೆಯನ್ನು ಅವರು ಅವಮಾನಿಸುತ್ತಿಲ್ಲವೇ? ಅವಶ್ಯವಾಗಿ ಅವಮಾನಿಸುತ್ತಿದ್ದಾರೆ ಮತ್ತು ಅವರು ಸ್ವತಃ ಪ್ರವಾದಿ(ಸ) ಅವರನ್ನು ಅವಮಾನಿಸುತ್ತಾರೆ. ಹಝ್ರತ್ ಮಸೀಹ್ ಮೌಊದ್(ಅ)ರವರು ಮುಂದೆ ಹೇಳುತ್ತಾರೆ: ನಾನು ಸ್ಪಷ್ಟವಾಗಿ ಹೇಳುತ್ತೇನೆ ಪಾದ್ರಿಗಳಿಂದ ಅವರು ಇಸ್ಲಾಮ್ ಹಾಗೂ ಪ್ರವಾದಿ(ಸ) ರವರನ್ನು ಎಷ್ಟರ ಮಟ್ಟಿಗೆ ಅವಮಾನದ್ದಾರೆ (ಅಂದರೆ ಹಝ್ರತ್ ಈಸ ಮಸೀಹ್(ಅ) ಅವರು ಜೀವಂತವಾಗಿದ್ದಾರೆ ಎಂಬ ನಂಬಿಕೆವುಳ್ಳ ಮುಸ್ಲಿಮರು) "ಮತ್ತು ಪ್ರವಾದಿ(ಸ) ಅವರನ್ನು ಮೃತರಾಗಿದ್ದಾರೆ ಎಂದು ಹೇಳಿಸಿಕೊಂಡರು. ಅವನ ಶಿಕ್ಷೆಯಲ್ಲಿ, ಈ ದೌರ್ಭಾಗ್ಯ ಮತ್ತು ದುರದೃಳ್ಟವು ಅವರಿಗೆ ಆಗುತ್ತಿದೆ." (ಮುಸ್ಲಿಮರು ಈ ಪರಿಸ್ಥಿತಿಯಲ್ಲಿರಲು ಇದು ಕಾರಣವಾಗಿದೆ.) ನೀವು ಹೇಳುತ್ತೀರಿ, "ಒಂದು ಕಡೆ, ಅವರು ಪ್ರವಾದಿಗಳಲ್ಲಿ ಶ್ರೇಷ್ಠರು ಎಂದು ಬಾಯಿಂದ ಹೇಳುತ್ತಾರೆ." ಪ್ರವಾದಿ(ಸ) ಎಲ್ಲಾ ಪ್ರವಾದಿಗಳಿಗಿಂತ ಶ್ರೇಷ್ಠರು. ಎಂದು ಹೇಳುತ್ತಾರೆ ಮತ್ತೊಂದೆಡೆ ಪ್ರವಾದಿ(ಸ)ರವರು 63 ವರ್ಷದ ನಂತರ ನಿಧನ ಹೊಂದಿದ್ದರು ಮತ್ತು ಈಸ ಮಸೀಹರು ಇಂದಿನ ವರೆಗೂ ಜೀವಂತವಾಗಿದ್ದಾರೆ ಎಂದು ನಂಬುತ್ತಾರೆ. ಆದರೆ ಅಲ್ಲಾಹನು ಪ್ರವಾದಿ(ಸ) ಅವರಿಗೆ ಹೇಳುತ್ತಾನೆ: **"ವಕಾನ ಫಜ್ಲುಲ್ಲಾಹಿ ಅಲೈಕ ಅಝೀಮ"** ಅಲ್ಲಾಹನು ನಿಮ್ಮ ಮೇಲೆ ದೊಡ್ಡ ಅನುಗ್ರಹವನ್ನು ಹೊಂದಿದ್ದಾನೆ. ಹಾಗಾದರೆ ಈ ದೈವಿಕ ಸೂಚನೆಯು ತಪ್ಪೇ? ಅವರು ಹೇಳುತ್ತಾರೆ, "ಇಲ್ಲ. ಅದು ನಿಖರವಾಗಿ ಸರಿಯಾಗಿದೆ. ಅವರು ಪ್ರವಾದಿ(ಸ) ಮೃತಪಟ್ಟಿದ್ದಾರೆ ಎಂದು ಹೇಳುವವರು ಸುಳ್ಳುಗಾರರು ಎಂದು. ಇದಕ್ಕಿಂತ ಹೆಚ್ಚು ಅವಮಾನಕರವಾದ ಸಂಗತಿ ಬೇರೆ ಇಲ್ಲ. ಸತ್ಯವೆಂದರೆ ಪ್ರವಾದಿ(ಸ) ಅವರಲ್ಲಿ ಎಂತಹ ಮಹತ್ವವಿದೆ ಎಂದರೆ ಅನ್ಯ ಪ್ರವಾದಿಯರಲ್ಲಿ ಇಂತಹ ಮಹತ್ವ ಕಾಣಲು ಸಾಧ್ಯವಿಲ್ಲ. ಎಂತಹ ದುಃಖಕರವಾದ ವಿಷಯವಿದು ಯಾವ ನಬಿ(ಸ) ರವರ ಉಮ್ಮತ್ತಿ ಎಂದು ಪರಿಗಣಿಸುತ್ತಾರೋ ಅವರನ್ನೇ (ಮಾಝುಲ್ಲಾಹ್) ಮೃತರು ಎಂದು ಹೇಳುತ್ತಾರೆ ಮತ್ತು ಯಾವ ನಬಿಯ ಉಮ್ಮತ್ತನ್ನು ಅಲ್ಲಾಹನು **"ಝುರಿಬತ್ ಅಲೈಹಿಮುಝ್ಝುಲ್ಲತುಲ್ ಮಸ್ಕನ"** (ಅಂದರೆ ಅವರ ಮೇಲೆ ಅವಮಾನ ಮತ್ತು ಅವಮಾನದ ಹೊಡೆತದಿಂದ ನಾಶವಾಗುತ್ತದೆ) ಆತನನ್ನು ಜೀವಂತ ನಬಿ ಎಂದು ನಂಬುತ್ತಾರೆ. (ಮಲ್‌ಫೂಝಾತ್, ಸಂಪುಟ–5, ಪುಟಗಳು 28–29, 1985 ಇಂಗ್ಲೆಂಡ್ ಆವೃತ್ತಿ)

ಪ್ರವಾದಿ(ಸ) ರ ಮುಂಚೆ ಬಂದ ಪ್ರವಾದಿ ಎಂದು ಹೇಳಿದ ನಂತರ, ಈಗ ಯಾರೂ ಬರಲು ಸಾಧ್ಯವಿಲ್ಲ. ಈಸ ನಬಿ ಮುಂದೆ ಬರಲು ಸಾಧ್ಯವಿಲ್ಲ. ಅವರು ಹಝ್ರತ್ ಮೂಸ(ಅ)ರ ಖೌಮಿನ ಪ್ರವಾದಿಯಾಗಿದ್ದರು ಮತ್ತು ಅವರು ನಿಧನರಾದರು. ಹಝ್ರತ್ ಮೂಸ(ಅ) ನ ಜನಾಂಗದ ಯಾವುದೇ ಪ್ರವಾದಿಗಳು ಈಗ ಬರಲು ಸಾಧ್ಯವಿಲ್ಲ. ಈ ಅನುಗ್ರಹವು ಈಗ ಪ್ರವಾದಿ(ಸ) ರವರ ಮೂಲಕವೇ ಮತ್ತು ಅವರನ್ನು ಅನುಸರಿಸುವ ಮೂಲಕವೇ ಮುಂದುವರಿಯುವುದು ಎಂದು ನೀವು ಹೇಳುತ್ತೀರಿ ಏಕೆಂದರೆ ಪ್ರವಾದಿ(ಸ) ಅವರೇ ಜೀವಂತ ಪ್ರವಾದಿಯಾಗಿದ್ದಾರೆ:

ಆದ್ದರಿಂದ, ಈ ಯುಗದಲ್ಲಿ, ಪ್ರವಾದಿ(ಸ) ರನ್ನು ಅನುಸರಿಸಿ, ಸರ್ವಶಕ್ತನಾದ ಅಲ್ಲಾಹನು ನಿಮ್ಮನ್ನು ವಾಗ್ದತ್ತ ಮಸೀಹನನ್ನಾಗಿ ಕಳುಹಿಸಿದ್ದಾನೆ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ನಾನು ನನ್ನ ಯಾವುದೇ ತಜ್ಞತೆಯ ಕಾರಣದಿಂದಲ್ಲ ಕೇವಲ ಅಲ್ಲಾಹನ ಅನುಗ್ರಹದ ಕಾರಣದಿಂದ ಈ ಅನುಗ್ರಹದ ಪರಿಪೂರ್ಣ ಭಾಗವನ್ನು ಪಡೆದೆನು. ಅದು ನನಗಿಂತ ಮೊದಲು ಪ್ರವಾದಿಗಳಿಗೂ, ಸಂದೇಶವಾಹಕರಿಗೂ, ಅಲ್ಲಾಹನಿಂದ ಆಯ್ಕೆಗೊಂಡವರಿಗೂ ನೀಡಲ್ಪಟ್ಟದ್ದಾಗಿದೆ. ನನ್ನ ಯಜಮಾನರಾದ, ಪ್ರವಾದಿಗಳ ಅಭಿಮಾನ, ಸೃಷ್ಟಿಗಳಲ್ಲಿ ಶ್ರೇಷ್ಠ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಾನು ಅನುಸರಿಸದೆ ಇದ್ದಿದ್ದರೆ ನನಗೆ ಈ ಅನುಗ್ರಹ

ಪಡೆಯಲು ಸಾಧ್ಯವಾಗುತ್ತಿರಲಿಲ್ಲ. ನಾನು ಗಳಿಸಿರುವುದೆಲ್ಲವೂ ಈ ಅನುಸರಣೆ ಮೂಲಕ ಲಭಿಸಿದವುಗಳಾಗಿವೆ. ನಾನು ನನಗೆ ದೊರೆತ ಸತ್ಯವಾದ ಜ್ಞಾನದಿಂದ ತಿಳಿದಿರುವೆನು, ಯಾವುದೇ ಮನುಷ್ಯನು ಈ ಪ್ರವಾದಿಯನ್ನು ಅನುಸರಿಸದೆ ಅಲ್ಲಾಹನ ಸಾಮೀಪ್ಯಗಳಿಸಲಾರನು ಮತ್ತು ಪರಿಪೂರ್ಣ ಜ್ಞಾನವನ್ನು ಪಡೆಯುಲಾರನು. ಹಝ್‌ರತ್ ಪೈಗಂಬರನ್ನು(ಸ) ನಿಷ್ಠಾಪೂರ್ಣವಾಗಿ ಅನುಸರಿಸುವುದರಿಂದ ಎಲ್ಲದಕ್ಕಿಂತಲೂ ಮೊದಲು ನಿಮ್ಮ ಹೃದಯದಲ್ಲುಂಟಾಗುವ ಪರಿವರ್ತನೆ ಏನೆಂದು ನಿಮಗೆ ನಾನು ತಿಳಿಸಲು ಇಲ್ಲಿ ಬಯಸುತ್ತೇನೆ: ನಿಮ್ಮ ಹೃದಯ ನಿಷ್ಕಳಂಕವಾಗುತ್ತದೆ; ಐಹಿಕ ಸುಖದ ಪ್ರೇಮ ನಿಮ್ಮ ಹೃದಯಗಳಿಂದ ದೂರ ಸರಿಯುತ್ತದೆ. ನಿಮ್ಮ ಹೃದಯ ಅನಂತವಾದ ದೈವಿಕ ಆನಂದವನ್ನು ಆಶಿಸುತ್ತಾ ಇರುತ್ತದೆ. ಅನಂತರ ನಿಷ್ಕಳಂಕವಾದ ಹೃದಯದ ಕಾರಣದಿಂದ ಪವಿತ್ರ ಮತ್ತು ಪರಿಪೂರ್ಣವಾದ ದೈವಿಕ ಪ್ರೇಮ ಲಭಿಸುತ್ತದೆ. ಈ ವರದಾನಗಳೆಲ್ಲ ಹಝ್‌ರತ್ ಪೈಗಂಬರನ್ನು(ಸ) ಅನುಸರಣೆ ಮಾಡುವುದರಿಂದ ವಾರಿಸುಹಕ್ಕಾಗಿ ದೊರೆಯುತ್ತವೆ. ಅಲ್ಲಾಹನು ಸ್ವತಃ ಹೇಳಿದಂತೆ. **“ಖುಲ್ ಇನ್‌ಕುನ್‌ತುಮ್ ತುಹಿಬ್ಬೂನಲ್ಲಾಹ ಫತ್ತಬಿಊನಿ ಯುಹ್ಬಿಬ್ ಕುಮುಲ್ಲಾಹ್”** ಅಂದರೆ ನೀವು ಅಲ್ಲಾಹನನ್ನು ಪ್ರೀತಿಸುವವರಾಗಿದ್ದರೆ ನನ್ನನ್ನು ಅನುಸರಿಸಿರಿ, ಹೀಗೆ ಮಾಡಿದರೆ ಅಲ್ಲಾಹನು ಸಹ ನಮ್ಮನ್ನು ಪ್ರೀತಿಸುವನು. ಬದಲಾಗಿ ಏಕಪಕ್ಷೀಯ ಪ್ರೀತಿಯ ಹಕ್ಕು ಸುಳ್ಳು ಮತ್ತು ಉತ್ಪ್ರೇಕ್ಷೆಯಾಗಿದೆ. ಮನುಳ್ಯನು ಅಲ್ಲಾಹನನ್ನು ನಿಜವಾಗಿಯೂ ಪ್ರೀತಿಸಿದಾಗ, ಅಲ್ಲಾಹನು ಅವನನ್ನು ಸಹ ಪ್ರೀತಿಸುತ್ತಾನೆ. ನಂತರ ಅವನಗೆ ಒಂದು ಸ್ವೀಕಾರವು ಭೂಮಿಯ ಮೇಲೆ ಹರಡುತ್ತದೆ ಮತ್ತು ನಿಜವಾದ ಪ್ರೀತಿಯನ್ನು ಸಾವಿರಾರು ಮಾನವರ ಹೃದಯದಲ್ಲಿ ಸುರಿಯಲಾಗುತ್ತದೆ ಮತ್ತು ಆಕರ್ಷಣೆಯ ಬಲವನ್ನು ಅವನ ಮೇಲೆ ದಯಪಾಲಿಸಲಾಗುತ್ತದೆ ಮತ್ತು ಯಾವಾಗಲೂ ಅವನೊಂದಿಗಿರುವ ಅವನಿಗೆ ಒಂದು ಪ್ರಕಾಶವನ್ನು ನೀಡಲಾಗುತ್ತದೆ. (ಆದ್ದರಿಂದ ನಾವು ದೂರದ ಆಫ್ರಿಕಾದ ದೇಶಗಳಲ್ಲಿಯೂ ಸಹ, ಸರ್ವಶಕ್ತನಾದ ಅಲ್ಲಾಹನು ಈ ಪ್ರೀತಿಯನ್ನು ಲಕ್ಷಾಂತರ ಜನರು ಅಹ್ಮದಿಯತ್‌ಗೆ ಸೇರುತ್ತಿರುವುದನ್ನು ನಾವು ನೋಡುತ್ತೇವೆ. ಅವರು ವಾಗ್ದತ್ತ ಮಸೀಹರನ್ನು ಅನುಸರಿಸುತ್ತಿದ್ದಾರೆ)

ಮತ್ತೆ ಮುಂದೆ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: “ಓರ್ವ ಮನುಳ್ಯನು ಅಲ್ಲಾಹನನ್ನು ಪ್ರಾಮಾಣಿಕ ಹೃದಯದಿಂದ ಪ್ರೀತಿಸಿದಾಗ ಮತ್ತು ಅವನನ್ನು ಇಡೀ ಲೋಕದ ಮೇಲೆ ಅಪ್ಪಿಕೊಂಡಾಗ, ಮತ್ತು ಅಲ್ಲಾಹನನ್ನು ಹೊರತುಪಡಿಸಿ ಇತರರ ಶ್ರೇಷ್ಠತೆ ಮತ್ತು ಸಮರ್ಥನೆ ಅವನ ಹೃದಯದಲ್ಲಿ ಉಳಿಯುವುದಿಲ್ಲ, ಬದಲಿಗೆ ಅವನು ಎಲ್ಲರನ್ನೂ ಸತ್ತ ಹುಳುಗಿಂತ ಕೆಟ್ಟದಾಗಿ ಪರಿಗಣಿಸುತ್ತಾನೆ. ನಂತರ ಅಲ್ಲಾಹನು, ಅವನ ಮನಸ್ಸನ್ನು ನೋಡುತ್ತಾನೆ, ದೊಡ್ಡ ಅಭಿವ್ಯಕ್ತಿಯೊಂದಿಗೆ ಅವನ ಮೇಲೆ ಅವತರಿಸುತ್ತಾನೆ, ಮತ್ತು ಸೂರ್ಯನ ಎದುರು ಇರಿಸಲಾಗಿರುವ ಕನ್ನಡಿಯಲ್ಲಿ ಸೂರ್ಯನ ಪ್ರತಿಬಿಂಬದಂತೆ, ಅದು ರೂಪಕವಾಗಿ ಹೇಳಬಹುದು ಬಹುಶಃ ಅದೇ ಸೂರ್ಯ ಈ ಕನ್ನಡಿಯಲ್ಲಿ ಆಕಾಶದಲ್ಲಿದೆ ಎಂದು. ಈ ರೀತಿಯಾಗಿ ಅಲ್ಲಾಹನು ಅಂತಹ ಹೃದಯದ ಮೇಲೆ ಅವತರಿಸುತ್ತಾನೆ ಮತ್ತು ಅವನ ಹೃದಯುವನ್ನು ಅವನ ಸಿಂಹಾಸನವನ್ನಾಗಿ ಮಾಡುತ್ತಾನೆ. ಮನುಳ್ಯನನ್ನು ಯಾವ ಉದ್ದೇಶಕ್ಕಾಗಿ ಸೃಷ್ಟಿಸಲಾಗಿದೆಯೋ ಅದು ಇದಾಗಿದೆ.” (ಹಖೀಖತುಲ್ ವಹಿ, ರೂಹಾನ ಖಝಾಇನ್, ಸಂಪುಟ–22, ಪುಟ–64–65)

ಒಟ್ಟಿನಲ್ಲಿ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್, ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಪರಿಪೂರ್ಣವಾಗಿ ಪ್ರೀತಿಸುವವರೂ ಅನುಸರಣೆ ಮಾಡುವವರೂ ಆಗಿದ್ದರು. ಆ ಕಾರಣದಿಂದ ಅಲ್ಲಾಹನು ಅವರನ್ನು ಪ್ರೀತಿಸಿದನು ಮತ್ತು ಅವರಿಗೆ ಮಸೀಹ್ ಮೌಊದ್ ಮತ್ತು ಮಹ್‌ದೀ ಮೌಊದ್ ಮತ್ತು ತಾಬಿಅ್ ನಬಿಯಾಗುವ ಗೌರವ ನೀಡಿದನು.

ನಾವು ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿದ ಭಾಗ್ಯದ ಬಗ್ಗೆ ಪ್ರಜ್ಞೆಯುಳ್ಳವರನ್ನಾಗಿ ಅಲ್ಲಾಹನು ನಮ್ಮನ್ನು ಮಾಡಲಿ. ನಾವು ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಪರಿಪೂರ್ಣವಾಗಿ ಅನುಸರಿಸುವವರನ್ನಾಗಿ ಅಲ್ಲಾಹನು ನಮ್ಮನ್ನು ಮಾಡಲಿ. ನಮ್ಮಲ್ಲಿ ಪ್ರತಿಯೊಬ್ಬನು ತನ್ನ ಶಕ್ತಿ ಸಾಮರ್ಥ್ಯಕ್ಕನುಸಾರವಾಗಿ ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಡೆವಳಿಕೆಗಳನ್ನು ಅನುಸರಿಸುವ ಭಾಗ್ಯ ನೀಡಲಿ. ಇತರ ಮುಸ್ಲಿಮರಿಗೂ ಸಹ ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಈ ಸತ್ಯಸಂಧನಾದ ಪ್ರೇಮಿಯನ್ನು ಗುರುತಿಸಿ ನಂಬುವ ಭಾಗ್ಯ ಅಲ್ಲಾಹನು ನೀಡಲಿ – **ಆಮೀನ್**.

*****************

**(ಪುಟ ಸಂಖ್ಯೆ 14ರ ಉಳಿದ ಭಾಗ)**

ಏಕದೇವತ್ವದ ಘನತೆ ಎತ್ತಿ ಹಿಡಿಯುವ ಮತ್ತು ಏಕದೇವತ್ವದ ಘೋಷಣೆಗಳ ಈ ದೃಶ್ಯಗಳು ಲೋಕವು ಮಕ್ಕ ವಿಜಯದ ಸಮಯ ಕಂಡಿದೆ. ಆ ವಿಜಯದ ಸಂತೋಷದಲ್ಲಿ ಅವರ ಶಿರವು ಒಂಟೆಯ ಡುಬ್ಬದವರೆಗೆ ಬಾಗಿ ಹೋಗಿತ್ತು. ಇನ್ನೊಂದೆಡೆ ಅವರು–ಜಾಅಲ್ ಹಕ್ಕು ವ ಝುಹಖಲ್ ಬಾತಿಲ್, ಇನ್ನಲ್ ಬಾತಿಲ ಕಾನ ಝುಹೂಖ” ಘೋಷಣೆ ಹಾಕಿದರು.

ದೇವಏಕತ್ವದ ಅದೇ ಪ್ರೇಮ ಸಹಾಬರಲ್ಲಿ ಉಂಟು ಮಾಡಿದ್ದರು. ಅಂದ ಹಾಗೆ ಅನ್ಸಾರಿಯೊಬ್ಬರು ಅವರು ಬುಖಾ ಮಸೀದಿಯಲ್ಲಿ ನಮಾಝ್ ನಿರ್ವಹಿಸಿಕೊಡುತ್ತಿದ್ದರು. ಅವರ ಬಗ್ಗೆ ವರದಿ ಈರೀತಿ ಇದೆ. ಅವರು ಎಲ್ಲಾ ಸ್ವರಸಹಿತ ಪಠಿಸುವ ನಮಾಝುಗಳಲ್ಲಿ ಸೂರಃ ಇಖ್ಲಾಸ್ ಅನ್ನೇ ಪಠಿಸುತ್ತಿದ್ದರು. ಅದರ ವಿವರ ಸಹಾಬರು ಹಝ್‌ರತ್ ರಸೂಲುಲ್ಲಾಹ್(ಸ) ರವರಿಗೆ ನೀಡಿದರು. ಆ ಸಹಾಬಿ ಹೇಳಿದರು. ಹುಝೂರ್(ಸ) ಈ ಸೂರಃ ಅಲ್ಲಾಹನ ಏಕತ್ವದಿಂದ ತುಂಬಿದೆ. ಆದುದರಿಂದ ಇದು ನನಗೆ ತುಂಬ ಇಷ್ಟವಿದೆ. ಹುಝೂರ್(ಸ) ಹೇಳಿದರು. ಈ ಸೂರಃ ದೊಂದಿಗಿನ ನಿಮ್ಮ ಪ್ರೀತಿ ನಿಮಗೆ ಸ್ವರ್ಗಕ್ಕೆ ದಾರಿ ಮಾಡಿಕೊಡಲಿದೆ.

ಹಝ್‌ರತ್ ರಸೂಲುಲ್ಲಾಹ್(ಸ) ಆಯುಸ್ಸುಪೂರ್ತಿ ಅಲ್ಲಾಹನ ಗೌರವ ಮತ್ತು ಏಕತ್ವದ ಉಪದೇಶ ನೀಡುವುದರಲ್ಲಿ ಕಳೆದರು. ಜೀವಬಿಡುವ ಸಮಯದಲ್ಲೂ ಅವರ ನಾಲಿಗೆಯ ಮೇಲೆ ಈ ಪವಿತ್ರವಾದ ಪದಗಳೇ ಇದ್ದುವು. “ಲನಲ್ಲಾಹು ಯಹೂದು ವನ್ನಸಾರ ಅತ್ತಖಿಝು ಖುಬೂರ ಅಂಬಿಯಾಯಿಹಿಂ ಮಸ್ಜಿದಾ (ಬುಖಾರಿ) ಅಲ್ಲಾಹನು ಯಹೂದರ ಮತ್ತು ನಸಾರಗಳ ಮೇಲೆ ಶಾಪವಿರಿಸಲಿ. ಅವರು ತನ್ನ ಪ್ರವಾದಿಗಳ ಸಮಾಧಿಗಳನ್ನು ಸಾಷ್ಟಾಂಗ ಎರಗಲು ಉಪಯೋಗಿಸಿದರು. ತನಗಾಗಿ ದುಆ ಮಾಡಿಕೊಂಡರು. “ಅಲ್ಲಾಹುಮ್ಮ ಲಾ ತಜ್‌ಅಲ್ ಖಬ್ರಿ ವಲನಾ ಯುಬುದು” ಓ ಅಲ್ಲಾಹ್ ನನ್ನ ಸಮಾಧಿಯನ್ನು ಬಹುದೇವಾರಾಧನೆಯ ಸ್ಥಳವನ್ನಾಗಿ ಮಾಡಬೇಡ.

ಹಝ್‌ರತ್ ಅಖದಸ್ ಮಸೀಹ್ ಮೌಊದ್(ಅ) ಹಝ್‌ರತ್ ರಸೂಲುಲ್ಲಾಹ್(ಸ) ರವರ ಸತ್ಯ ನಿಷ್ಠೆಯ ಅನುಸರಣೆಯ ಫಲವಾಗಿ ದೈವಿಕ ಸಾನಿಧ್ಯ ಪಡೆಯಲು ಹೇಳುತ್ತಾರೆ.

ನನ್ನ ವೈಯಕ್ತಿಕ ಅನುಭವವಾಗಿದೆ. ಹಝ್‌ರತ್ ರಸೂಲುಲ್ಲಾಹ್(ಸ) ರೊಂದಿಗೆ ಸತ್ಯನಿಷ್ಠೆಯಿಂದ ಅನುಸರಿಸುವನು ಮತ್ತು ಅವರೊಂದಿಗೆ ಪ್ರೀತಿಯುಳ್ಳ ಮನುಷ್ಯನನ್ನು ಅಂತಿಮವಾಗಿ ಅಲ್ಲಾಹನ ಪ್ರಿಯ ದಾಸನಾಗಿ ಮಾರ್ಪಡಿಸುತ್ತದೆ. ಹೇಗೆಂದರೆ ಸ್ವಯಂ ಅವನ ಹೃದಯದಲ್ಲಿ ತನ್ನ ಪ್ರೀತಿಯ ಒಂದು ದಾಹ ಉಂಟು ಮಾಡುತ್ತಾನೆ. ಆಗ ಇಂತಹ ವ್ಯಕ್ತಿಯೊಬ್ಬನು ಕೇವಲ ಅಲ್ಲಾಹನಿಗಾಗಿ ಉಳಿದುಬಿಡುತ್ತದೆ. ಆಗ ದೈವಿಕ ಪ್ರೀತಿಯ ಒಂದು ವಿಶೇಷವಾದ ಪ್ರಕಾಶ ಅವನ ಮೇಲೆ ಬೀಳುತ್ತದೆ. ಅವನಿಗೆ ಒಂದು ಪೂರ್ಣಪ್ರಮಾಣದ ಪ್ರೀತಿಯ ಅಚಲ ಭಾವನೆಗಳನ್ನು ನೀಡಿ ತನ್ನೆಡೆ ಸೆಳೆದುಕೊಳ್ಳುತ್ತಾನೆ ಆಗ ದೇಹೇಚ್ಛೆಗಳ ಮೇಲೆ ನಿಯಂತ್ರಣ ಸಾಧಿಸುತ್ತಾನೆ. ಆಗ ಅವನ ಪರವಾಗಿ ಎಲ್ಲಾ ರೀತಿಯಿಂದಲೂ ಅಲ್ಲಾಹನ ಪವಾಡ ರೀತಿಯ ದೃಷ್ಟಾಂತಗಳು ಪ್ರಕಟಗೊಳ್ಳುತ್ತವೆ. **(ಹಖೀಖತುಲ್ ವಹಿ, ರೂಹಾನಿ ಖಝಾಇನ್, ಸಂಪುಟ–22 ಪುಟ–67)**.

ಅಲ್ಲಾಹನು ನಮಗೆಲ್ಲರಿಗೂ ದೇವಏಕತ್ವ ಕುರಿತು ಹಝ್‌ರತ್ ರಸೂಲುಲ್ಲಾಹ್(ಸ) ರವರ ಮಹೋನ್ನತವಾದ ಶಿಕ್ಷಣಗಳ ಮೇಲೆ ತನುಮನದಿಂದ ನಡೆದುಕೊಳ್ಳುವ ಭಾಗ್ಯ ದಯಪಾಲಿಸಲಿ. **ಆಮೀನ್**.

**********

**(ಪುಟ ಸಂಖ್ಯೆ 18ರ ಉಳಿದ ಭಾಗ)**

ನುಬುವತ್ತಿನ ಎಲ್ಲಾ ಇದ್ದ ಮಹಿಮೆಗಳು
ಅವೆಲ್ಲ ತಮ್ಮಲ್ಲಿ ನಿಶ್ಚಯವಾಗಿಯೂ ಕ್ರೂಢಿಕೊಂಡಿವೆ.
ನಮ್ರತೆಯ ಗುಣವಾಗಲಿ ಮತ್ತು ಪ್ರತಾಪದ ಗುಣವಾಗಲಿ
ಎಲ್ಲ ಅದ್ವಿತೀಯ ಗುಣಗಳ ಅಗರ ನೀವಾಗಿದ್ದೀರಿ.
ಹಿಂಸೆಯ ಪ್ರತೀಕಾರ ಕ್ಷಮಾಶೀಲತೆಯಿಂದ ಪಡೆದರು.
ಅಲೈಕಸ್ಸಲಾತು ಅಲೈಕಸ್ಸಲಾಂ

ಅಲ್ಲಾಹನು ನಮಗೆ ನಮ್ಮ ಪ್ರೀತಿಯ ನೇತಾರರಾದ ಸಯ್ಯದ್‌ನಾ ಹಝ್‌ರತ್ ಮುಹಮ್ಮದ್ ಮುಸ್ತಫಾ(ಸ) ರವರೊಂದಿಗೆ ನೈಜ ರೀತಿಯಲ್ಲಿ ಪ್ರೀತಿಸುವ ಭಾಗ್ಯ ದಯಪಾಲಿಸಲಿ, ಅವರ ಫಲವಾಗಿ ನಾವು ತಮ್ಮ ರೀತಿಯ ನೇತಾರರ ಶಿಕ್ಷಣವನ್ನು ತನುಮನದಿಂದ ನಡೆದುಕೊಳ್ಳುವವರಾಗಲಿ ಮತ್ತು ತಾವು ತೋರಿದ ಮಾರ್ಗಗಳನ್ನು ಕಿಂಚಿತ್ತು ತೊರೆಯುವವರು ಆಗದಿರಲಿ. **ಆಮೀನ್ ವ ಆಖಿರು ದಾವಾನ ಅನಿಲ್ ಹಮ್ದು ಲಿಲ್ಲಾಹಿ ರಬ್ಬಿಲ್ ಆಲಮೀನ್**.

**************

# ಹಝ್ರತ್ ರಸೂಲುಲ್ಲಾಹ್(ಸ) ರವರು ಓರ್ವ ಮನೋವೈಜ್ಞಾನಿಕ ತಜ್ಞರ ನೆಲೆಯಲ್ಲಿ

(ಹಝ್ರತ್ ಮಿರ್ಝಾ ಬಶೀರ ಅಹ್ಮದ್ ಸಾಹಿಬ್ ಎಂ. ಎ)

### ಪ್ರವಾದಿಗಳ ಒಂದು ಅದ್ಭುತವಾದ ಮಹೋನ್ನತವಾದ ಸ್ಥಾನಮಾನ

ಲೋಕದಲ್ಲಿ ಹಲವು ಮನೋವೈಜ್ಞಾನಿಕ ತಜ್ಞರಿದ್ದಾರೆ. ಇಂದಿನ ಯುಗದಲ್ಲಂತೂ ಈ ಜ್ಞಾನ ಬಹಳಷ್ಟು ಪ್ರಗತಿ ಸಾಧಿಸಿದೆ. ಆದರೆ ಗಾಢವಾಗಿ ಯೋಚಿಸಿ ನೋಡಿದಾಗ ಹೆಚ್ಚಿನವರು ಕೇವಲ ತಾಂತ್ರಿಕ ರೀತಿಯಲ್ಲಿ ಜ್ಞಾನ ಹೊಂದಿರುತ್ತಾರೆ. ಅದರಿಂದ ಮೇಲ್ಪಟ್ಟು ವಾಸ್ತವಿಕ ಜ್ಞಾನಕ್ಕೆ ತಲುಪಿರುವುದಿಲ್ಲ. ಅವರು ಕೇವಲ ಶಿಕ್ಷಣಕ್ಕೆ ಮಾತ್ರ ಸೀಮಿತವಾಗಿರುತ್ತಾರೆ. ಅವರು ನಿಜವಾದ ಮತ್ತು ಕಾರ್ಯರೂಪದ ಜ್ಞಾನದಿಂದ ವಂಚಿತರಾಗಿರುತ್ತಾರೆ. ಕೇವಲ ಜ್ಞಾನಕ್ಕೆ ಅಂಟಿಕೊಳ್ಳುವುದು ಸರಿಯಲ್ಲ. ಲೋಕದಲ್ಲಿ ಅದೇ ಕಾರಣದಿಂದ ನಿರೀಕ್ಷಿಸಿದಂತಹ ಫಲ ದೊರೆಯುತ್ತಿಲ್ಲ. ಜ್ಞಾನವನ್ನು ಕಾರ್ಯರೂಪಕ್ಕೆ ತರುವ ಬಹಳ ಕಡಿಮೆ ಜನರಿದ್ದಾರೆ. ಜ್ಞಾನ ಪಡೆದವರು ಸಾವಿರಾರಲ್ಲ, ಲಕ್ಷಾಂತರ ಜನರು ತಜ್ಞರಿದ್ದಾರೆ. ಆದರೆ ಅವರ ಜ್ಞಾನ ತಾಂತ್ರಿಕ ಮಟ್ಟದಿಂದ ಮುಂದೆ ಹೋಗುವುದಿಲ್ಲ. ಅವರ ವಯಸ್ಸುಪೂರ್ತಿ ಪರಿಭಾಷೆ ಪಠಿಸುವುದರಲ್ಲಿ ಕಳೆದುಹೋಗಿರುತ್ತದೆ. ಅದರ ನಿಜವಾದ ಉದ್ದೇಶ ಈಡೇರಿಸುವಂತಹ ಶಿಕ್ಷಣದಿಂದ ವಂಚಿತರಾಗಿರುತ್ತಾರೆ. ಅಲ್ಲದೇ ಕೆಲ ಸಮಯದಲ್ಲಿ ನಾಮ ಮಾತ್ರದ ಜ್ಞಾನಿಗಳು ಸಾಕ್ಷ್ಯ ಒದಗಿಸುವುದರಲ್ಲಿ ದುರ್ಬಲರಾಗಿರುತ್ತಾರೆ. ಏಕೆಂದರೆ ಅವರು ಕೇವಲ ತಾಂತ್ರಿಕ ಮಟ್ಟಕ್ಕಷ್ಟೇ ಸೀಮಿತವಾಗಿರುತ್ತಾರೆ. ಆದರೆ ಸಾಮಾನ್ಯ ಜನರ ಎದುರಿನಲ್ಲಿ ಪ್ರವಾದಿಗಳನ್ನು ತುಲನೆ ಮಾಡಿ ನೋಡಿದರೆ ಸಂಕಷ್ಟ ರೀತಿಯಲ್ಲಿ ಅವರ ಪ್ರತಿಭೆ ಕಾಣುವಂತಾಗುತ್ತದೆ. ಅವರ ಎಲ್ಲಾ ಜ್ಞಾನಗಳು ವಾಸ್ತವ ಆಧಾರಿತವಾಗಿರುತ್ತದೆ. ಅಲ್ಲದೇ ಕೆಲವೊಮ್ಮೆ ತಾಂತ್ರಿಕ ನೆಲೆಯಲ್ಲಿ ಕಡಿಮೆ ಜ್ಞಾನವಿದ್ದರೂ ಎಲ್ಲಾ ಜ್ಞಾನದಿಂದ ಸಂಬಂಧ ಹೊಂದಿದವರಾಗಿರುತ್ತಾರೆ. ಅದರ ನಿಜವಾದ ಉದ್ದೇಶ ಅಂದರೆ ಬೇರಿನಿಂದ ಸಂಬಂಧಿಸಿರುತ್ತಾರೆ. ಆದುದರಿಂದ ಅದರಿಂದ ಪರಿಪೂರ್ಣತೆ ಹೊಂದಿರುತ್ತಾರೆ. ಅವರಂತೆ ಯಾವ ವ್ಯಕ್ತಿಯು ಇಂತಹ ಜ್ಞಾನದಲ್ಲಿ ಪರಿಪೂರ್ಣರಾಗಿರುವುದಿಲ್ಲ.

### ಪ್ರವಾದಿಗಳು ಮತ್ತು ಆತ್ಮಜ್ಞಾನ

ಆತ್ಮಜ್ಞಾನ ಸಹ ಮನುಷ್ಯನ ಬೌದ್ಧಿಕ ಮತ್ತು ಮಾನಸಿಕ ಭಾವನೆಗಳ ಜ್ಞಾನವಾಗಿದೆ. ಅದು ಪ್ರವಾದಿಗಳ ವಿಶೇಷವಾದ ಶಿಕ್ಷಣದ ಭಾಗವಾಗಿರುತ್ತದೆ. ಏಕೆಂದರೆ ತರಬೇತಿ ಮತ್ತು ಸಾಧಾರಣೆಗೆ ಈ ಶಿಕ್ಷಣಕ್ಕೆ ವಿಶೇಷವಾದ ಸಂಬಂಧವಿದೆ. ನಿಜ ಹೇಳಬೇಕಾದರೆ ಶರೀಅತ್ತಿನ ಬುನಾದಿಯೇ ಅದಾಗಿರತ್ತದೆ. ಈ ಪೈಕಿ ಪವಿತ್ರ ಖುರ್‌ಆನ್ ಹೇಳುತ್ತದೆ ಮತ್ತು ಪರಿಸರದಿಂದಲೂ ಅದೇ ತಿಳಿದುಬರುವುದು. ಪ್ರವಾದಿಗಳು ಸಹ ಸ್ಥಾನಮಾನದಲ್ಲಿ ಭಿನ್ನತೆ ಹೊಂದಿರುತ್ತರೆ. ಯಾವ ರೀತಿಯ ಕಾರ್ಯ ಒಬ್ಬ ಪ್ರವಾದಿಗೆ ನೀಡಲಾಗುತ್ತದೆಯೋ ಅದರನ್ವಯವೇ ಅಲ್ಲಾಹನು ಅವರಿಗೆ ಶಕ್ತಿ ನೀಡಿರುತ್ತಾನೆ. ಜ್ಞಾನಗಳ ಬಾಗಿಲುಗಳನ್ನು ತೆರೆಯುತ್ತಾನೆ.

### ರಸೂಲುಲ್ಲಾಹ್(ಸ) ಮತ್ತು ಆತ್ಮಜ್ಞಾನ

ನಮ್ಮ ಹಝ್ರತ್ ರಸೂಲುಲ್ಲಾಹ್(ಸ) ಖಾತಮನ್ನಬ್ಬಿಯೀನ್ ಆದ ಕಾರಣ ಗತಿಸಿದ ಪ್ರವಾದಿಗಳ ಎದುರಾಗಿ ಇಡೀ ಲೋಕದ ಸುಧಾರಣೆಗೋಸ್ಕರ ಆಗಮಿಸಿದ್ದರು. ಅವರ ಸಂದೇಶ ಪ್ರತಿಯೊಬ್ಬ ಮನುಷ್ಯನಿಗೆ ಸಂಬಂಧಿಸಿದ್ದಾಗಿತ್ತು. ಅವರು ಕರಿಯ, ಬಿಳಿಯ ಯಾರೇ ಆಗಿರಲಿ. ಅವರ ಶರೀಅತ್ (ಧರ್ಮಸಂಹಿತೆ) ಎಲ್ಲ ಸಮುದಾಯಗಳಿಗೂ ಮತ್ತು ಎಲ್ಲಾ ಕಾಲಘಟ್ಟಗಳಿಗೂ ಸಂಬಂಧಿಸಿದ್ದಾಗಿತ್ತು. ಆದುದರಿಂದ ಸಹಜವಾಗಿ ಅವರಿಗೆ ಆ ರೀತಿಯ ಶಕ್ತಿ ಸಾಮರ್ಥ್ಯವೂ ಸಹ ನೀಡಲಾಗಿತ್ತು. ಆ ರೀತಿಯ ಜ್ಞಾನಗಳು ಸಹ ನೀಡಲಾಗಿತ್ತು. ಆ ಮೂಲಕ ಈ ಮಹೋನ್ನತ ಕಾರ್ಯಗಳನ್ನು ಸಾಧಿಸಲು ಶಕ್ತವಾಯಿತು. ಅದರಿಂದ ಯಾವ ಪ್ರವಾದಿಗೆ ಅಪಮಾನವಾಗುವುದಿಲ್ಲ. ಏಕೆಂದರೆ ಅನ್ಯ ಪ್ರವಾದಿಗಳಿಗೆ ಆ ರೀತಿಯ ಜ್ಞಾನ ನೀಡಿದಿರಲಿಲ್ಲ. ಅವರು ಪಡೆದಂತಹ ಜ್ಞಾನಗಳು ಯಾರಿಗೂ ಸಹ ಕೊಡಲಾಗಿರುವುದಿಲ್ಲ. ಅವರಿಗೆ ಶಕ್ತಿ ಸಾಮರ್ಥ್ಯಗಳು ಕೊಟ್ಟು ಕಳುಹಿಸುವಂತೆ ಯಾರಿಗೂ ಕೊಟ್ಟು ಕಳುಹಿಸಿರಲಿಲ್ಲ. ಆದ್ದರಿಂದ ಅವರು ನುಡಿದರು. "ಅನಾ ಸಯ್ಯಿದು ವಲದಿ ಆದಮ ವಾಽಇಖರ" ನಾನು ಆದಮ ಸಂತತಿಯ ಸರದಾರನಾಗಿದ್ದಾನೆ. ಆದರೆ ಆ ಕಾರಣದಿಂದ ನನಗೆ ಯಾವ ಗರ್ವವೂ ಇಲ್ಲ. ಹಝ್ರತ್ ರಸೂಲುಲ್ಲಾಹ್(ಸ) ನಬಿಗಳಲ್ಲಿ ಸರ್ವಶ್ರೇಷ್ಠರಾದ ಕಾರಣ, ಪ್ರವಾದಿತ್ವಕ್ಕೆ ಆತ್ಮಜ್ಞಾನ ಅವಶ್ಯವಾದ್ದರಿಂದ, ನಬಿ(ಸ) ರವರು ಆತ್ಮಜ್ಞಾನದಲ್ಲೂ ಮೊದಲಿಗರಾಗಬೇಕಿತ್ತು. ಈಗ ನೋಡೋಣ, ನಿಜವಾಗಿಯೂ ಅವರು ಹಾಗಿದ್ದರೆ, ಹಝ್ರತ್ ರಸೂಲುಲ್ಲಾಹ್(ಸ) ರವರಿಂದ ಅಲ್ಲಾಹನು ತರಬೇತಿ ಮತ್ತು ಸುಧಾರಣೆಯ ಮಹೋನ್ನತವಾದ ಅದ್ವಿತೀಯ ಕಾರ್ಯ ಪಡೆಯಬೇಕಿತ್ತು. ಆದುದರಿಂದ ಆತ್ಮಜ್ಞಾನವು ಅವರಲ್ಲಿ ರಕ್ತಗತವಾಗಿ ಬಿಟ್ಟಿತ್ತು. ಒಂದು ಉತ್ತಮವಾದ ಸ್ಪಂಜ್ ಯಾವ ರೀತಿ ನೀರಿನಲ್ಲಿ ಮುಳುಗಿ ತೆಗೆದರೆ ನೀರಿನಿಂದ ತುಂಬಿರುತ್ತದೆ. ಅದೇ ರೀತಿ ಒಂದು ದೈವಿಕ ಸರೋವರದಂತೆ ಆತ್ಮಜ್ಞಾನದ ಶಾಶ್ವತವಾದ ಸತ್ಯಸಾಕ್ಷ್ಯತೆಗಳು ಅವರಲ್ಲಿ ಉಗಮಿಸುತ್ತಿದ್ದವು. ಈ ಸಂಕ್ಷಿಪ್ತ ಸಮಯದಲ್ಲಿ ಈ ಸಂಕ್ಷಿಪ್ತ ವಿಷಯವನ್ನು ಸವಿವರವಾಗಿ ಹೇಳುವ ಅವಕಾಶವಿಲ್ಲ. ಬದಲಾಗಿ ಅದರ ಒಂದು ಭಾಗವಾಗಿ ಒಂದಿಷ್ಟು ಹೇಳಬಲ್ಲೆನು. ಆದುದರಿಂದ ಅತ್ಯಂತ ಸಂಕ್ಷಿಪ್ತ ರೂಪದಲ್ಲಿ ಕೆಲವು ಉದಾಹರಣೆಗಳನ್ನು ಮಾತ್ರ ಪ್ರಸ್ತುತಪಡಿಸುವೆನು. ಅದರಿಂದ ತಿಳಿದುಬರುವುದು ಯಾವ ರೀತಿ ಅವರಲ್ಲಿ ಆತ್ಮಜ್ಞಾನ ಶಾಶ್ವತವಾದ ತತ್ವಗಳಲ್ಲಿ ಒಳಗೊಂಡಿತ್ತು. ನಾನು ಅವರ ಸಂಭಾಷಣೆಯಿಂದ ದಿನನಿತ್ಯ ಮಾತುಕತೆಯಿಂದ ಗೋಚರವಾದ ಅಹವಾಲುಗಳಷ್ಟೇ ಪ್ರಸ್ತುತಪಡಿಸುವೆನು.

### ರಸೂಲುಲ್ಲಾಹ್(ಸ) ರವರ ನುಡಿಮುತ್ತುಗಳ ಶ್ರೇಷ್ಠತೆ

ನಾನು ಈಗಾಗಲೇ ಹೇಳುತ್ತೇನೆ. ಆತ್ಮಜ್ಞಾನವೆಂದರೆ ಸಾಮಾನ್ಯವಾಗಿ ಅದು ಮನುಷ್ಯನ ಬೌದ್ಧಿಕ ವಿವರಗಳು ಹಾಗೂ ಕಾರ್ಯಗಳಿಗೆ ಸಂಬಂಧಿಸಿದ ಜ್ಞಾನವಾಗಿರುತ್ತದೆ. ಈ ಜ್ಞಾನದಲ್ಲಿ ಬೌದ್ಧಿಕ ಮತ್ತು ಮಾನಸಿಕ ಭಾವನೆಗಳ ಕುರಿತು ಚರ್ಚಿಸಲಾಗುತ್ತದೆ. ಯಾವ ರೀತಿ ಮನುಷ್ಯನು ತನ್ನ ಪರಿಸರದಿಂದ ಪ್ರಭಾವಿತಗೊಳ್ಳುತ್ತಾನೆ ಮತ್ತು ಅವನ ಭಾವನೆಗಳು ಅದೇ ಪ್ರಕಾರ ಲಯ ಹೊಂದುತ್ತವೆ. ಹಝ್ರತ್ ರಸೂಲುಲ್ಲಾಹ್(ಸ) ರವರ ನುಡಿಗಳ ವಿಶೇಷತೆ ಎಂದರೆ ಅದರಲ್ಲಿ ಸಂಬೋಧಕ ಹಝ್ರತ್ ರಸೂಲುಲ್ಲಾಹ್(ಸ) ರವರ ನುಡಿಗಳ ವಿಶೇಷತೆ ಎಂದರೆ ಅದರಲ್ಲಿ ಸಂಬೋಧಕ ಒಬ್ಬ ವ್ಯಕ್ತಿಯಾಗಿರಲಿ ಅಥವಾ ಜಮಾಅತ್ ಆಗಿರಲಿ. ಅವರ ಬೌದ್ಧಿಕ ಭಾವನೆಗಳಿಗೆ ಪೂರ್ಣ ರೀತಿಯಲ್ಲಿ ಗಮನ ನೀಡಲಾಗುತ್ತಿತ್ತು. ಯಾವೊಬ್ಬ ವ್ಯಕ್ತಿಗೆ ಆಗಲಿ ಅಥವಾ ಜಮಾಅತಿನ ಭಾವನೆಗಳ ಸುಧಾರಣೆಗಳಿಗೆ ಬೇಕಾದ ರೀತಿಯಲ್ಲಿ ವರ್ತಿಸುತ್ತಿದ್ದರು. ಆ ಕಾರಣದಿಂದಲೇ ಅವರ ಪ್ರತಿಯೊಂದು ಮಾತು ಶ್ರೋತೃಗಳ ಮನದಲ್ಲಿ ಅಚ್ಚಾಗುತ್ತಿತ್ತು. ಅವರ ಮಾತುಗಳು ಭಾವನೆಯನ್ನು ತಪ್ಪು ಹಾದಿಯಲ್ಲಿ ನಡೆಯುವುದನ್ನು ಕಂಡರೆ ತಕ್ಷಣ ಎಂತಹ ಮಾತು ಆಡುತ್ತಿದ್ದರೆಂದರೆ ಕೇಳುಗನ ದಿಕ್ಕು ಬದಲಾಯಿಸುವಂತಿರುತ್ತಿತ್ತು. ಅವರ ಜೀವನದಲ್ಲಿ ಇಂತಹ ಸಾವಿರಾರು ಉದಾಹರಣೆಗಳನ್ನು ಕಾಣಬಹುದಾಗಿದೆ. ಅಲ್ಲದೇ ಅವರ ಇಡೀ ಜೀವನವೇ ಅದಕ್ಕೆ ಒಂದು ಉದಾಹರಣೆಯಾಗಿದೆ. ಆದರೆ ನಾನೀಗ ಇಲ್ಲಿ ನಮೂನೆಗೋಸ್ಕರ ಕೆಲ ಉದಾಹರಣೆಗಳು ಮಾತ್ರ ಪ್ರಸ್ತುಪಡಿಸುವೆನು. **ವಮಾ ತೌಫೀಖಿ ಇಲ್ಲಾ ಬಿಲ್ಲಾಹ್**

### ಬದರ್ ಯುದ್ಧದ ಉದಾಹರಣೆ

ಬದರ್ ಯುದ್ಧ ಸಂದರ್ಭದಲ್ಲಿ ಆಗ ಇನ್ನು ಅವಿಶ್ವಾಸಗಳು ಹಾಗೂ ಮುಸಲ್ಮಾನರು ಎದುರಾಗಿರಲಿಲ್ಲ. ಹೆಚ್ಚಿನ ಮುಸಲ್ಮಾನರಿಗೆ ಮಕ್ಕದಿಂದ ಅವಿಶ್ವಾಸಿಗಳ ಒಂದು ಬೃಹತ್ತಾದ ಸೈನ್ಯ ದಂಡೆತ್ತಿ ಬರುತ್ತಲಿದೆ ಎಂದು ತಿಳಿದಿರಲಿಲ್ಲ. ಕೇವಲ ಒಂದು ತಂಡ ಎದುರಾಗಬಹುದು ಎಂಬ ಭಾವನೆಯಿಂದ ಮನೆಗಳಿಂದ ಹೊರಟಿದ್ದರು. ಆ ಸಮಯ ಕೆಲ ಸಹಾಬರು ಅವರಿಗೆ ಮಕ್ಕದ ಓರ್ವ ಸಿಪಾಯಿ ನೀರಿನ ಚಿಲುಮೆಯತ್ತ ಸಿಕ್ಕಿದನು. ಅವನನ್ನು ಹಿಡಿದು ಹಝ್ರತ್ ರಸೂಲುಲ್ಲಾಹ್(ಸ) ರವರ ಸಮ್ಮುಖ ಹಾಜರುಪಡಿಸಿದರು. ಅವರು ಅವನಿಂದ ಅವಿಶ್ವಾಸಿಗಳ ಸೈನ್ಯದ ಬಗ್ಗೆ ಕೆಲ ಪ್ರಶ್ನೆಗಳನ್ನು ಕೇಳಿದರು. ಮಕ್ಕ ಸರದಾರರಲ್ಲಿ ಯಾರ್ಯಾರು ಜೊತೆಯಲ್ಲಿದ್ದಾರೆ? ಅವನು ಹೇಳಿದನು. ಅತ್ವ, ಶೀಬ, ಉಮಯ್ಯ, ನಝಾರ್ಬಿನ್ ಹಾರಿಸ್, ಉಬ್ಬ, ಅಬೂಜಹಲ್, ಅಬುಲ್ ಬಹರಿ, ಹಕೀಮ್ ಬಿನ್ ಹಝಾಮ್ ಮುಂತಾದವರು ಜೊತೆಯಲ್ಲಿದ್ದಾರೆ. ಈ ಜನರು ಖುರೇಶ ಗೋತ್ರದ ಪ್ರಮುಖರಾಗಿದ್ದರು ಮತ್ತು ಅತ್ಯಂತ ಧೀರ, ಶೂರ ದಂಡನಾಯಕರೆಂದು ಪರಿಗಣಿಸಲಾಗುತ್ತಿತ್ತು. ಅವರ ಹೆಸರುಗಳನ್ನು ಕೇಳಿ ಮತ್ತು ಮಕ್ಕದ ಈ ಎಲ್ಲಾ ಜನರು ಮುಸಲ್ಮಾನರನ್ನು ಮಟ್ಟ ಹಾಕಲು ಬರುತ್ತಿದ್ದಾರೆ ಎಂದು ತಿಳಿದು ಕೆಲ ದುರ್ಬಲ ಸ್ವಭಾವದ ಸಹಾಬರು ಗಾಬರಿಗೊಂಡರು. ಹಝ್ರತ್ ರಸೂಲುಲ್ಲಾಹ್(ಸ) ಅವರತ್ತ ದೃಷ್ಟಿ ಬೀರಿ ನಿರ್ಭಯವಾಗಿ ಹೇಳಿದರು. **"ಹಾಝಿಹಿ ಮಕ್ಕತು ಖದ್ ಅಲ್‌ಖತ್ ಇಲೈಕುಂ ಅಫಲಾಝು ಕಬದಿಹಾ,"** ನೋಡಿರಿ, ಮಕ್ಕದವರು ನಮ್ಮ ಮುಂದೆ ತಮ್ಮ ರಕ್ತ ಪ್ರೇಮಿಗಳನ್ನು ಆರಿಸಿ ಕಳುಹಿಸಿದ್ದಾರೆ. ಅಂದರೆ ಅಲ್ಲಾಹನು ನಮಗಾಗಿ ಈ ಬೃಹತ್ ಪ್ರಮಾಣದ ಬೇಟೆಯನ್ನು ಸಂಗ್ರಹಿಸಿದ್ದಾರೆ ಎಂಬುದಕ್ಕೆ ನೀವು ಸಂತೋಷಪಡಿರಿ. ಸಹಾಬರ ಭಾವನೆಗಳು ತಕ್ಷಣ ಪಲ್ಲಟಗೊಂಡವು. ಇದು ಗಾಬರಿಗೊಳ್ಳುವ ಸಂದರ್ಭದಲ್ಲಿ ಬದಲು ಅಲ್ಲಾಹನು ತನ್ನ ವಾಗ್ದಾನದಂತೆ ಮಕ್ಕ ಸರದಾರರನ್ನು ನಮ್ಮ ಕೈಗಳಿಂದ ನಾಶಪಡಿಸಲು ಕ್ರೂಢಿಕರಿಸಿದ್ದಾನೆ. ಹೀಗೆ ದುರ್ಬಲ ಸ್ವಭಾವದ ಮುಸಲ್ಮಾನರಿಗೆ ಒಂದು ಗಾಬರಿಯ ಮತ್ತು ಹೆದರಿಕೆಯ ಸುದ್ಧಿಯೊಂದನ್ನು ಹಝ್ರತ್ ರಸೂಸುಲ್ಲಾಹ್(ಸ) ರವರಿಂದ ಹೊರಟ ಈ ಮಾತು ಅವರಿಗೆ ಸುಸಂಧಿಯ ಹಾಗೂ ಶಕ್ತಿದಾಯಕವಾಗಿ ಪರಿಣಮಿಸಿತು. ಹಝ್ರತ್ ರಸೂಲುಲ್ಲಾಹ್(ಸ) ಈ ವಾಕ್ಯ ಚಿಂತಿಸಿ ಯೋಚಿಸಿ ಏನೂ ಹೇಳಿರಲಿಲ್ಲ. ಬದಲು ಇತ್ತ ಅವರು ಮಕ್ಕದ ಸಿಪಾಯಿಯಿಂದ ಹೊರಟ ಈ ಸುದ್ಧಿ ಕೇಳಿ ಸಹಾಬರಲ್ಲಿ ಗಾಬರಿ ಹುಟ್ಟಿದ ದೃಶ್ಯ ಕಂಡ ತಕ್ಷಣ ಅವರಿಂದ ಈ ಮಾತು ಹೊರಟಿತು. ಕಮಾನಿನಿಂದ

ಬಾಣ ಹೊರಟಂತೆ, ಈ ಮಾತಿನ ಫಲವಾಗಿ ಮುಸಲ್ಮಾನರ ಭಾವನೆಗಳು ತಕ್ಷಣ ಪಲ್ಲಟಗೊಂಡವು.

### ಮಕ್ಕ ವಿಜಯದ ಸಂದರ್ಭದ ಉದಾಹರಣೆ

ಮಕ್ಕ ವಿಜಯ ಸಂದರ್ಭದಲ್ಲಿ ಹಝ್ರತ್ ರಸೂಲುಲ್ಲಾಹ್(ಸ) ರವರನ್ನು ಮಕ್ಕದ ಸರದಾರ ಅಬೂಸೂಫಿಯಾನನ ಮನ ಒಲಿಸಬೇಕಾಗಿತ್ತು. ಮತ್ತು ಅವರು ಈ ಕುರಿತು ಕೆಲವು ವಾಗ್ದಾನಗಳು ಸಹ ನೀಡಿದ್ದರು. ಇಸ್ಲಾಮಿ ಸೈನ್ಯವು ಯಾವಗ ಅತ್ಯಂತ ವೈಭವಶಾಲಿ ರೀತಿಯಲ್ಲಿ ತನ್ನ ಧ್ವಜಗಳನ್ನು ಹಾರಾಡಿಸುತ್ತಾ ಮಕ್ಕದತ್ತ ಹೆಜ್ಜೆ ಹಾಕಿತ್ತೋ, ಆಗ ಅಬೂ ಸುಫಿಯನ್ ಒಂದು ಎತ್ತರದ ಸ್ಥಾನದಲ್ಲಿ ಕುಳಿತುಕೊಂಡು ಈ ವೈಭವವನ್ನು ನೋಡುತ್ತಿದ್ದನು. ಧ್ವಜ ಹಿಡಿದುಕೊಂಡು ಅವನ ಮುಂದಿನಿಂದ ಹೊರಡುತ್ತಾ, ತನ್ನ ಗೋತ್ರದ ಸರದಾರರಾರು ಹಾಗೂ ಅನ್ಸಾರರ ಸರದಾರು ಆದ ಸಅದ್ ಬಿನ್ ಅಬಾದ ಅಬೂ ಸೂಫಿಯಾನನಿಗೆ ಆಲಿಸುವಂತೆ ಹೇಳಿದರು. ಇಂದು ಮಕ್ಕ ಜನರ ಅವಮಾನದ ದಿನವಾಗಿದೆ. ಅಬೂ ಸುಫಿಯಾನನ ಮನದಲ್ಲಿ ಈ ಮಾತು ಚೂರಿ ನಾಟುವಂತೆ ನಾಟಿತು. ಅವನು ತಕ್ಷಣ ಹಝ್ರತ್ ರಸೂಲುಲ್ಲಾಹ್(ಸ) ರವರಿಗೆ ಹೇಳಿದನು. ಸಅದ್ ಏನು ಹೇಳಿದ್ದಾನೆ. ನೀವು ಕೇಳಿರುವುದಿಲ್ಲ. ಸಅದ್ ಹೇಳುತ್ತಾನೆ. ಇಂದು ಮಕ್ಕದವರಿಗೆ ಅಪಮಾನದ ದಿನವಾಗಿದೆ ಎಂದು."

ಅವರು ಹೇಳಿದರು. ಸಅದ್ ತಪ್ಪು ಹೇಳಿದ್ದಾನೆ. ಇಂದು ಮಕ್ಕದ ಮಾನವ ದಿನವಾಗಿದೆ. ಸಅದರಿಂದ ಧ್ವಜ ತೆಗೆದುಕೊಂಡು ಅವನ ಮಗನಿಗೆ ಒಪ್ಪಿಸಿರಿ."

ಇದೊಂದು ತಕ್ಷಣವಾಗಿ ಹೊರಟ ಮಾತಾಗಿತ್ತು. ಆದರೆ ನೋಡಿ ಅದರಲ್ಲಿ ಆತ್ಮಜ್ಞಾನ ಎಷ್ಟು ಗಾಢವಾದ ಶಾಶ್ವತವಾದ ಸತ್ಯವನ್ನು ಅಡಗಿತ್ತು. ಮೊದಲ ಮಾತೇನೆಂದರೆ ಮಕ್ಕದವರ ಅಪಮಾನ ಎಂಬ ಪದದಿಂದ ಹಝ್ರತ್ ರಸೂಲುಲ್ಲಾಹ್(ಸ) ಮಕ್ಕದಲ್ಲಿ ಪ್ರವೇಶ ಮಾಡುವುದೆಂದರೆ ಅದು ಮಕ್ಕದವರ ಅಪಮಾನ ಎಂದು ಭಾವಿಸಬಹುದಾಗಿತ್ತು. ಅದಾಗ್ಯೂ ಅವರು ವಿಜಯ ಪಡೆದು ಬಂದರು ಸರಿ. ಅವರು ಹಝ್ರತ್ ರಸೂಲುಲ್ಲಾಹ್(ಸ) ರವರ ಧ್ವಜದಡಿಯಲ್ಲಿ ಬಂದರೆ ಅವರ ಮಾನವೇ ಹೊರತು ಅಪಮಾನವಲ್ಲ. ಅಂದ ಹಾಗೆ ಮಕ್ಕ ಎಂತಹ ಸ್ಥಳವಾಗಿದೆ ಎಂದರೆ ಯಾವ ರೂಪದಲ್ಲೂ ಅಪಮಾನ ಎಂಬ ಪದ ಬಳಸುವಂತಿಲ್ಲ. ಎರಡನೆಯದಾಗಿ ಸಅದರ ಪದಗಳಿಂದ ಮುಸಲ್ಮಾನರ ಹೃದಯದಲ್ಲಿ ಅಬೂ ಸೂಫಿಯಾನನ ಪ್ರತಿ ಅವಹೇಳನ ಭಾವನೆಗಳು ಬರಬಹುದಾಗಿತ್ತು. ಆದರೆ ಹಝ್ರತ್ ರಸೂಲುಲ್ಲಾಹ್(ಸ) ರವರ ಇಂಗಿತ ಅವರ ಮನವರಿಕೆ ಮಾಡುವುದಾಗಿತ್ತು. ಆದುದರಿಂದ ಅವರು ತಕ್ಷಣ ಅಬೂ ಸೂಫಿಯಾನನ ಕುರಿತು ದೂರಿನ ವಿಷಯದಲ್ಲಿ ಸಅದನನ್ನು ಎಚ್ಚರಿಸಿದರು ಮತ್ತು ಮುಸಲ್ಮಾನರ ಭಾವನೆಗಳನ್ನು ತಪ್ಪು ದಾರಿ ಹಿಡಿಯುವುದರಿಂದ ರಕ್ಷಿಸಿದರು. ಮೂರನೆಯದಾಗಿ ಅವರು ತಿಳಿದುಕೊಂಡರು. ಸಅದರ ಬಾಯಿಯಿಂದ ಈ ಮಾತು ತಕ್ಷಣದಿಂದ ಹೊರಟಿತ್ತೇ ಹೊರತು ಬೇಕೆಂತಲೂ ಹೇಳಿರಲಿಲ್ಲ. ಆದರೂ ಯೋಚಿಸಿದರೆ ಸಅದ್ ತಮ್ಮ ಗೋತ್ರದ ಸರದಾರರಾಗಿದ್ದಾರೆ. ಅವರ ಮನವು ನೊಯಬಾರದು ಎಂದು ಅವರ ಕೈಯಿಂದ ಸರದಾರಿಕೆಯ ಧ್ವಜವಂತು ಪಡೆದರು. ಆದರೆ ಒಡನೆಯೇ ಆ ಧ್ವಜ ಅವರ ಪುತ್ರನಿಗೆ ಒಪ್ಪಿಸಿದರು. ಅದರಿಂದ ಸಅದರ ಮನವು ತಣಿಸಿದಂತಾಯಿತು. ಇನ್ನೊಬ್ಬನಿಗೂ ದೂರುವ ಅವಕಾಶ ದೊರೆಯಲಿಲ್ಲ. ಯೋಚಿಸಿರಿ. ಈ ಸಂಕ್ಷಿಪ್ತ ಪದಗಳು ತಕ್ಷಣದಿಂದ ಅವರ ಬಾಯಿಯಿಂದ ಹೊರಟಿದ್ದು, ಅವರ ದೂರದೃಷ್ಟಿ ಎಲ್ಲಿಗೆ ತಲುಪಿತ್ತು. ಅಂದರೆ ಕ್ಷಣಮಾತ್ರದಲ್ಲಿ ಅವರ ಈ ಪದಗಳು ಹಲವು ನಕಾರಾತ್ಮಕ ಪರಿಣಾಮಗಳಿಗೆ ತಡೆಒಡ್ಡಿದಂತಾಯಿತು ಮತ್ತು ಹಲವು ಸಕಾರಾತ್ಮಕ ಬಾಗಿಲುಗಳು ತೆರೆದಂತಾಯಿತು.

### ಹುನೈನ್ ಯುದ್ಧ ಸಂದರ್ಭದ ಉದಾಹರಣೆ

ಹುನೈನ್ ಯುದ್ಧದ ನಂತರ ಪಡೆದ ಯುದ್ಧ ಸಂಪತ್ತಿನ ವಿತರಣೆಯ ಸಮಯ ಬಂದಾಗ ಹಝ್ರತ್ ರಸೂಲುಲ್ಲಾಹ್(ಸ) ಮಕ್ಕದವರ ಮನತಣಿಸುವ ಭಾವನೆಯಿಂದ ಅವರಿಗೆ ಹೆಚ್ಚು ಪಾಲು ಕೊಟ್ಟರು. ಕೆಲ ಉತ್ಸಾಹಿ ಮತ್ತು ಅಲ್ಪ ಬುದ್ಧಿಯ ಅನ್ಸಾರರಿಗೆ ದೂರು ನೀಡುವಂತಾಯಿತು. ಮತ್ತು ಅವರು ದೂರಿದರು. ರಕ್ತ ನಮ್ಮ ಖಡ್ಗಗಳಿಂದ ಹರಿದಿದೆ. ಆದರೆ ಬಹುಮಾನ ಮಕ್ಕದವರು ಪಡೆಯುತ್ತಿದ್ದಾರೆ. ಹಝ್ರತ್ ರಸೂಲುಲ್ಲಾಹ್(ಸ) ರವರೆಗೆ ಈ ಸುದ್ಧಿ ತಲುಪಿದಾಗ ಅವರು ಅನ್ಸಾರರಿಗೆ ಒಂದು ಪ್ರತ್ಯೇಕ ಜಾಗದಲ್ಲಿ ಸೇರಿಸಿದರು. ಮತ್ತು ಅವರೊಡನೆ ಹೇಳಿದರು. ನನಗೆ ಇಂತಿಂತಹ ಸುದ್ಧಿ ತಲುಪಿದೆ. ಜನರು ಕುರಿ, ಮೇಕೆ, ಒಂಟೆ ಪಡೆದು ಹೋಗುತ್ತಿದ್ದಾರೆ. ಆದರೆ ನಿಮ್ಮ ಜೊತೆ ಅಲ್ಲಾಹನ ಪ್ರವಾದಿ ಹೋಗುತ್ತಿದ್ದಾನೆ ಈ ಮಾತು ನಿಮಗೆ ಸಂತೋಷ ತರುವಂತಹದ್ದಲ್ಲವೆ? ಈ ಮಾತು ಕೇಳುತ್ತಲೇ ಅನ್ಸಾರರ ಬಾಯಿಕಟ್ಟಿದಂದಾಯಿತು. ದು:ಖದಿಂದ ಚೀರಿಕೊಂಡರು. ಮತ್ತು ಅಳುತ್ತ, ಅಳುತ್ತ ಅವರಿಂದ ಮಾತು ಹೊರಡುತ್ತಿರಲಿಲ್ಲ. ಅವರು ಹೇಳಿದರು. ಓ ನಬಿವರ್ಯರೇ! ನಮ್ಮಲ್ಲಿ ಕೆಲ ಮೂಢ ಯುವರಿಂದ ಈ ಮಾತು ಹೊರಟಿವೆ. ನಾವು ಅಲ್ಲಾಹನ ಪ್ರವಾದಿಯನ್ನು ಬಯಸುತ್ತೇವೆ. ನಮಗೆ ಲೌಕಿಕ ಸಂಪತ್ತು ಬೇಕಾಗಿಲ್ಲ. ಅವರು ಹೇಳಿದರು. ಓ ಅನ್ಸರ್ ಗುಂಪಿನವರೇ, ಇದೀಗ ನೀವು ಕೌಸರ್ ಸ್ಥಳದಲ್ಲಿಯೇ ಭೇಟಿಯಾಗುವಿರಿ."

ಮನೋವೈಜ್ಞಾನಿಕ ನೆಲೆಯಲ್ಲಿ ಈ ಘಟನೆಯ ವ್ಯಾಖ್ಯಾನ ಸ್ಪಷ್ಟವಿದೆ. ವಿವರಿಸುವ ಅಗತ್ಯವಿಲ್ಲ. ಆದರೆ ಅವರ ಅಂತಿಮ ವಾಕ್ಯ ಕೆಲ ವಿವರಣೆ ಬಯಸುತ್ತದೆ. ಇದೊಂದು ಅತ್ಯಂತ ಸರಳ ಮತ್ತು ನಿಷ್ಕಳಂಕ ವಾಕ್ಯವಾಗಿದೆ. ಮನೋವೈಜ್ಞಾನಿಕ ನಿಮಿತ್ತ ಎಷ್ಟೋ ಉತ್ತಮವಾದುದಾಗಿದೆ. ಅವರು ತಿಳಿದುಕೊಂಡಿದ್ದರು. ನಿಮ್ಮಲ್ಲಿ ಕೆಲವರು ಲೌಕಿಕ ಆಸೆ ಹೊಂದಿದವರಾಗಿದ್ದಾರೆ. ಈಗ ಅದರ ಪರಿಣಾಮವಾಗಿ ನಿಮಗೆ ಈ ಲೋಕದಲ್ಲಿ ದೇವಾನುಗ್ರಹ ಲಭಿಸುವುದಿಲ್ಲ. ಅದು ಲೌಕಿಕ ಅನುಗ್ರಹಗಳಲ್ಲಿ ಬಹುದೊಡ್ಡ ಅನುಗ್ರಹವಾಗಿದೆ. ಅಂದರೆ ಆಡಳಿತ, ಸರಕಾರ. ಆದರೆ ಅದರಿಂದ ನಿಮ್ಮ ನಿಷ್ಠೆ, ತ್ಯಾಗಗಳು ವ್ಯರ್ಥವಾಯಿತೆಂದು ಭಾವಿಸುವುದು ಬೇಡ. ಬದಲು ಅದಕ್ಕಾಗಿ ನೀವು ನನಗೆ ಅಂತ್ಯ ದಿನದಂದು ಕೌಸರ್ ಸ್ಥಳದಲ್ಲಿ ಭೇಟಿಯಾಗಿರಿ. ಅಲ್ಲಿ ನಿಮಗೆ ಪರಲೋಕದ ಅನುಗ್ರಹಗಳಿಂದ ದಯಪಾಲಿಸಲಾಗುವುದು. ಆಗ ಅಲ್ಲಾಹನು ನಿಮ್ಮ ಎಲ್ಲಾ ಆಕಾಂಕ್ಷೆಗಳನ್ನು ಈಡೇರಿಸುವನು. ಆದರೆ ಲೌಕಿಕ ಅಧಿಕಾರ ಸರಕಾರಗಳ ಬಹುಮಾನ ನಿಮಗೆ ದೊರೆಯುವುದಿಲ್ಲ. ಈ ಸಣ್ಣದಾದ ವಾಕ್ಯನುಡಿಯಲ್ಲಿ ಅವರು ಅನ್ಸಾರರಲ್ಲಿ ಈ ಪಾಠವನ್ನು ಮನದಟ್ಟು ಮಾಡಿಕೊಟ್ಟರು. ನೀವು ಸಾಮುದಾಯಿಕವಾಗಿ ದೃಢವಾಗಬಯುಸುವುದಾದರೆ ಮತ್ತು ಪ್ರಗತಿ ಸಾಧಿಸಬೇಕಾದರೆ ತಮ್ಮ ದುರ್ಬಲ ಸಂಗಡಿಗರನ್ನು ಸಹ ಸುಧಾರಿಸಿಕೊಂಡು ನಡೆಯಿರಿ. ಇಲ್ಲವಾದರೆ ಒಬ್ಬರ ಶಿಕ್ಷೆ ಇನ್ನೊಬ್ಬರು ಅನುಭವಿಸಿದಂತಾಗುವುದು. ಈ ವಾಕ್ಯನುಡಿಯಿಂದ ಅವರಿಗೆ ಉಪದೇಶ ನೀಡಿದಂತಾಯಿತು. ನೀವು ನನ್ನನ್ನು ಆರಿಸಿಕೊಂಡ ಪರಿಣಾಮವಾಗಿ ಈಗ ನೀವು ಲೌಕಿಕ ಅನುಗ್ರಹಗಳಿಂದ ವಂಚಿತರಾಗಬಹುದು, ಅದರಿಂದ ಅವರಲ್ಲಿ ಅನ್ಸಾರರ ಜಮಾಅತ್ ದೇವಾನುಗ್ರಹದಿಂದ ವಂಚಿತರಾಗುವ ಭಾವನೆ ಮಾಡಬಹುದೆಂದು ಭಾವಿಸಿ ಅದರ ನಿವಾರಣೆಗೋಸ್ಕರ ಒಡನೆಯೇ ಹೇಳಿದರು. ಅಲ್ಲಾಹನು ನಿಮಗೆ ಪರಲೋಕದ ಅನುಗ್ರಹಗಳ ವಾರಸುದಾರರಾಗಿ ಮಾಡುವನು. ಪರಲೋಕದ ಜೀವನವೇ ನಿಜವಾದ ಜೀವನವಾಗಿದೆ. ಆದುದರಿಂದ ಪರಲೋಕದ ಅನುಗ್ರಹಗಳು ಲಭಿಸಿದರೆ ಲೌಕಿಕ ಅನುಗ್ರಹಗಳಿಂದಾಗುವ ಲೋಪ ಯಾವ ಲೆಕ್ಕಕ್ಕೂ ಇಲ್ಲ. ಅವರ ಈ ಹೇಳಿಕೆಯ ಇನ್ನೂ ವಿವೇಕದ ಮಾತೆಂದರೆ ಅವರ ನಿಜವಾದ ಉದ್ದೇಶ ಅವರನ್ನು (ಅನ್ಸಾರರನ್ನು) ಎಚ್ಚರಿಸುವುದಾಗಿತ್ತು. ಆದರೆ ಅವರು ಅನುಗ್ರಹದ ಭಾಗವನ್ನು ವಿವರವಾಗಿ ಹೇಳಿದರು. ಆದರೆ ವಂಚಿತನಾಗುವ ವಿಷಯ ಭಾವಾರ್ಥದಲ್ಲಿ ಮಾತ್ರ ಹೇಳಿದರು. ಅಲ್ಲದೇ ಒಂದು ರೀತಿಯ ರಹಸ್ಯದಲ್ಲಿ ಹೇಳಿದರು. ಅಂದರೆ ಈಗ ನಿಮಗೆ ಲೌಕಿಕ ಅಧಿಕಾರದ ಅನುಗ್ರಹ ದೊರೆಯುವುದಿಲ್ಲ ಎಂದು ಹೇಳಲಿಲ್ಲ ಬದಲು ಕೇವಲ, ನೀವು ಈಗ ಪರಲೋಕದಲ್ಲಿ ಭೇಟಿಯಾಗುವಿರಿ ಎಂದಷ್ಟೇ ಹೇಳಿ ಮೌನವಹಿಸಿದರು. ಅದೊಂದು ರಹಸ್ಯದ ಸಂದರ್ಭವಾಗಿತ್ತು. ಆದುದರಿಂದ ಅವರು ನೀವು ಪರಲೋಕದಲ್ಲಿ ದೈವಿಕ ಅನುಗ್ರಹಗಳನ್ನು ಪಡೆಯುವಿರಿ ಎಂಬ ಉಲ್ಲೇಖ ಮಾಡಲಿಲ್ಲ. ಬದಲು ಕೌಸರ್ ಸ್ಥಳದಲ್ಲಿ ಭೇಟಿಯಾಗುವಿರಿ ಎಂದಷ್ಟೇ ಹೇಳಿದರು. ಅಂದರೆ ಆ ಸ್ಥಳದಲ್ಲಿ ನನ್ನ ಬಳಿ ಬರಬೇಕು. ಎಲ್ಲಾ ಅನುಗ್ರಹಗಳು ಎಲ್ಲ ಗುಣಗಳು ಅದರ ಉನ್ನತ ಮಟ್ಟದೊಂದಿಗೆ ಲಭಿಸುವುದು. ಅದರಲ್ಲಿ ಸಂಕೇತವೆನಿತ್ತೆಂದರೆ ಲೌಕಿಕ ಅನುಗ್ರಹಗಳ ಕೊರತೆ ಅಲೌಕಿಕ ಅನುಗ್ರಹಗಳೊಂದಿಗೆ ಯಥೇಚ್ಛ ರೂಪದಲ್ಲಿ ನೀಗಿಸಲಾಗುವುದೆಂದಿತ್ತು. ಇದು ಓರ್ವ ಅನಕ್ಷರಸ್ತ ಅರಬ್ ಮರಳುಗಾಡಿನವನ ಮಾತುಗಳಾಗಿದ್ದವು. ಬಾಹ್ಯವಾಗಿ ನೋಡುವುದಾದರೆ ಅವರು (ಸ) ಅ. ಬ. ಜ್ಞನವು ಸಹ ತಿಳಿದಿರಲಿಲ್ಲ.

### ಇನ್ನೊಂದು ಸಂದರ್ಭದ ಉದಾಹರಣೆ

ದೈವಿಕ ವಿಧಿಯನ್ವಯ ಒಂದು ಯುದ್ಧದಲ್ಲಿ ಮುಸಲ್ಮಾನರಿಗೆ ಶೋಚನೀಯ ಸೋಲುಂಟಾಯಿತು. ಹಲವು ಸಂಗಡಿಗರು ರಣರಂಗವನ್ನು ಬಿಟ್ಟು ಓಡಿಹೋದರು. ನಂತರ ಆ ಜನರು ನಾಚಿಕೆಯಿಂದಾಗಿ ರಸೂಲುಲ್ಲಾಹ್(ಸ) ರವರ ಮುಂದೆ ಬರುತ್ತಿರಲಿಲ್ಲ. ಹಝ್ರತ್ ರಸೂಲುಲ್ಲಾಹ್(ಸ) ಅವರಿಗೆ ಮಸೀದಿಯ ಒಂದು ಕೋಣೆಯಲ್ಲಿ ಮುಖ ತಪ್ಪಿಸಿಕೊಂಡು ಕುಳಿತಿದ್ದನ್ನು ಕಂಡರು. ಕೇಳಿದರು. ನೀವು ಯಾರು? ಅವರು ನಾಚಿಕೆಯಿಂದ, ಅಳುತ್ತ ಹೇಳಿದರು. **ಯಾ ರಸೂಲುಲ್ಲಾಹಿ ನುಹನುಲ್ ಫರ್ರಾರೂನ**– ನಾವು ಭಗೋಡೆಗಳಾಗಿದೇವೆ. (ಅಂಜುಬುರುಕರಾಗಿ ಪಲಾಯನ ಮಾಡುವರು) ಓ ನಬಿವರ್ಯರೇ, ಅವರು ತಕ್ಷಣ ಹೇಳಿದರು. **ಬಲ್ ಅಂತುಮುಲ್ ಅಕ್ಕಾರೂನ** ಅಲ್ಲ, ಅಲ್ಲ, ನೀವು ಭಗೋಡೆಗಳಲ್ಲ, ನೀವಂತು ಮರಳಿ ಆಕ್ರಮಣ ಮಾಡಲು ಸಿದ್ಧರಾಗಿರುವವರಾಗಿದ್ದೀರಿ. ಅಲ್ಲಾಹ್! ಅಲ್ಲಾಹ್! ಎಂತಹ ಉದಾತ್ತ ಮಾಥಾಗಿದೆ. ರಣರಂಗದಿಂದ ಪಲಾಯನ ಮಾಡಿದವರು, ನಾಚಿಕೆಯಿಂದ ತಲೆತಗ್ಗಿಸಿಕೊಂಡವರು ಹೇಳುತ್ತಾರೆ. ನಾವು ನಿಮಗೆ ಮುಖ ತೋರಿಸಲು ಯೋಗ್ಯರಲ್ಲ. ನಾವು ರಣರಂಗದಲ್ಲಿ ಬೆನ್ನು ತೋರಿಸಿ ಬಂದವರಾಗಿದ್ದೇವೆ, ಪ್ರವಾದಿ(ಸ) ಅವರ ಈ ಅಧೀರತೆಯನ್ನು ಕಂಡು ತಕ್ಷಣ ಹೇಳಿದರು. ನೀವು ಅಂಜುಬುರುಕರು. ಹೇಗೆ ಆಗಲು ಸಾಧ್ಯ.? ನೀವಂತೂ ಮರಳಿ ಆಕ್ರಮಣ ಮಾಡಲು ಹಿಂದೆ ಸರಿದವರಾಗಿದ್ದೀರಿ. ನನ್ನ ಜೊತೆಗೂಡಿ ಮತ್ತೆ ಯುದ್ಧಕ್ಕಾಗಿ ಹೊರಡುವಿರಿ. ಇದೊಂದು ವಾಕ್ಯದೊಂದಿಗೆ ಅವರ ಧೀರತೆಯನ್ನು ಉತ್ತೇಜಿಸಿ ಎಂತಹ ಉನ್ನತ ಮಟ್ಟಕ್ಕೇರಿಸಿದರು! (ಮಝಾಮೀನ್ ಬಶೀರ್, ಪುಟ 159–165)

*************

# ದೇವ ಏಕತ್ವದ ಕುರಿತು ಹಝ್ರತ್ ರಸೂಲುಲ್ಲಾಹ್(ಸ) ರವರ ಶಿಕ್ಷಣ

(ಮೌಲಾನ ಮುನೀರ್ ಅಹ್ಮದ್ ಖಾದಿಮ್, ನಾಝಿರ್ ಇಸ್ಲಾಹ್ ವ ಇರ್ಶಾದ್ ದಕ್ಷಿಣ ಭಾರತ)

ದೇವೇಕತ್ವದ ನಿಜವಾದ ಜ್ಞಾನ. ಉತ್ತುಂಗಕ್ಕೆ ತಲುಪಿದ ಸರ್ವಶ್ರೇಷ್ಠ ರೀತಿಯ ದೇವ ಏಕತ್ವ ಲೋಕದಲ್ಲಿ ಮೊದಲ ಬಾರಿಗೆ ಹಝ್ರತ್ ರಸೂಲುಲ್ಲಾಹ್(ಸ) ರವರಿಂದ ಪ್ರಕಟಗೊಂಡಿತು. ಲೋಕವು ಮೊದಲ ಬಾರಿಗೆ ದೇವ ಏಕತ್ವ ಕುರಿತು "ಅಹದ್" ಗುಣನಾಮದಿಂದ ಪರಿಚಿತವಾಯಿತು. ಹಝ್ರತ್ ಮುಸ್ಲಿಹ್ ಮೌಊದ್(ರ) ತಫ್ಸೀರ್ ಸಗ್ಹೀರ್‌ನಲ್ಲಿ ಸೂರಃ ಇಕ್ಲಾಸಿನ ಭಾಷಾಂತರ ಬರೆಯುತ್ತ ಟಿಪ್ಪಣಿ ಬರೆಯುತ್ತಾರೆ.

ಅಂತಿಮ ಮೂರು ಅಧ್ಯಾಯಗಳು "ಖುಲ್" ಎಂದು ಪ್ರಾರಂಭವಾಗುತ್ತದೆ. ಅದರ ಅರ್ಥ ನಮ್ಮ ಈ ಸಂದೇಶವನ್ನು ಮುಂದೆ ಎಲ್ಲಾ ಜನರವರೆಗೆ ತಲುಪಿಸಿರಿ ಎಂಬ ತಾತ್ಪರ್ಯವಾಗಿದೆ. ಹೀಗೆ ಮುಹಮ್ಮದ್ ರಸೂಲುಲ್ಲಾಹ್(ಸ) ರವರು ಅಲ್ಲಾಹನ ಸಂದೇಶ ಜನರಿಗೆ ತಲುಪಿಸುತ್ತಿದ್ದರೆ, ಇತರ ಜನರು ಸಹ "ಖುಲ್" ಪದ ಓದುವುದು ಅನಿವಾರ್ಯವಾಯಿತು. ಅದರಿಂದ ಅವರಿಗೂ ಕಡ್ಡಾಯವಾಗಿರುತ್ತದೆ. ಅವರು ಈ ಗ್ರಂಥವನ್ನು ಇತರ ಜನರವರೆಗೆ ತಲುಪಿಸಬೇಕು. ಅಂದ ಹಾಗೆ "ಖುಲ್" ಎಂದು ಹೇಳುವ ಮೂಲಕ ನಮ್ಮ ಈ ಶಿಕ್ಷಣವನ್ನು ತನ್ನಷ್ಟಕ್ಕೆ ಸೀಮಿತಗೊಳಿಸಬಾರದು ಎಂಬುದರ ಬಗ್ಗೆ ಗಮನ ಸೆಳೆಯಲಾಯಿತು. ಬದಲು ಅದನ್ನು ಇತರರಿಗೂ ತಲುಪಿಸಬೇಕು ಮತ್ತು ನಿಮ್ಮಿಂದ ಕೇಳಿದವರು ಇನ್ನಿತರ ಜನರಿಗೆ ತಿಳಿಸುವರು ಮತ್ತು ಅವರು ಇನ್ನೊಬ್ಬರಿಗೆ ಸಂದೇಶ ತಿಳಿಸುವರು. ಹೀಗೆ ಮುಂದುವರೆಯುತ್ತ ಇಡೀ ಲೋಕಕ್ಕೆ ಅಲ್ಲಾಹನ ಸಂದೇಶ ತಲುಪುವಂತಾಗುತ್ತದೆ. ಆದ್ದರಿಂದಲೇ ನಾವು ಅದರ ತರ್ಜುಮೆ ಹೀಗೆ ಮಾಡಿದ್ದು, (ನಾವು ಎಲ್ಲಾ ಕಾಲದ ಮುಸಲ್ಮಾನರಿಗೆ ಆಜ್ಞೆ ಮಾಡುತ್ತೇವೆ) ನೀವು (ಇತರ ಜನರಿಗೆ) ಹೇಳುತ್ತ ಹೋಗಿರಿ."

ಏಕವಚನಕ್ಕಾಗಿ ಅರಬಿ ಭಾಷೆಯಲ್ಲಿ ಎರಡು ಪದಗಳನ್ನು ಉಪಯೋಗಿಸಲಾಗುತ್ತದೆ. ವಾಹಿದ್ ಮತ್ತು ಅಹದ್, ವಾಹಿದ್ ಅರ್ಥ ಏಕ(ಒಂದು) ಹೌದು. ಆದರೆ ಅದರಿಂದ ಇನ್ನೊಂದೆಡೆ ಗಮನ ಹೋಗುವ ಸಾಧ್ಯತೆಯಿರುತ್ತದೆ. ಹೇಳುವನು ಒಂದರ ನಂತರ ಎರಡು ಮತ್ತು ಎರಡರ ನಂತರ ಮೂರು ಮತ್ತು ಮೂರರ ನಂತರ ನಾಲ್ಕು ಇರುತ್ತದೆ ಎಂದು ಭಾವಿಸುತ್ತಾನೆ. ಅಂದ ಹಾಗೆ ಈ ಪದ ಏಕ ಎಂದು ಸಾಬೀತಾಗುತ್ತದೆ. ಆದರೆ ಇನ್ನೂ ಹೆಚ್ಚಿನ ಸಂಖ್ಯೆಯನ್ನು ರದ್ದುಪಡಿಸುವುದಿಲ್ಲ. ಅದಕ್ಕೆ ತದ್ವಿರುದ್ಧ "ಅಹದ್" ಅರ್ಥವು ಏಕನು ಮತ್ತು ಆ ಏಕನಿಗೆ ಇನ್ನೊಬ್ಬನು ಎಂದು ಹೇಳಲಾಗದು. ಅಂದ ಹಾಗೆ ಈ ಪದದ ಅರ್ಥ ಒಬ್ಬನ ಅಸ್ತಿತ್ವದೊಂದಿಗೆ ಇನ್ನೊಬ್ಬ ಅಸ್ತಿತ್ವದ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು. ಆದ್ದರಿಂದ ಈ ಅಧ್ಯಾಯದಲ್ಲಿ ಅಲ್ಲಾಹನನ್ನು "ಅಹದ್" ಎನ್ನಲಾಗಿದೆ. ಅಂದರೆ ಪರಿಪೂರ್ಣ ದೇವಏಕತ್ವ ಕುರಿತು ಪ್ರಸ್ತಾಪಿಸಲಾಗಿದೆ. ಮತ್ತು ಸೂಚಿಸಲಾಗಿದೆ. ಅಲ್ಲಾಹನು ತನ್ನ ಅಸ್ತಿತ್ವದಲ್ಲಿ ಏಕನು ಮಾತ್ರ. ಈ ರೀತಿಯ ಇನ್ನೋರ್ವನ ಅಸ್ತಿತ್ವ ಊಹಿಸಲಿಕ್ಕೂ ಸಾಧ್ಯವಿಲ್ಲ. ಅಂತೂ ಈ ಅಧ್ಯಾಯದಲ್ಲಿ ಈ ಪದವನ್ನು ಉಪಯೋಗಿಸಿ ಅಲ್ಲಾಹನ ಪರಿಪೂರ್ಣ ಏಕತ್ವದ ಘೋಷಣೆ ಮಾಡಲಾಗಿದೆ.

ಅರಬಿ ಪದದಲ್ಲಿ "ಸಮದ್" ಪದವಿದೆ. ಸಮದ್ ಪದದ ಅರ್ಥ ಅವನು ನಿರಪೇಕ್ಷನು ಮತ್ತು ಸರ್ವರಿಗೂ ಆಶ್ರಯದಾತನೂ, ಅಂದರೆ ಅವನ ಆಶ್ರಯವಿಲ್ಲದೇ ಯಾವ ಅಸ್ತಿತ್ವವು ಇರಲು ಸಾಧ್ಯವಿಲ್ಲ. ಅಂದ ಹಾಗೆ ಈ ಪದವು ಪರಿಪೂರ್ಣ ದೇವ ಏಕತ್ವವನ್ನು ಬಹಿರಂಗಗೊಳಿಸಿದೆ. ಮತ್ತು ತಿಳಿಸಲಾಗಿದೆ. ಅವನು ಸರ್ವರಿಗೂ ಆಶ್ರಯದಾತನಾಗಿದ್ದಾನೆ. ಅವನಿಗೆ ಇನ್ನೋರ್ವ ಅಸ್ತಿತ್ವದ ಅವಶ್ಯಕತೆ ಇಲ್ಲ. ಸಮದ್‌ನ ಅರ್ಥ ಶಾಶ್ವತವಾಗಿ ನೆಲೆನಿಲ್ಲುವನು ಎಂದೂ ಆಗಿದೆ. ಮತ್ತು ಮಹೋನ್ನತ ಎಂದೂ ಆಗಿದೆ. ಈ ಎರಡೂ ಅರ್ಥಗಳು ಸಹ ಪರಿಪೂರ್ಣ ದೇವ ಏಕತ್ವವನ್ನು ಸಾದರಪಡಿಸುತ್ತದೆ. ಶಾಶ್ವತವಾಗಿರುವವನಿಗೆ ಯಾರೂ ಸಹ ಎದುರಿಸಲು ಸಾಧ್ಯವಿಲ್ಲ. ಯಾವುದು ಉನ್ನತಿಯಲ್ಲಿ ಪರಾಕಾಷ್ಟತೆಗೆ ತಲುಪುವುದೋ ಇನ್ನೊಂದು ವಸ್ತು ಆ ಮಟ್ಟಕ್ಕೆ ಹೋಗಲಾಗದು. ಅದರ ಭಾವಾರ್ಥವು ಅವನು ಏಕನು ಎಂದೇ ಆಗಿದೆ.

ಈ ವಚನ ಸಹ ಪರಿಪೂರ್ಣ ದೇವ ಏಕತ್ವವನ್ನು ಸೂಚಿಸುತ್ತದೆ. ಏಕೆಂದರೆ ಯಾರೂ ಅವನ ಜನಕನಿಲ್ಲ. ಅವನು ಒಂದು (ಬಾಂಜ್) ಬಂಜೆ ಆಗಲಿಕ್ಕೆ ಸಾಧ್ಯ ಇಲ್ಲ. ಬದಲಾಗದಂತಹ ವಸ್ತು ಆಗಲೂ ಸಾಧ್ಯ. ಉದಾಹರಣೆಗೆ ಪರ್ವತ ಮತ್ತು ಸಮುದ್ರ ಇತ್ಯಾದಿ. ಆದರೆ ಅಲ್ಲಾಹನ ಕುರಿತು ಹೇಳಲಾಗಿದೆ. ಅವನು ಸರ್ವೋತ್ತಮನು (ರಫೀಉನ್) ಅಂದರೆ ತನ್ನ ಸ್ಥಾನದಲ್ಲಿ ಸರ್ವೋನ್ನತನಾಗಿರುವನು. ಅಂದ ಹಾಗೆ ಪರ್ವತಗಳಿಗೆ ಮತ್ತು ಸಮುದ್ರಗಳಿಗೆ ಅದರಿಂದ ಯಾವ ಹೋಲಿಕೆಯೂ ಇಲ್ಲ. ಅವನು ಜನಕನಲ್ಲ ಎಂಬ ಪದವು ಸಹ ಪರಿಪೂರ್ಣ ದೇವ ಏಕತ್ವಕ್ಕೆ ಸಾಕ್ಷಿಯಾಗಿದೆ. ಏಕೆಂದರೆ ಅಲ್ಲಾಹನ ಹೊರತು ಜಾತನೂ ಅಲ್ಲ ಎಂಬುವುದು ಲೋಕದಲ್ಲಿ ಕಾಣಲು ಸಾಧ್ಯವಿಲ್ಲ. ಅವನು ಆರಾಧ್ಯನಾಗಿರಲಿ ಅಥವಾ ಇಲ್ಲದಿರಲಿ.

ಮೊದಲು ಅಸ್ತಿತ್ವ ನಿಮಿತ್ತ ಏಕತೆಯ ವಿವರವಿತ್ತು. ಈಗ ಗುಣಗಳ ಏಕತ್ವವನ್ನು ವಿವರಿಸಲಾಗಿದೆ. ನೆನಪಿಡಬೇಕಾದರೆ ಗುಣಗಳಲ್ಲಿ ಸಹಭಾಗಿಗಳಾಗುವುದೆಂದರೆ ಆ ರೀತಿಯ ಯಾವ ಚಲನೆ ಆಗುವುದಿಲ್ಲ ಎಂದರ್ಥವಲ್ಲ. ಮನುಷ್ಯನು ಸಹ ನೋಡುವವನಾಗಿದ್ದಾನೆ ಮತ್ತು ಆಲಿಸುವವನಾಗಿದ್ದಾನೆ. ಅಂದ ಹಾಗೆ ನೋಡುವುದಕ್ಕೆ ಒಂದು ಸಮ್ಮಿಲಿತ (ಮಿಶ್ರಿತ) ಎಂದು ಕಾಣುತ್ತದೆ. ಆದರೆ ಅಲ್ಲಾಹನು ನೋಡುವವನಾದರೂ ಅವನಿಗೆ ಕಣ್ಣಿರ ಬೇಕೆಂದೇನಿಲ್ಲ. ಅಲ್ಲಾಹನು ಆಲಿಸುವವನಾದರೂ ಕಿವಿಗಳ ಅವಶ್ಯಕತೆಯಿಲ್ಲ. ಅವನು ತನ್ನ ಅಸ್ತಿತ್ವದಲ್ಲಿ ಯಂತ್ರಗಳಿಲ್ಲದೇ ನೋಡುವವನಾಗಿದ್ದಾನೆ ಮತ್ತು ಯತ್ರಗಳಿಲ್ಲದೇ ಆಲಿಸುವವನಾಗಿದ್ದಾನೆ. ಆದರೆ ಮನುಷ್ಯನು ನೋಡುವವನು ಮತ್ತು ಆಲಿಸುವವನಾಗಿದ್ದಾನೆ. ಆದರೆ ಅವನ ಗುಣಗಳಲ್ಲಿ ಸಹಭಾಗಿ ಎನ್ನಲಾಗದು.

ಅದಲ್ಲದೇ ಹಝ್ರತ್ ರಸೂಲುಲ್ಲಾಹ್(ಸ) ರವರ ಪೂರ್ವದಲ್ಲಿ ದೇವ ಏಕತ್ವದ ಕಲ್ಪನೆ ಕಾಲಗಳಿಗೆ ಹಾಗೂ ದೇಶಗಳಿಗೆ ಸೀಮಿತವಾಗಿತ್ತು. ಆದರೆ ರಸೂಲುಲ್ಲಾಹ್(ಸ) ರವರ ಮೇಲೆ ಅವತರಿಸಿದ ಗ್ರಂಥದಲ್ಲಿ ಅಲ್ಲಾಹನನ್ನು "ರಬ್ಬುಲ್ ಆಲಮೀನ್" ಅಂದರೆ ಸರ್ವಲೋಕಗಳ ಪರಿಪಾಲಕ ಎನ್ನಲಾಗಿದೆ. ಅದರನ್ವಯ ಅವನ ಎಲ್ಲಾ ಗುಣಗಳಿಗೆ ಗ್ರಹಿಸಲು ಕಾಲತೀತ ಮತ್ತು ಸ್ಥಳಾತೀತ ಎಂದು ಮಾಡಲಾಗಿದೆ. ದೇವ ಏಕತ್ವದ ಶ್ರೇಷ್ಠತೆಯನ್ನು ವಿವರಿಸುತ್ತಾ ಹಝ್ರತ್ ಅಖ್‌ದಸ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ನೆನಪಿರಲಿ ಅಲ್ಲಾಹನು ನಮ್ಮಿಂದ ಬಯಸುವುದು ವಾಸ್ತವ ಏಕತ್ವವಾಗಿದೆ. ಅದು ನಮ್ಮ ಮುಕ್ತಿಗೆ ಸಂಬಂಧಿಸಿದೆ. ಅದಾವುದೆಂದರೆ ಅಲ್ಲಾಹನನ್ನು ಅವನ ಅಸ್ತಿತ್ವದಲ್ಲಿ ಎಲ್ಲಾ ರೀತಿಯ ಸಹಭಾಗಿತ್ವದಿಂದ, ಅದು ವಿಗ್ರಹಗಳಾಗಲಿ, ಮನುಷ್ಯನಾಗಲಿ, ಸೂರ್ಯನಾಗಲಿ, ಚಂದ್ರನಾಗಲಿ, ಅಥವಾ ತನ್ನ ಆತ್ಮ ಅಥವಾ ತಮ್ಮ ಯುಕ್ತಿಗಳು ಮತ್ತು ತಂತ್ರ ಕುತಂತ್ರಗಳಿಂದ ಮುಕ್ತವಾಗಿರಬೇಕು. ಅದರ ಮುಂದೆ ಯಾವುದನ್ನು ಸಹ "ಶಕ್ತನೆಂದು ಭಾವಿಸಬಾರದು. ಯಾರೂ ಅನ್ನದಾತನಲ್ಲ. ಯಾರು ಗೌರವ ನೀಡುವವನಲ್ಲ, ಯಾರೂ ಅಪಮಾನ ಮಾಡಲು ಸಾಧ್ಯವಿಲ್ಲ. ಯಾರೂ ಸಹಾಯಕನಲ್ಲ ಎಂದು ಭಾವಿಸಬೇಕು ಮತ್ತು ಇನ್ನೊಂದು ವಿಷಯವೇನೆಂದರೆ ಅವನೊಂದಿಗೆಯೇ ತನ್ನ ಪ್ರೀತಿಯನ್ನು ಮೀಸಲಿರಿಸಬೇಕು. ಅವನನ್ನೇ ಆರಾಧಿಸಬೇಕು. ಅವನೊಡನೆಯೇ ವಿನಯ ತೋರಬೇಕು. ಅವನ ಮೇಲೆಯೇ ಭರವಸೆ ಹೊಂದಬೇಕು. ಅವನಿಗಾಗಿಯೇ ಭಯಪಡಬೇಕು. ಅಂದ ಹಾಗೆ ಈ ಮೂರು ವಿಧದ ವಿಶೇಷತೆಯಿಲ್ಲದೇ ಏಕತ್ವವು ಪರಿಪೂರ್ಣವಾಗದು. ಪ್ರಥವಾಗಿ ಅವನ ಅಸ್ತಿತ್ವ ನೆಲೆಯ ಏಕತ್ವ ಅಂದರೆ ಅವನ ಅಸ್ತಿತ್ವದ ಎದುರು ಎಲ್ಲಾ ಅಸ್ತಿತ್ವಗಳನ್ನು ಗೌಣ ಎಂದು ಭಾವಿಸಬೇಕು ಮತ್ತು ಎಲ್ಲವೂ ನಾಶಹೊಂದುವುವು. ವಾಸ್ತವವಿಲ್ಲದವು ಎಂದು ಭಾವಿಸಬೇಕು. ಎರಡನೆಯದಾಗಿ ಗುಣಗಳ ನೆಲೆಯಲ್ಲಿಯ ಏಕತ್ವ ಅಂದರೆ ಪರಿಪಾಲನೆ ಮತ್ತು ಸೃಷ್ಟಿಯ ಗುಣಗಳು ಅಲ್ಲಾಹನ ಹೊರತು ಯಾರಲ್ಲಿಯೂ ಇಲ್ಲ ಎಂದು ಭಾವಿಸಬೇಕು ಮತ್ತು ಬೌದ್ಧಿಕವಾಗಿ ಕಾಣುವಂತಹ ಎಲ್ಲ ವಿಧಗಳು ಅಥವಾ ಉಪಯೋಗಗಳನ್ನು ಅವನ ವ್ಯವಸ್ಥೆ ಎಂದು ದೃಢವಾಗಿ ನಂಬಬೇಕು.

ಮೂರನೆಯದಾಗಿ ತನ್ನ ಪ್ರೀತಿ, ನಿಷ್ಠೆ ಮತ್ತು ನಂಬಿಕೆಯ ನೆಲೆಯಲ್ಲಿ ಏಕತ್ವ ಅಂದರೆ ಅಸಾಧ್ಯ ರೀತಿಯ ಪ್ರೀತಿ ಇತ್ಯಾದಿಗಳನ್ನು ಅಲ್ಲಾಹನ ಹೊರತು ಬೇರೆ ಯಾರನ್ನೂ ಸಹಭಾಗಿಯನ್ನಾಗಿ ಮಾಡಬಾರದು. ಅವನಲ್ಲಿಯೇ ತನ್ನ ಅಸ್ತಿತ್ವ ಕಳಕೊಳ್ಳಬೇಕು. (ಸಿರಾಜುದ್ದೀನ್ ಈಸಾಯಿಯ ನಾಲ್ಕು ಪ್ರಶ್ನೆಗಳ ಉತ್ತರ. ರೂ. ಖ. ಸಂ. 12, ಪುಟ 349).

ಅದೇ ರೀತಿ ಹೇಳಿದರು. ನಾವು ಈ ಮಾತನ್ನು ಒಪ್ಪದಿದ್ದರೆ, ಅನುಗ್ರಹಗಳ ಅವಜ್ಞಾಕಾರಿಗಳಾಗುವೆವು. ಅದೇನೆಂದರೆ, ವಾಸ್ತವ ರೀತಿಯ ಏಕತ್ವ ನಾವು ಆ ನಬಿ(ಸ) ರಿಂದ ಪಡೆದೆವು ಮತ್ತು ಜೀವಂತ ದೇವನ ಅಸ್ತಿತ್ವದ ಕುರುಹು ಸಹ ನನಗೆ ಆ ಪರಿಪೂರ್ಣ ನಬಿ(ಸ) ರವರಿಂದಲೇ ದೊರೆಕಿದ್ದು ಮತ್ತು ಅವರ ಪ್ರಕಾಶದಿಂದಲೇ ದೊರಕಿದ್ದು, ಮತ್ತು ಅಲ್ಲಾಹನ

ಸಂಭಾಷಣೆ ಹಾಗೂ ದೇವವಾಣಿಯ ಅನುಗ್ರಹದ ಮೂಲಕ ನಾವು ಅವನ ದರ್ಶನ ಪಡೆಯುತ್ತೇವೆ. ಅದೇ ಸಜ್ಜನ ಪ್ರವಾದಿಯ ಮೂಲಕ ನಮಗೆ ದೊರೆತಿದೆ. ಆ ಮಾರ್ಗದರ್ಶನರೂಪದ ಸೂರ್ಯನ ಕಿರಣಗಳು ಬಿಸಿಲಿನ ರೂಪದಲ್ಲಿ ನಮ್ಮ ಮೇಲೆ ಬೀಳುತ್ತದೆ ಮತ್ತು ನಾವು ಅವರ ಮುಂದೆ ನಲ್ಲುವ ತನಕ ಅವರ ಪ್ರಕಾಶ ಪಡೆಯಲು ಸಾಧ್ಯವಾಗುತ್ತದೆ. (ಹಖೀಖತುಲ್ ವಹಿ, ರೂ. ಖ ಸಂ 22, ಪುಟ 119)

ಮತ್ತೆ ಹೇಳಿದರು. ನಮ್ಮ ನಬಿ(ಸ) ಸತ್ಯ ಸಾಧನೆಗಾಗಿ ಓರ್ವ ಮಹೋನ್ನತ ಮುಜದ್ದಿದ್ (ಸುಧಾರಕರು) ಆಗಿದ್ದರು. ಅವರು ಮಾಯವಾದ ಸತ್ಯತೆಯನ್ನು ಲೋಕದಲ್ಲಿ ಪುನಃ ಸ್ಥಾಪಿಸಿದರು. ಈ ಸಾಧನೆಯಲ್ಲಿ ನಮ್ಮ ನಬಿ(ಸ) ಹೊರತು ಯಾವ ನಬಿಯೂ ಸರಿಸಮಾನರಲ್ಲ. ಅವರು ಇಡೀ ಲೋಕವನ್ನು ಕತ್ತಲಿನಲ್ಲಿ ಪಡೆದಿದ್ದರು ಮತ್ತು ಅವರ ಆಗಮನದಿಂದಾಗಿ ಆ ಕತ್ತಲು ಪ್ರಕಾಶದಲ್ಲಿ ಪರಿವರ್ತನೆಗೊಂಡಿತು. ಯಾವ ಸಮುದಾಯದಲ್ಲಿ ಅವರು ಆಗಮಿಸಿದರು. ಆ ಸಮುದಾಯವೆಲ್ಲ ಭಹುದೇವಾರಾಧನೆಯ ವಸ್ತ್ರಗಳನ್ನು ಕಳಚಿ ಏಕತ್ವದ ವೇಷ ಧರಿಸುವವರೆಗೆ ಅವರು ಅಗಲಲಿಲ್ಲ. (ಲೆಚ್ಚರ್ ಸಿಯಾಲ್ಕೋಟ್, ರೂಹಾನಿ ಖಝಾಈನ್, ಸಂಪುಟ–20, ಪುಟ–206)

ನಿಜಸ್ಥಿತಿ ಏನೆಂದರೆ ಲೋಕಗಳ ಮಹೋನ್ನತ ಸುಧಾರಕರಾದರೆ, ಸರ್ವ ಪ್ರವಾದಿಗಳಲ್ಲಿ ಉತ್ತಮರು ಎನ್ನಬೇಕು. ಅಂದರೆ ಆ ವ್ಯಕ್ತಿಯ ಕೈಗಳಿಂದ ಲೋಕದ ಗೊಂದಲಗಳು ದೂರವಾಗಿ ಸುಧಾರಣೆ ಕಂಡಿತು. ಅವರು ಮಾಯವಾದ ಏಕತ್ವವನ್ನು ಭೂಮಿಯ ಮೇಲೆ ಪುನರುತ್ಥಾನಗೊಳಿಸಿದರು. (ಬರಾಹೀನೆ ಅಹ್ಮದಿಯಾ ಭಾಗ 2, ರೂಹಾನಿ ಖಝಾಈನ್, ಸಂ–1, ಪುಟ–97 ಟಿಪ್ಪಣಿ ಸಂಖ್ಯೆ 6)

ಹಝ್ರತ್ ರಸೂಲುಲ್ಲಾಹ್(ಸ) ರವರ ಜೀವನವೆಲ್ಲ ಅಲ್ಲಾಹನ ಏಕತ್ವ ಮತ್ತು ಅವನ ಆರಾಧನೆಯನ್ನು ಸ್ಥಾಪಿಸುವಲ್ಲಿ ಕಳೆಯಿತು. ಅವರು (ಸ) ತನ್ನ ಸೃಷ್ಟಿಕರ್ತನೊಂದಿಗೆ ತೋರಿದ ಪ್ರೀತಿ ಲೋಕದಲ್ಲಿಯೇ ಕಾಣಸಿಗದು. ಅದನ್ನು ಸಾಕ್ಷ್ಯಪಡಿಸುತ್ತ ಅಲ್ಲಾಹನು ಹೇಳಿದನು.

"ವವಜದಕ ಝುಲ್ಲನ್ ಫಹದಾ" (ಅಝುಹಾ–8) (ತನ್ನನ್ನು) ಹುಡುಕುತ್ತಾ ಅಲೆದಾಡುವವನಾಗಿ ಅವನು ನಿನನ್ನು ಕಂಡನು ಆಗ ಅವನು (ತನ್ನೆಡೆಗೆ) ಮಾರ್ಗದರ್ಶನ ನೀಡಿದನು. ನಿಸ್ಸೀಮ ರೀತಿಯ ದೈವಾರಾಧನೆ ಮತ್ತು ದೇವನ ಪ್ರೀತಿಯ ಫಲವಾಗಿ ಅವರು ಹಿರಾ ಗುಹೆಯಲ್ಲಿ ದೇವವಾಣಿ ಪಡೆದರು. ಅವರ ಮೇಲೆ ಅವತರಿಸಿದ ಪ್ರಥಮ ದಿವ್ಯವಾಣಿಯ ಸಂದೇಶವೇ ದೇವ ಏಕತ್ವದ್ದಾಗಿತ್ತು. ಹೇಳಿದನು: ಇಕ್ರ ಬಿಸ್ಮಿ ರಬ್ಬಿಕಲ್ಲಝಿ ಖಲಕ (ಅಲ್–ಅಲಖ್ –2) ಸರ್ವನನ್ನು ಸೃಷ್ಟಿಸಿದ ನಿನ್ನ ಪ್ರಬುವಿನ ನಾಮದಿಂದ ಪಠಿಸು. ಅಂತೂ ತಮ್ಮ ಜೀವನ ಪರ್ಯಂತ ಅವರು ಅದೇ ಸಂದೇಶ ಪಠಿಸುತ್ತಿದ್ದರು. ಮತ್ತು ಎಂದೆಂದಿಗೂ ತನ್ನ ಸೃಷ್ಟಿಕರ್ತನ ಮೇಲೆ ಬಲಿಯಾಗ ಬಯಸುತ್ತಿದ್ದರು. ಈ ಮಾತನ್ನು ಅವರ ಕಡು ಶತ್ರುಗಳು ಸಹ ಒಪ್ಪುತ್ತಾರೆ. "ಅಶಿಖ ಮುಹಮ್ಮದ್ ರಬ್ಬಹು" ಮುಹಮ್ಮದ್ ತನ್ನ ಪ್ರಭುವಿನ ಪ್ರೇಮಿಯಾಗಿದ್ದಾನೆ. ಅವರು ಯಾವಾಗಲೂ ಅಲ್ಲಾಹನ ಪ್ರೀತಿ ಗಳಿಸಲು ದುಆ ಪ್ರಾರ್ಥನೆಗಳಲ್ಲಿ ತೊಡಗಿರುತ್ತಿದ್ದರು. ಅಂದ ಹಾಗೆ ಅವರು ಸಾಮಾನ್ಯವಾಗಿ ಈ ದುಆ ಮಾಡುತ್ತಿದ್ದರು.

ಅನುವಾದ: ಓ ಅಲ್ಲಾಹನೇ ನಿನ್ನಿಂದಲೆ ನಿನ್ನ ಪ್ರೀತಿಯನ್ನು ಬಯಸುವೆನು ಮತ್ತು ಸಾಮಾನ್ಯವಾಗಿ ಈ ದುಆ ಮಾಡುತ್ತಿದ್ದರು.

ಅನುವಾದ: ಓ ಅಲ್ಲಾಹನೇ ನಿನ್ನಿಂದಲೇ ನಿನ್ನ ಪ್ರೀತಿಯನ್ನು ಬಯಸುವೆನು ಮತ್ತು ನಿನ್ನನ್ನು ಪ್ರೀತಿಸುವವರ ಪೈಕಿಯ ಪ್ರೀತಿ ಬಯಸುವೆನು. ನಾನು ನಿನ್ನಿಂದ ನಿನ್ನ ಪ್ರೀತಿಯ ಮಾರ್ಗ ತಲುಪಿಸುವಂತಹ ಕರ್ಮಗಳನ್ನು ಪಡೆಯಬಯಸುವೆನು.

ಇಸ್ಲಾಮಿ ಶಿಕ್ಷಣದ ಪ್ರಥಮ ತತ್ವವೇ ಏಕತ್ವ ಸ್ಥಾಪಿಸುವುದಾಗಿದೆ. ಮತ್ತು ಅದರ ಅಡಿಪಾಯ, ಕಲಿಮ 'ಲಾ ಇಲಾಹ ಇಲ್ಲಲ್ಲಾಹ' ಆಗಿದೆ. ಹಝ್ರತ್ ರಸೂಲುಲ್ಲಾಹ್(ಸ) ರವರಿಗೆ ಈ ಏಕತ್ವದ ಕಲಿಮ ಎಷ್ಟೊಂದು ಪ್ರಿಯವಾಗಿತ್ತೆಂದರೆ, ಅವರು ಹೇಳಿದರು. ಯಾವ ವ್ಯಕ್ತಿ ನಿಷ್ಠಾಪೂರ್ವಕವಾಗಿ ಈ ಕಲಿಮ ಪಠಿಸುವನೋ, ತನಗಾಗಿ ಅಲ್ಲಾಹನ ಸಂತೃಪ್ತಿ ಮತ್ತು ಅವನ ಸ್ವರ್ಗದ ಬಾಗಿಲುಗಳನ್ನು ತೆಗೆದುಕೊಳ್ಳಲು ಕಾರಣಗಳಾಗುವುದು. ಅದೇ ರೀತಿ ಒಂದು ಸಂದರ್ಭದಲ್ಲಿ ಹೇಳಿದರು. "ಅಫಝುಲುಝ್ಝಿಕ್ರು ಲಾ ಇಲಾಹ ಇಲ್ಲಲ್ಲಾಹ್" ಅಂದರೆ ದೇವಸ್ಮರಣೆಯಲ್ಲಿ ಅತ್ಯುತ್ತಮವಾದ ಸ್ಮರಣೆ ಏಕತ್ವದ ಈ ಕಲಿಮವನ್ನು ಉಚ್ಛರಿಸುವುದಾಗಿದೆ. ಯಾವುದಾದರೂ ಆಪತ್ತು ಬಂದಾಗಲೂ ಈ ಕಲಿಮ ಅವರು ಉಚ್ಛರಿಸುತ್ತಿದ್ದರು. ಲಾ ಇಲಾಹ ಇಲ್ಲಲ್ಲಾಹುಲ್ ಅಝಿಮಿಲ್ ಹಲೀಮ್. ಅಲ್ಲಾಹನ ಹೊರತು ಯಾರೂ ಆರಾಧ್ಯನಲ್ಲ. ಅವನು ವಿವೇಕವಂತನೂ, ಪ್ರತಾಪವಂತನು ಆಗಿರುವನು ಈ ಏಕತ್ವದ ಕಲಿಮಗೋಸ್ಕರ ಅವರು ನಾನಾ ರೀತಿಯ ದು:ಖ ಕಷ್ಟಗಳನ್ನು ಎದುರಿಸಿದರು ಮತ್ತು ಶಿಷ್ಯಂದರ ಒಂದು ಎಂತಹ ಸಮುದಾಯ ಉಂಟುಮಾಡಿದರೆಂದರೆ, ಅವರು ಏಕತ್ವ ಕಲಿಮಕ್ಕೋಸ್ಕರ ಬಲಿಯಾಗುತ್ತಿದ್ದರು. ಮತ್ತು ಅದಕ್ಕೋಸ್ಕರ ಒಂದು ದೃಢವಾದ ಬಂಡೆಯಂತೆ ನಿಲ್ಲುತ್ತಿದ್ದರು. ಅವರು ತಮ್ಮ ಸಮುದಾಯಕ್ಕೆ ಶಿಕ್ಷಣ ನೀಡಿದರು. ಒಂದು ದಿನದಲ್ಲಿ ಕನಿಷ್ಠ ನೂರು ಸಲ ಕಲಿಮ ತೌಹೀದ್ (ಏಕತ್ವದ ಕಲಿಮ) ಉಚ್ಛರಿಸಬೇಕು. ಅದರ ಪದಗಳು ಹೀಗಿವೆ. "ಲಾ ಇಲಾಹ್ ಇಲ್ಲಲ್ಲಾಹ್ ವಹದಹೂ ಲಾ ಶರೀಕಲಹೂ ಲಹುಲ್ ಮುಲ್ಕು ವ ಲಹುಲ್‌ಹಮ್ದು ವಹುವ ಅಲಾ ಕುಲ್ಲಿ ಶಯಿನ್ ಖದಿರ್." ಇಸ್ಲಾಮಿ ತತ್ವ ಏಕತ್ವದ ಮಹೋನ್ನತವಾದ ವಿಶೇಷತೆ ಏನೆಂದರೆ ಅದರ ಫಲವಾಗಿ ಲೋಕದ ಎಲ್ಲಾ ಜನರು ಒಂದೇ ಮೂಲೆಯಲ್ಲಿ ಪೋಣಿಸಲ್ಪಟ್ಟು ಪರಸ್ಪರ ಸಹೋದರರಾಗುತ್ತಾರೆ ಮತ್ತು ಸೃಷ್ಟಿಯೆಲ್ಲ ಅಲ್ಲಾಹನ ಸಂತತಿಯಾಗಿ ಕೇವಲ ಏಕತೆ ಒಗ್ಗಟ್ಟಿನ ಮಾಲೆಯಲ್ಲಿ ಪೋಣಿಸಲ್ಪಡುವುದಿಲ್ಲ. ಬದಲು ಎಲ್ಲರ ದೃಷ್ಟಿಕೋನ ಮತ್ತು ಲಕ್ಷ ಒಂದೇ ಆಗಿರುತ್ತದೆ. ಹಾಗೆ ತೌಹಿದ್ ಎಂಬ ವೇದಿಕೆಯ ಮೇಲೆ ಎಲ್ಲರನ್ನೂ ಒಗ್ಗೂಡಿಸಬಹುದಾಗಿದೆ. ಇನ್ನೊಂದೆಡೆ ಅನ್ಯ ದೇವರಲ್ಲಿ ನಂಬಿರುವವರು ಎಂದೂ ಒಗ್ಗೂಡಲಾರರು. ಅದೇ ಕಾರಣದಿಂದ ಈ ಏಕತ್ವ ಕಲಿಮಕ್ಕಾಗಿ ಅವರು ಮತ್ತು ಅವರ ಸಹಾಬರು ಪ್ರಾಣ, ಸಂಪತ್ತು, ಸಂತಾನ ಮತ್ತು ಜನ್ಮಸ್ಥಳ ಎಲ್ಲವನ್ನು ತ್ಯಾಗ ಮಾಡಿದರು. ತಮ್ಮಿಂದ ಎಷ್ಟೋಪಟ್ಟು ಶತ್ರುಗಳೊಡನೆ ನಿರ್ಭಯವಾಗಿ ಹೋರಾಡಿದರು. ಮತ್ತು ಹುತಾತ್ಮರಾದರು.

ಅವರಿಗೆ ಏಕತ್ವದ ಕಲಿಮ ಎಷ್ಟು ಪ್ರಿಯವಾಗಿತ್ತೆಂದರೆ ಅವರ ಪ್ರಾಣಶತ್ರುವಾದರೂ ಕಲಿಮ ಉಚ್ಛರಿಸಿದರೆ ಅವನಿಗೆ ಕ್ಷಮಾಪಣೆಯ ಘೋಷಣೆ ಮಾಡುತ್ತಿದ್ದರು ಮತ್ತು ಯಾರಾದರೂ ಏಕತ್ವದ ಕಲಿಮ ಉಚ್ಛರಿಸಿದವನ ಕೊಲೆ ಮಾಡಿದರೆ ಅವರ ಮೇಲೆ ಕೋಪಗೊಳ್ಳುತ್ತಿದ್ದರು. ಅಂದ ಹಾಗೆ ಹಝ್ರತ್ ಉಸಾಮಿ ಬಿನ್ ಝೈದ್ ಒಂದು ಯುದ್ಧ ಸಂದರ್ಭದಲ್ಲಿ ಕಲಿಮ ಉಚ್ಛರಿಸಿದವನ ಹತ್ಯೆ ಮಾಡಿದ್ದರು. ಹಝ್ರತ್ ರಸೂಲುಲ್ಲಾಹ್(ಸ) ರವರಿಗೆ ಈ ಘಟನೆ ತಿಳಿಸಲಾಯಿತು. ಆಗ ಹುಝೂರ್(ಸ) ಹಝ್ರತ್ ಉಸಾಮ ಅವರ ಮೇಲೆ ತುಂಬ ಕೋಪಗೊಂಡರು. ಉಸಾಮ ಹೇಳಿದರು. ಹುಝೂರ್(ಸ) ಅವರು ಖಡ್ಗದ ಹೆದರಿಕೆಯಿಂದ ಕಲಿಮ ಉಚ್ಛರಿಸಿದ್ದರು. ಆಗ ಅವರು ಹೇಳಿದರು. ನೀನು ಅವನ ಎದೆ ಸೀಳಿ ನೋಡಿದ್ದೆಯಾ? ಅವನು ನಿಜವಾಗಿಯೂ ಖಡ್ಗ ಭಯದಿಂದ ಕಲಿಮ ಉಚ್ಛರಿಸಿದ್ದನೆ ಅಥವಾ ಇಲ್ಲ. ಏಕತ್ವ ಕಲಿಮಕ್ಕಾಗಿ ಹಝ್ರತ್ ರಸೂಲುಲ್ಲಾಹ್(ಸ) ರವರಿಗೆ ಎಷ್ಟರಮಟ್ಟಿಗೆ ಸ್ವಾಭಿಮಾನವಿತ್ತೆಂದರೆ ಉಹದ್ ಯುದ್ಧದ ಸಂದರ್ಭದಲ್ಲಿ ತಾತ್ಕಾಲಿಕವಾಗಿ ಸೋಲುಂಟಾಗಿತ್ತು. ಮತ್ತು ಹಝ್ರತ್ ರಸೂಲುಲ್ಲಾಹ್(ಸ) ಮತ್ತು ಮುಸಲ್ಮಾನರು ಒಂದು ಗುಡ್ಡದ ಮಡಿಯಲ್ಲಿ ಅತ್ಯಂತ ಮೌನವಹಿಸಿ ಶರಣವಹಿಸಿದ್ದರು. ಅವಿಶ್ವಾಸಿಗಳು ಭಾವಿಸಿದರು. ನಾವು ಮುಸಲ್ಮಾರ ದೊಡ್ಡ ದೊಡ್ಡ ನೇತಾರರನ್ನು ಹತ್ಯೆ ಮಾಡಿದೆವು. ಆಗ ಅವರು ಬೀಗುತ್ತಾ ಉಚ್ಛ ಸ್ವರದಲ್ಲಿ ಕೇಳಿದರು. ನಿಮ್ಮಲ್ಲಿ ಮುಹಮ್ಮದ್(ಸ) ಇದ್ದಾರೆಯೇ, ಹಝ್ರತ್ ರಸೂಲುಲ್ಲಾಹ್(ಸ) ಸಹಾಬರಿಗೆ ಮೌನವಹಿಸಲು ಹೇಳಿದರು. ಮತ್ತೆ ಅವರು ಕೇಳಿದರು. ನಿಮ್ಮಲ್ಲಿ ಅಬೂಬಕರ್ ಇದ್ದಾರೆಯೇ, ಹಝ್ರತ್ ರಸೂಲುಲ್ಲಾಹ್(ಸ) ಮತ್ತೆ ಮೌನವಾಗಿರಲು ಹೇಳಿದರು. ಮತ್ತೆ ಅವರು ಉಚ್ಛಸ್ವರದಲ್ಲಿ ಕೇಳಿದರು. ನಿಮ್ಮಲ್ಲಿ ಉಮರ್ ಇದ್ದಾರೆಯೇ, ಉಸ್ಮಾನ್ ಇದ್ದಾರೆಯೇ, ಮುಸಲ್ಮಾನರ ಕಡೆಯಿಂದ ಸದ್ದಿಲ್ಲದ್ದನ್ನು ಕಂಡು ಅವರೆಲ್ಲರೂ ಸಾವಿಗೀಡಾಗಬಹುದೆಂದು ಯೋಚಿಸಿಕೊಂಡು ಹೇಳಿದರು. "ಉಲೂ ಹುಬುಲ್" ಎಂಬ ಘೋಷಣೆ ಕೂಗಿದರು. ಅಂದರೆ ನಮ್ಮ ವಿಗ್ರಹಗಳಿಗೆ ಜಯವಾಗಲಿ ಎಂದು. ಬಹುದೇವರಾಧಿತ ಈ ಘೋಷಣೆಯನ್ನು ಕೇಳಿ ಹಝ್ರತ್ ರಸೂಲುಲ್ಲಾಹ್(ಸ) ರವರ ದೇವ ಏಕತ್ವದ ಸ್ವಾಭಿಮಾನ ಜಾಗೃತಗೊಂಡಿತು ಮತ್ತು ಬಹುದೇವರಾಧನೆಯ ಘೋಷಣೆ ಸಹಿಸಲಾಗಲಿಲ್ಲ. ಅವರು ಸ್ವಯಂ ಮುಸಲ್ಮಾನರಿಗೆ ಹೇಳಿದರು. ಉತ್ತರ ಏಕೆ ನೀಡುತ್ತಿಲ್ಲ? ಸಹಾಬರು ಕೇಳಿದರು. ಏನು ಉತ್ತರ ನೀಡಬೇಕು? ಹೇಳಿದರು. ಹೇಳಿರಿ. 'ಅಲ್ಲಾಹು ಆಲಾ ವ ಅಜಲ್" ಅಲ್ಲಾಹನ ಹೆಸರು ಘನತೆ ಗೌರವದ್ದಾಗಿದೆ.

ಬದರ್ ಯುದ್ಧ ಸಂದರ್ಭದಲ್ಲಿ ಒಬ್ಬ ಬಹುದೇವಾರಾಧಕನು ಹೇಳಿದನು. ನೀವು ನನಗೆ ಸಾಂಪತ್ತಿಕ ನೆರವು ನೀಡಿದರೆ ನಾನು ನಿಮ್ಮ ಜೊತೆ ನಡೆಯಲು ಸಿದ್ಧನಿದ್ದೇನೆ. ಅವರು ಹೇಳಿದರು ನೀವು ಮುಸಲ್ಮಾನನಾಗಲು ತಯಾರಿದ್ದೀರಾ? ಅವನು ಹೇಳಿದನು. ನಾನು ಮುಸಲ್ಮಾನನಾಗಲು ಸಿದ್ಧನಿಲ್ಲ. ಆಗ ಅವರು ಹೇಳಿದರು. ನಾನು ಯಾವ ಬಹುದೇವಾರಾಧಕನಿಂದ ಸಹಾಯ ಪಡೆಯುವುದಿಲ್ಲ.

**(ಉಳಿದ ಭಾಗ ಪುಟ ಸಂಖ್ಯೆ 10ರಲ್ಲಿ ಮುಂದುವರಿಸಲಾಗಿದೆ)**

*ಲಿಯಾ ಝುಲ್ಮ್ ಕಾ ಅಫೂ ಸೇ ಇನ್ತೆಖಾಮ್ * ಅಲೈಕಸ್ಸಲಾತು ಅಲೈಕಸ್ಸಲಾಂ*

# ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಮಹಾತ್ತಾದ ಕ್ಷಮೆ

(ಮನ್ಸೂರ್ ಅಹ್ಮದ್ ಮಸ್ರೂರ್)

ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳಿದನು: **ಖುಝಿಲ್ ಅಫ್ವ ವಮುರ್ ಬಿಲ್ ಉರ್‌ಫಿ ವ ಅರಿಝ್ ಅನಿಲ್ ಜಾಹಿಲೂನ್.** (ಅಲ್‌ಅರಾಫ್:200)

ಅನುವಾದ: ನೀನು ಕ್ಷಮಾಶಿಲನಾಗು, ಒಳಿತನ್ನು ಉಪದೇಶಿಸು ಮತ್ತು ಅವಿವೇಕಿಗಳಿಂದ ದೂರ ಸರಿ.

ಅಲ್ಲಾಹನ ಈ ರೀತಿಯ ಹಲವು ವಚನಗಳಿವೆ. ಅದರ ಪ್ರಕಾಶದಲ್ಲಿ ಮತ್ತು ನಬಿಯರಾದ ಹಝ್‌ರತ್ ಮುಹಮ್ಮದ್(ಸ) ರವರ ಕ್ಷಮಾಶೀಲತೆಯ ಅಸಂಖ್ಯಾತ ಉದಾಹರಣೆಗಳಿವೆ. ಪ್ರವಾದಿಗಳ ಇತಿಹಾಸದಲ್ಲಿ ಇಂತಹ ಉದಾಹರಣೆಗಳು ಹುಡುಕಿದರೂ ಸಿಗುವುದು ಕಷ್ಟ. ಒಂದು ಸಾಧಾರಣ ಮನುಷ್ಯನ ಕಲ್ಪನೆಗೂ ಎಟುಕಲಾರದು. ಈ ಭೂಲೋಕದಲ್ಲಿ ಕ್ಷಮಾಶೀಲತೆಯ ಈ ಪರಿ ಉದಾಹರಣೆ ಇದೆಯೋ ಎಂದು. ಮತ್ತು ಕ್ಷಮಾಶೀಲತೆಯ ಈ ಪರಿಯ ಮಹೋನ್ನತ ಸ್ಥಾನಕ್ಕೆ ತಲುಪಬಹುದೇ ಎಂದು. ಸಣ್ಣಪುಟ್ಟ ದೌರ್ಜನ್ಯಗಳ ಮಾತು ಬೇರೆ. ಅವರು ಮಹಾ ಅತಿ ಮಹಾ ಕ್ರೂರಿಗಳನ್ನು, ಹತ್ಯೆಗಾರರನ್ನು, ಹಿಂಸೆಯ ಎಲ್ಲಾ ಮಾದರಿ ದಾಟಿದವರನ್ನು ಕ್ಷಮಿಸಿದರು. ಈ ಕೆಳಗೆ ನಮ್ಮ ನಾಯಕರಾದ ಸಯ್ಯದ್‌ನಾ ಹಝ್‌ರತ್ ಮುಹಮ್ಮದ್ ಮುಸ್ತಫಾ(ಸ) ರವರ ಅದ್ವಿತೀಯ ಕ್ಷಮಾಶೀಲತೆಯ ಕೆಲವು ಉದಾಹರಣೆಗಳು ಮಾತ್ರ ಪ್ರಸ್ತುತವಿದೆ.

ಬದರ್ ಯುದ್ಧವು ಖುರೈಶಿಯ ಅವಿಶ್ವಾಸಿಗಳು ಮತ್ತು ಮುಸಲ್ಮಾನರ ಮಧ್ಯೆ ನಡೆದ ಒಂದು ಭೀಕರ ಯುದ್ಧವಾಗಿತ್ತು. ಆ ಯುದ್ಧದಿಂದ ಅವಿಶ್ವಾಸಿಗಳ ಬೇರು ಮುರಿದಂತಾಗಿತ್ತು. ಅದರಲ್ಲಿ 70 ಅವಿಶ್ವಾಸಿಗಳು ಖೈದಿಯಾಗಿ ಬಂಧಿಸಲ್ಪಟ್ಟಿದ್ದರು. ಅವರು ಆ ಪ್ರಾಣಶತ್ರುಗಳನ್ನು ಕ್ಷಮಿಸಿದ ವರ್ತನೆ ಅತ್ಯಂತ ಶ್ಲಾಘನೀಯ. ಅವಿಸ್ಮರಣೀಯ. ಹಝ್‌ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ ಎ(ರ) ಹೇಳುತ್ತಾರೆ.

ಆ ಖೈದಿಗಳಲ್ಲಿ ಸುಹೇಲ್ ಬಿನ್ ಉಮ್ರೋ ಸಹ ಇದ್ದ. ಅವನು ಖುರೇಶರ ಅಗರ್ಭ ಕುಟುಂಬಕ್ಕೆ ಸೇರಿದವನಾಗಿದ್ದ. ಮತ್ತು ಒಳ್ಳೆಯ ವಾಗ್ಮಿ ಪ್ರತಿಭಾವಂತನಾಗಿದ್ದ. ಸಾಮಾನ್ಯತ ಅವನು ಹಝ್‌ರತ್ ರಸೂಲುಲ್ಲಾಹ್(ಸ) ರವರ ವಿರುದ್ಧ ಭಾಷಣಗಳನ್ನು ಮಾಡುತ್ತಿದ್ದ. ಬದರ್ ಯುದ್ಧದಲ್ಲಿ ಅವನು ಸೆರೆಹಿಡಿಯಲ್ಪಟ್ಟಾಗ ಹಝ್‌ರತ್ ಉಮರ್(ರ) ಹಝ್‌ರತ್ ರಸೂಲುಲ್ಲಾಹ್(ಸ) ರವರಿಗೆ ಹೇಳಿದರು. ಓ ಪ್ರವಾದಿವರ್ಯರೇ! ಸುಹೇಲ್ ಬಿನ್ ಉಮ್ರೋನ ಮುಂದಿನ ಹಲ್ಲುಗಳನ್ನು ಕಿತ್ತುಕೊಳ್ಳಬೇಕು. ಏಕೆಂದರೆ ನಿಮ್ಮ ವಿರುದ್ಧ ವಿಷಕಾರುವುದನ್ನು ಬಿಡಬಹುದು. ಆದರೆ ಅವರು ಈ ಸಲಹೆಯನ್ನು ಮೆಚ್ಚಲಿಲ್ಲ. ಒಡನೆಯೇ ಹೇಳಿದರು. ಉಮರ್ ನಿಮಗೇನು ಗೊತ್ತು. ಅಲ್ಲಾಹನು ಅವನನ್ನು ಯಾವ ಸ್ಥಾನಕ್ಕೆ ತಲುಪಿಸಬಹುದೆಂದು. ಅಂದ ಹಾಗೆ ಮಕ್ಕ ವಿಜಯದ ಸಂದರ್ಭದಲ್ಲಿ ಸುಹೇಲ್ ಮುಸಲ್ಮಾನನಾದನು. ಹಝ್‌ರತ್ ರಸೂಲುಲ್ಲಾಹ್(ಸ) ರವರು ನಿಧನಗೊಂಡಾಗ ಅವರು ಅಧೀರ ಜನರನ್ನು ಉಳಿಸಲು ಇಸ್ಲಾಮಿನ ಪರವಾಗಿ ಅತ್ಯಂತ ಪ್ರಭಾವಶಾಲಿ ಭಾಷಣಗಳನ್ನು ಮಾಡಿದರು. ಅದರಿಂದ ಹಲವು ಅಧೀರರಾದ ಜನರು ದೃಢವಾಗಿ ನೆಲೆನಿಲ್ಲುವಂತಾಯಿತು. ಮತ್ತು ಅದೇ ಸುಹೇಲರ ಕುರಿತು ವರದಿ ಇದೆ. ಒಂದು ಸಂದರ್ಭದಲ್ಲಿ ಹಝ್‌ರತ್ ಉಮರ್ ಅವರ ಖಿಲಾಫತ್ ಅವಧಿಯಲ್ಲಿ ಅವರು ಮತ್ತು ಅಬೂ ಸುಫಿಯಾನ್ ಮತ್ತು ಇತರ ಕೆಲವು ಮಕ್ಕದ ಶ್ರೀಮಂತ ಸರದಾರರು ಮಕ್ಕ ವಿಜಯದ ಸಂದರ್ಭದಲ್ಲಿ ಮುಸಲ್ಮಾನರಾಗಿದ್ದರು. ಹಜ್‌ರತ್ ಉಮರ್‌ರೊಡನೆ ಭೇಟಿಯಾಗಲು ಬಂದಿದ್ದರು. ಆಕಸ್ಮಿಕವಾಗಿ ಅದೇ ಸಮಯಕ್ಕೆ ಬಿಲಾಲ್, ಅಮ್ಮಾರ್ ಮತ್ತು ಸುಹೇಬ್ ಮುಂತಾದವರು ಸಹ ಹಝ್‌ರತ್ ಉಮರ್‌ರೊಡನೆ ಭೇಟಿಯಾಗಲು ಬಂದಿದ್ದರು. ಇವರೆಲ್ಲರೂ ಒಂದು ಕಾಲಕ್ಕೆ ಅವರ ಗುಲಾಮರಾಗಿದ್ದರು. ತುಂಬ ಬಡವರಾಗಿದ್ದರು. ಆದರೆ ಇಸ್ಲಾಮಿನ ಆರಂಭಿಕ ಕಾಲದಲ್ಲಿ ವಿಶ್ವಾಸ ತಂದವರಾಗಿದ್ದರು. ಹಝ್‌ರತ್ ಉಮರ್(ರ) ಅವರಿಗೆ ಸುದ್ಧಿ ತಲುಪಿಸಿದಾಗ ಅವರು ಬಿಲಾಲ್ ಹಾಗೂ ಇತರರನ್ನು ಭೇಟಿಯಾಗಲು ಮೊದಲು ಕರೆದರು. ಅಬೂ ಸುಫಿಯಾನ್ ಅವರ ಮನದಲ್ಲಿ ಇನ್ನೂ ಆ ಅಜ್ಞಾನ ಕಾಲದ ಗುಣಗಳು ಬಾಕಿ ಇದ್ದವು. ಈ ದೃಶ್ಯ ನೋಡಿ. ಅವನ ಶರೀರವೆಲ್ಲ ಬೆಂಕಿಯಿಂದ ಕುದಿಯುವ ಹಾಗಾಯಿತು. ಈ ಅಪಮಾನವು ನಮಗೆ ನೋಡಬೇಕಾಗಿತ್ತೇನೋ. ನಾವು ಕಾಯಬೇಕು ಮತ್ತು ಆ ಗುಲಾಮರಿಗೆ ಆದರದ ಸ್ವಾಗತ ಮಾಡಬೇಕು. ಸುಹೇಲ್ ತಕ್ಷಣ ಎದುರಿನಲ್ಲಿಯೇ ಉತ್ತರ ನೀಡಿದರು. ಇದು ಯಾರ ತಪ್ಪು? ಮುಹಮ್ಮದ್(ಸ) ನಮಗೆಲ್ಲರಿಗು ಅಲ್ಲಾನೆಡೆ ಕರೆ ನೀಡಿದರು. ಆಗ ಅವರು ತಕ್ಷಣ ಸ್ವೀಕರಿಸಿದರು. ನಾವು ತಡ ಮಾಡಿದೆವು. ಹಿಗಾಗಿ ಅವರಿಗೆ ಗೌರವ ನೀಡಬೇಕೋ ಬೇಡವೋ? (ಸೀರತ್‌ಖಾತಮನ್ನಬಿಯೀನ್, ಹಝ್‌ರತ್ ಮಿರ್ಝಾ ಬಶೀರ್ ಅಹ್ಮದ್ ಸಾಃಇಬ್ ಎಂ.ಎ, ಪುಟ–369, ಮುದ್ರಣ ಖಾದಿಯಾನ್ 2009)

ಅದೇ ರೀತಿ ಉಮರ್ ಬಿನ್ ವಹಬ್ ಅವರು ಹಝ್‌ರತ್ ರಸೂಲುಲ್ಲಾಹ್(ಸ) ರವರನ್ನು ಹತ್ಯೆ ಮಾಡಲು ಮಕ್ಕಾದಿಂದ ಮದೀನಕ್ಕೆ ಹೋಗಿದ್ದರು. ಅವರೊಡನೆಯ ಸದ್ವರ್ತನೆ ಮತ್ತು ಕ್ಷಮಾಶೀಲತೆಯ ಘಟನೆ ಹೀಗಿದೆ. ಹಝ್‌ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಎಂಬವರು ಹೇಳುತ್ತಾರೆ. ಬದರ್ ಯುದ್ಧದ ಕೆಲವೇ ದಿನಗಳ ನಂತರ ಉಮೇರ್ ಬಿನ್ ವಹಬ್ ಮತ್ತು ಸಫ್ವನ್ ಬಿನ್ ಉಮ್ಮಿಯಾ ಬಿನ್ ಖಲಫ್ ಅವರು ಖುರೇಶರ ಪ್ರಭಾವಿ ಜನರೊಂದಿಗಾದರು. ಕಅಬ ಅಂಗಳದಲ್ಲಿ ಕುಳಿತುಕೊಂಡು ಯುದ್ಧದಲ್ಲಿ ಕೊಲ್ಲಲ್ಪಟ್ಟವರನ್ನು ನೆನೆದು ಶೋಕ ವ್ಯಕ್ತಪಡಿಸುತ್ತಿದ್ದರು. ತಕ್ಷಣ ಸಫ್ವಾನ್ ಉಮೇರರನ್ನು ಸಂಬೋಧಿಸಿ ಹೇಳಿದರು. ಈಗಂತೂ ಜೀವನದಲ್ಲಿ ಜಿಗುಪ್ಸೆ ಬಂದುಬಿಟ್ಟಿದೆ. ಉಮೇರ ಅವರ ಭಾವನೆಯನ್ನು ಗ್ರಹಿಸಿದರು ಮತ್ತು ಉತ್ತರ ನೀಡಿದರು. ನಾನಂತೂ ತನ್ನ ಪ್ರಾಣ ಅಪಾಯಕ್ಕೆ ಒಡ್ಡಲು ಸಿದ್ಧನಿದ್ದೇನೆ. ಆದರೆ ಮಕ್ಕಳ ಮತ್ತು ಸಾಲದ ಸಮಸ್ಯೆ ಎದುರಾಗಿದೆ. ಇಲ್ಲದಿದ್ದರೆ ಏನು ಅಡ್ಡಿ ಇರಲಿಲ್ಲ. ಸುಮ್ಮನೆ ಮದೀನಕ್ಕೆ ಹೋಗಿ ಮುಹಮ್ಮದ್(ಸ) ಅವರನ್ನು ಕೊಲೆ ಮಾಡಿ ಬರುತ್ತಿದ್ದೆ. ಮತ್ತು ನನಗೆ ಅಲ್ಲಿ ಹೊಗಲು ನೆಪವು ಇದೆ. ಅಲ್ಲಿ ನನ್ನ ಮಗ ಸೆರೆಹಿಡಿಯಲ್ಪಟ್ಟಿದ್ದಾನೆ. ಸಫ್ವಾನ್ ಹೇಳಿದನು. ನಿಮ್ಮ ಸಾಲ ಮತ್ತು ಮಕ್ಕಳನ್ನು ನಾನು ನೋಡಿಕೊಳ್ಳುತ್ತೇನೆ. ನೀವು ಅವಶ್ಯವಾಗಿ ಹೋಗಿ ಹೇಗೂ ಅವರನ್ನು ಮುಗಿಸಿ ಬನ್ನಿ. ಅಂತೂ ಯೋಜನೆ ದೃಢವಾಯಿತು ಸಫ್ವಾನ್‌ನಿಂದ ಅಪ್ಪಣೆ ಪಡೆದು ಉಮೇರ್ ತಮ್ಮ ಮನೆಗೆ ಬಂದರು. ಮತ್ತು ಖಡ್ಗವೊಂದನ್ನು ವಿಷಯುಣಿಸಿ ಮಕ್ಕದಿಂದ ತೆರಳಿದರು. ಅವರು ಮದೀನಕ್ಕೆ ತಲುಪಿದಾಗ ಹಝ್‌ರತ್ ಉಮರ್ ಈ ವಿಷಯದಲ್ಲಿ ತುಂಬ ಜಾಗೃತರಾಗಿದ್ದರು. ಅವನನ್ನು ನೋಡಿ ಭಯಗೊಂಡು ತಕ್ಷಣ ಹಝ್‌ರತ್ ರಸೂಲುಲ್ಲಾಹ್(ಸ) ರವರಿಗೆ ಸುದ್ಧಿ ಮುಟ್ಟಿಸಿದರು. ಉಮೇರ್ ಬಂದಿದ್ದಾನೆ. ನನಗೆ ಅವನ ಬಗ್ಗೆ ಸಮಾಧಾನವಿಲ್ಲ. ಹಝುರತ್ ಉಮರ್ ಅವರನ್ನು ಕರೆತರಲು ಹೋದರು. ಆದರೆ ಹೋಗುವಾಗ ಕೆಲ ಸಹಾಬರಿಗೆ ಹೇಳಿ ಹೋದರು. ನಾನು ಉಮೇರನಿಗೆ ಹಝ್‌ರತ್ ರಸೂಲುಲ್ಲಾಹ್(ಸ) ರವರನ್ನು ಭೇಟಿಯಾಗಲು ಕರೆ ತರಲು ಹೋಗುತ್ತಿದ್ದೇನೆ. ನನಗೆ ಅವನ ಮೇಲೆ ಸಂಶಯವಿದೆ. ನೀವು ಹಝ್‌ರತ್ ರಸೂಲುಲ್ಲಾಹ್(ಸ) ರವರ ಬಳಿ ಹೋಗಿ ಕುಳಿತುಕೊಳ್ಳಿರಿ ಮತ್ತು ಜಾಗೃತರಾಗಿರಿ. ಅನಂತರ ಹಝ್‌ರತ್ ಉಮರ್, ಉಮೇರರನ್ನು ಕರೆದುಕೊಂಡು ರಸೂಲುಲಾಹ್(ಸ) ರವರ ಸಮ್ಮುಖದಲ್ಲಿ ಹಾಜರಾದರು. ಪ್ರವಾದಿ(ಸ) ಅವರನ್ನು ಸಮಾಧಾನದಿಂದ ತನ್ನ ಬಳಿ ಕುಳ್ಳಿರಿಸಿ ಕೇಳಿದರು. ಉಮೇರ್ ಹೇಗೆ ಏಕೆ ಬಂದೀರಿ? ಉಮೇರ್ ಹೇಳಿದರು. ನನ್ನ ಮಗ ನಿಮ್ಮ ಖೈದಿಯಾಗಿದ್ದಾನೆ. ಅವನನ್ನು ಬಿಡುಗಡೆಗೊಳಿಸಲು ಬಂದಿರುತ್ತೇನೆ ಅವರು ಹೇಳಿದರು. ಹಾಗಾದರೆ ಈ ಖಡ್ಗದ ಬಗ್ಗೆ ಏಕೆ ಹೇಳುತ್ತಿದ್ದೀರಿ. ಬದರ್‌ನಲ್ಲಿ ಖಡ್ಗಗಳು ಯಾವ ಕೆಲಸಕ್ಕೆ ಬಂದವು. ಅವರು ಹೇಳಿದರು. ಅಲ್ಲ ಸರಿಯಾಗಿ ಹೇಳಿರಿ. ಯಾತಕ್ಕಾಗಿ ಬಂದಿರಿ? ಇದೀಗ ಏನು ಹೇಳಿದ್ದೇನೆ. ಅದೇ ವಿಷಯವಾಗಿದೆ. ನಾನು ಮಗನನ್ನು ಬಿಡಿಸಿಕೊಂಡು ಹೋಗಲು ಬಂದಿರುತ್ತೇನೆ. ಅವರು ಹೇಳಿದರು. ಹಾಗಾದರೆ ನೀವು ಸಫ್ವಾನ್ನೊಂದಿಗೆ ಸೇರಿ ಕಅಬ ಅಂಗಳದಲ್ಲಿ ಯಾವುದೇ ಸಂಚು ಹೂಡಲಿಲ್ಲ. ಉಮೇರನಿಗೆ ದಿಗ್ಭ್ರಮೆ ಉಂಟಾಯಿತು. ಆದರೆ ಸುಧಾರಿಸಿಕೊಂಡು ಹೇಳಿದನು. ಇಲ್ಲ ನಾವು ಯಾವ ಸಂಚು ಹೂಡಲಿಲ್ಲ. ಅವರು ಹೇಳಿದರು. ನೀವು ನನ್ನ ಕೊಲೆಯ ಸಂಚು ಹೂಡಲಿಲ್ಲ? ನೆನಪಿಡಿರಿ. ಅಲ್ಲಾಹನು ನಿಮಗೆ ನನ್ನ ಬಳಿ ಬರಲು ಎಂದು ಸಹಕರಿಸುವನು". ಉಮೇರನಿಗೆ ದೊಡ್ಡ ಚಿಂತೆ ಎದುರಾಯಿತು. ಹೇಳಿದನು. ನೀವು ಸತ್ಯ ಹೇಳುತ್ತಿದ್ದೀರಿ. ನಿಜವಾಗಿಯೂ ನಾವು ಈ ಸಂಚು ಹೂಡಿದ್ದೆವು. ಆದರೆ ಇದರಿಂದ ತಿಳಿದು ಬರುವುದೇನೆಂದರೆ ಅಲ್ಲಾಹನು ನಿಮ್ಮ ಜೊತೆಗಿದ್ದಾನೆ. ಅವನೇ ನಿಮಗೆ ನಮ್ಮ ಇರಾದೆಯ ಬಗ್ಗೆ ಸುದ್ಧಿ ನೀಡಿರುವನು. ಇಲ್ಲದಿದ್ದರೆ ಆ ಸಮಯ ನಾನು ಮತ್ತು ಸಫ್ವಾನ್ ಹೊರತು ಯಾರೂ ಇರಲಿಲ್ಲ. ಯಾವೊಬ್ಬ ಮೂರನೇ ವ್ಯಕ್ತಿ ಇರಲಿಲ್ಲ. ಬಹುಶಃ ಈ ಯೋಜನೆ ಅಲ್ಲಾಹನು ನನಗೆ ವಿಶ್ವಾಸ ತರಲು ಮೂಡಿಸಿರಬಹುದು ಎನಿಸುತ್ತದೆ. ಆದುದರಿಂದ ಸತ್ಯ ಹೃದಯದಿಂದ ನಾನು ನಿಮ್ಮ ಮೇಲೆ ವಿಶ್ವಾಸ ತರುತ್ತೇನೆ. ಅವರು ಉಮೇರರ ವಿಶ್ವಾಸದಿಂದ ತುಂಬಾ ಸಂತೋಷಪಟ್ಟರು. ಮತ್ತು ಸಹಾಬರೊಂದಿಗೆ ಹೇಳಿದರು. ಈಗ ಇವರು ನಿಮ್ಮ ಸಹೋದರನಾಗಿದ್ದಾರೆ. ಇಸ್ಲಾಮಿನ ಶಿಕ್ಷಣವನ್ನು ಮನವರಿಕೆ ಮಾಡಿಕೊಡಿ ಮತ್ತು ಅವರ ಖೈದಿಯನ್ನು ಬಿಟ್ಟುಬಿಡಿರಿ. ಅಂತೂ ಉಮೇರ್ ಬಿನ್ ವಹಬ್ ಮುಸಲ್ಮಾನರಾದರು. ಅಲ್ಲದೇ ವಿಶ್ವಾಸ ನಂಬಿಕೆ ನಿಷ್ಠೆಯಲ್ಲಿ ಬಹುಬೇಗ ಉನ್ನತಿ ಸಾಧಿಸಿದರು. ಅಂತಿಮವಾಗಿ ಸತ್ಯಪ್ರಕಾಶದಲ್ಲಿ ಎಷ್ಟೊಂದು ಮಿಂದು ಹೋದರೆಂದರೆ ಹಝುರತ್ ರಸೂಲುಲ್ಲಾಹ್(ಸ) ರವರನ್ನು ಆಗ್ರಹಪಡಿಸುತ್ತಿದ್ದರು. ನನ್ನನ್ನು ಮಕ್ಕಕ್ಕೆ ಹೋಗಲು ಅನುಮತಿ ನೀಡಿ ಎಂದು. ನಂತರ ಉಮೇರರು ಮಕ್ಕಕ್ಕೆ ಹೋಗಿ ತನ್ನ ಪ್ರಚಾರದ ಉತ್ಸಾಹದಿಂದ ಹಲವು ಜನರನ್ನು ಗುಪ್ತವಾಗಿಯೇ ಮುಸ್ಲಿಮರನ್ನಾಗಿ ಮಾಡಿದರು ಸಫ್ವಾನ್ ಹಗಲು ರಾತ್ರಿ ಹಝ್‌ರತ್ ರಸೂಲುಲ್ಲಾಹ್(ಸ) ರವರ ಹತ್ಯೆಯ ಸುದ್ಧಿ ತಿಳಿಯಲು ಕಾತರನಾಗಿದ್ದನು. ಖುರೇಶರಿಗೆ ಹೇಳುತ್ತಿದ್ದನು. ನೀವು ಬಹು ಬೇಗ ಒಂದು ಸುವಾರ್ತೆ ಕೇಳುವಿರಿ ಎಂದು. ಆದರೆ ಈ ದೃಶ್ಯ

ನೋಡಿ ಅವನು ದಿಗ್ಭ್ರಮೆಗೊಂಡನು. (ಅದೇ ಪುಟ 374).

ಅಹಝ್ಝಾಬ್ ಯುದ್ಧ ಶವ್ವಾಲ್ 5 ಹಿಜರಿಯಲ್ಲಿ ನಡೆಯಿತು. ಅವಿಶ್ವಾಸಿ ಸೈನ್ಯಗಳ ಸಂಖ್ಯೆ ಇಪ್ಪತ್ತು ಸಾವಿರ ಸಮೀಪವಿತ್ತು. ಅಂದರೆ ಇಡೀ ಅರಬ್ ದೇಶ ಮದೀನ ಮೇಲೆ ಆಕ್ರಮಣ ಮಾಡಿದಂತಿತ್ತು. ಅದು ಎಷ್ಟೊಂದು ಭೀಕರವಾದ ಯುದ್ಧವಿತ್ತೆಂದರೆ ಪವಿತ್ರ ಖುರ್‌ಆನ್ ಆ ಯುದ್ಧದ ಭೀಕರತೆಯ ನಕ್ಷೆ ಹೀಗೆ ಪ್ರಸ್ತುತಪಡಿಸಿದೆ. **ಇಝ್ ಜಾಅಕುಮ್ ಮಿನ್ ಫೂಖಿಕುಮ್ ವಮಿನ್ ಅಸ್‌ಫಲ ಮಿನ್‌ಕುಮ್ ವ ಇಝ್ ಝುಘತಿಲ್ ಅಬ್ಸಾರು ವ ಬಲಘತಿಲ್ ಖುಲೂಬುಲ್ ಹನಾಜಿರ ವತಝುನ್ನೂನ ಬಿಲ್ಲಾಹಿಝ್ಝುನೂನ. ಕುನಾಲಿಕಬ್‌ತುಲಿಯಲ್ ಮುಮಿನೂನ ವಝುಲ್‌ಝಿಲೂ ಝಿಲ್‌ಝಾಲನ್ ಶದೀದ** (ಅಹಝ್ಝಾಬ್ 11, 12) ಅನುವಾದ: ಅವರು ನಿಮ್ಮನ್ನು ಮೇಲ್ಭಾಗದಿಂದಲೂ ಕೆಳಭಾಗದಿಂದಲೂ ಸುತ್ತುವರೆದು ಬಂದ ಸಂದರ್ಭದಲ್ಲಿ! ಆಗ ನಿಮ್ಮ ಕಣ್ಣುಗಳು ಭಯವಿಹ್ವಲಗೊಂಡಿದ್ದವು. ನಿಮ್ಮ ಹೃದಯಗಳು ಕಂಠನಾಳಗಳಿಗೆ ತಲುಪಿದವು. ಅಲ್ಲಾಹನ ಬಗ್ಗೆ ಹಲವು ಭಾವನೆಗಳು ತಮ್ಮ ಮನಸ್ಸಿನಲ್ಲಿ ಮೂಡಿದ್ದವು. ಅಲ್ಲಿ (ಆ ಸಂದರ್ಭದಲ್ಲಿ) ಸತ್ಯವಿಶ್ವಾಸಿಗಳು ಪರೀಕ್ಷೆಗೊಳಗಾದರು ಮತ್ತು ಬಲವಾದ ಕಂಪನದಿಂದ ಅವರು ಕಂಪಿಸಲ್ಪಟ್ಟರು.

ಇಂತಹದೊಂದು ಆಪತ್ತಿನ ಘಳಿಗೆಯಲ್ಲಿ ಮತ್ತು ಕಷ್ಟದಾಯಕ ಪರಿಸ್ಥಿತಿಗಳಲ್ಲಿ ಬನುಖರೀಜ್ಹ ದ್ರೋಹ ಬಗೆದರು. ಮತ್ತು ಮುಸಲ್ಮಾನರೊಂದಿಗೆ ಮಾಡಿಕೊಂಡ ಒಡಂಬಡಿಕೆಯನ್ನು ಮುರಿದು ಹಾಕಿದರು ಹಾಗೂ ಅವಿಶ್ವಾಸಿಗಳೊಂದಿಗೆ ಸೇರಿಕೊಂಡರು. ಅವರ ಈ ವಿದ್ರೋಹದ ಕಾರಣ ಹಝ್‌ರತ್ ರಸೂಲುಲ್ಲಾಹ್(ಸ) ಅಲ್ಲಾಹನ ಆಜ್ಞೆಯ ಪ್ರಕಾರ ಕೋಟೆಯನ್ನು ಮುತ್ತಿಗೆ ಹಾಕಿದರು. ಬನು ಖರೀಜ್ಹ ಖಡ್ಗ ಕೆಳಗಿಟ್ಟರು. ಹಝ್‌ರತ್ ರಸೂಲುಲ್ಲಾಹ್(ಸ) ರವರ ತೀರ್ಪು ಮನ್ನಿಸುತ್ತಿದ್ದರೆ ಖಂಡಿತವಾಗಿಯೂ ಕ್ಷಮಿಸಲ್ಪಡುತ್ತಿದ್ದರು. ಆದರೆ ಅವರು ಸಅದ್ ಬಿನ್ ಮಆಝ್ ಅವರ ತೀರ್ಪು ಮನ್ನಿಸಲು ಆಗ್ರಹಪಡಿಸಿದರು. ಸಅದ್ ಬಿನ್ ಮಆಝ್ ಅವರು ತೌರಾತಿನ ಪ್ರಕಾರ ಅವರ ಯುದ್ಧ ಪುರುಷರನ್ನು ಹತ್ಯೆ ಮಾಡುವ ತೀರ್ಪು ಕೈಗೊಂಡರು. ಆ ಸಂದರ್ಭದಲ್ಲಿ ಹಝ್‌ರತ್ ರಸೂಲುಲ್ಲಾಹ್(ಸ) ರವರ ಕ್ಷಮಾಶೀಲತೆಯ ಘಟನೆ ವಿವರಿಸುತ್ತಾ ಹಝ್‌ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೇಳುತ್ತಾರೆ.

ಜುಬೇರ್ ಬಿನ್ ಖಾತಿಯಾ ಹೆಸರಿನ ವ್ಯಕ್ತಿಯೊಬ್ಬನು ಬನು ಖರೀಜ್ಹಗೆ ಸಂಬಂಧಿಸಿದವನಾಗಿದ್ದ. ಅವನು ಒಬ್ಬ ಮುಸ್ಲಿಮ್ ಸಾಬಿತ್ ಬಿನ್ ಖೈಸ್‌ನ ಮೇಲೆ ಒಂದು ಕಾಲದಲ್ಲಿ ಉಪಕಾರಗೈದಿದ್ದ. ಸಾಬೀತನು ಅವನ ಕುರಿತು ಹಝ್‌ರತ್ ರಸೂಲುಲ್ಲಾಹ್(ಸ) ರೊಡನೆ ಅವನನ್ನು ಬಿಡುಗಡೆ ಮಾಡಲು ಶಿಫಾರಸ್ಸು ಮಾಡಿದರು. ಹಝ್‌ರತ್ ರಸೂಲುಲ್ಲಾಹ್(ಸ) ಹೇಳಿದರು. ಸರಿ ಅವರನ್ನು ಬಿಟ್ಟುಬಿಡಿರಿ. ಸಾಬೀತನು ಹೋಗಿ ಜುಬೇರನಿಗೆ ಸುವಾರ್ತೆ ಹೇಳಿದರು. ಹಝ್‌ರತ್ ರಸೂಲುಲ್ಲಾಹ್(ಸ) ನನ್ನ ಶಿಫಾರಸ್ಸಿನ ಮೇರೆಗೆ ನಿನ್ನನ್ನು ಬಿಟ್ಟಿರುವರು. ಜುಬೇರನು ಹೇಳಿದನು. ನನ್ನ ಪತ್ನಿ ಮಕ್ಕಳಂತೂ ಖೈದಿಯಾಗಿದ್ದಾರೆ ನಾನು ಪ್ರಾಣವುಳಿಸಿಕೊಂಡು ಏನು ಮಾಡಲಿ ಸಾಬೀತು ಮತ್ತೆ ಹಝ್‌ರತ್ ರಸೂಲುಲ್ಲಾಹ್(ಸ) ರವರ ಬಳಿಗೆ ಹೋದರು. ಮತ್ತೆ ಹೇಳಿದರು. ಝುಬೇರ ಹೀಗೆ ಹೇಳುತ್ತಿದ್ದಾನೆ. ಅವರು ಹೇಳಿದರು ಅವನ ಪತ್ನಿ ಮಕ್ಕಳನ್ನು ಸಹ ಬಿಡುಗಡೆ ಮಾಡಿರಿ. ಸಾಬೀತು ಹೋಗಿ ಮತ್ತೆ ಸುವಾರ್ತೆ ತಿಳಿಸಿದರು. ಆಗ ಅವನು ಹೇಳಿದನು. ನನ್ನ ಎಲ್ಲ ಸಂಪತ್ತು ಮುಸಲ್ಮಾನರ ವಶವಾಗಿದೆ. ನಾನು ಕೇವಲ ಪತ್ನಿ, ಮಕ್ಕಳನ್ನು ಪಡೆದು ಏನು ಮಾಡಲಿ. ಸಾಬೀತು ಮತ್ತೆ ಹಝ್‌ರತ್ ರಸೂಲುಲ್ಲಾಹ್(ಸ) ರವರ ಬಳಿಗೆ ಹೋದರು ಮತ್ತು ಹೇಳಿದರು. ಆಗ ಅವರು ಝುಬೇರನ ಸಂಪತ್ತು ಸಹ ಹಿಂದಿರುಗಿಸಲು ಆಜ್ಞೆ ಮಾಡಿ ಹೇಳಿದರು. ನಿಮ್ಮ ಸಂಪತ್ತು ಸಹ ನಿಮಗೆ ದೊರೆಯುವುದು. ಅವನು ಹೇಳಿದನು. ನನಗೆ ನಮ್ಮ ಸರದಾರರಾದ ಕಅಬ್ ಬಿನ್ ಅಸದ್ ಮತ್ತು ಯಹೂದಾನ್ ಅರಬರ ರಯೀಸರಾದ ಹಯ್ಯಿ ಬಿನ್ ಅಖ್ತಬ್ ಹೇಗಿದ್ದಾರೆ ತಿಳಿಸಿ. ಅವರು ಹೇಳಿದರು. ಇವರೆಲ್ಲರೂ ಹತರಾಗಿದ್ದಾರೆ. ಅವರೆಲ್ಲ ಹತ್ಯೆಗೊಳಗಾಗಿ ನಾನು, ಜೀವಂತನಾಗಿದ್ದು ಏನು ಮಾಡಲಿ. ಅಂದ ಹಾಗೆ ಹತ್ಯೆ ಸ್ಥಳಕ್ಕೆ ಹೋದನು. ಮತ್ತು ತನ್ನ ಕೊರಳನ್ನು ಖಡ್ಗಕ್ಕೆ ಒಡ್ಡಿದನು.

ರಿಫಾಲ್ ಹೆಸರಿನ ಇನ್ನೋರ್ವ ಯಹೂದಿ ಒಬ್ಬನಿದ್ದನು. ಅವನು ಓರ್ವ ದಯವಂತ ಮಹಿಳೆಗೆ ವಿನಯವಾಗಿ ಕೇಳಿಕೊಂಡು ತನ್ನ ಶಿಫಾರಸ್ಸಿಗಾಗಿ ಹೇಳಿದನು. ಹಝ್‌ರತ್ ರಸೂಲುಲ್ಲಾಹ್(ಸ) ಆ ಮುಸ್ಲಿಮ್ ಮಹಿಳೆಯ ಶಿಫಾರಸ್ಸಿನ ಮೇರೆಗೆ ಅವನನ್ನು ಕ್ಷಮಿಸಿದರು. ಅಂದ ಹಾಗೆ ಆ ಸಮಯ ಯಾವ ವ್ಯಕ್ತಿಯ ಶಿಫಾರಸ್ಸು ಕೇಳಿಕೊಂಡರೂ ಅವರೆಲ್ಲರನ್ನು ಕ್ಷಮಿಸಿದರು. ಅದು ಈ ಮಾತಿಗೆ ಪುಷ್ಟಿ ನೀಡುತ್ತದೆ. ಅವರು ಸಅದ್‌ನ ನಿರ್ಣಯದ ಕಾರಣ ವಿವಶರಾಗಿದ್ದರು. ಇಲ್ಲದಿದ್ದರೆ ಅವರ ಇಂಗಿತ ಹತ್ಯೆ ಮಾಡುವುದಾಗಿರಲಿಲ್ಲ. (ಅದೇ ಪುಟ 602).

ಸಮಾಮ ಬಿನ್ ಅಸಾಲ್‌ರೊಂದಿಗೆ ವರ್ತಿಸಿದ ಕ್ಷಮಾಶೀಲತೆಯ ಘಟನೆ ವಿವರಿಸುತ್ತಾ ಹಝ್‌ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ ಎ(ರ) ಹೇಳುತ್ತಾರೆ.

ಇನ್ನು 6 ಹಿಜರಿ ಪ್ರಾರಂಭವೇ ಆಗಿತ್ತು ಮತ್ತು ಚಂದ್ರಮಾನ ವರ್ಷದ ಮೊದಲನೇ ತಿಂಗಳು ಅಂದರೆ ಮುಹರ್ರಮಿನ ಪ್ರಾರಂಭಿಕ ತಾರೀಖುಗಳಾಗಿದ್ದವು. ಹಝ್‌ರತ್ ರಸೂಲುಲ್ಲಾಹ್(ಸ) ರವರಿಗೆ ನಜದ್ ಕಡೆಯಿಂದ ಅಪಾಯದ ಸೂಚನೆಗಳು ಬಂದವು. ಈ ಅಪಾಯವು ಖುರ್‌ತಾ ಗೋತ್ರದವರಿಂದಾಗಿತ್ತು. ಅದು ಬನುಬಕರ್ ಗೋತ್ರದ ಒಂದು ಶಾಖೆಯಂತಿತ್ತು. ಮತ್ತು ನಜದ್ ಕ್ಷೇತ್ರದಲ್ಲಿ ಝಿರಿಯ್ಯಾಬಾದ್ ಸ್ಥಳವಾಗಿತ್ತು. ಅದು ಮದೀನದಿಂದ ಏಳು ದಿನಗಳ ಪ್ರಯಾಣದಷ್ಟು ದೂರದಲ್ಲಿತ್ತು. ಈ ಸುದ್ದಿ ತಿಳಿದು ಹಝ್‌ರತ್ ರಸೂಲುಲ್ಲಾಹ್(ಸ) ತಕ್ಷಣ 30 ಸವಾರರ ಒಂದು ತುಕ್ಕಡಿ ತನ್ನ ಶಿಷ್ಯ ಮುಹಮ್ಮದ್ ಬಿನ್ ಮುಸ್ಲಿಮ ಅನ್ಸಾರಿ ನೇತೃತ್ವದಲ್ಲಿ ನಜದತ್ತ ಕಳುಹಿಸಿದರು. ಆದರೆ ಅಲ್ಲಾಹನು ಅವಿಶ್ವಾಸಿಗಳ ಹೃದಯಗಳಲ್ಲಿ ಎಂತಹದೊಂದು ಭಯ ಹುಟ್ಟಿಸಿದನೆಂದರೆ ಅವರು ಅಲ್ಪ ಸಮಯದ ಹೋರಾಟದಲ್ಲಿಯೇ ಕಾಲುಕಿತ್ತರು. ಪುರಾತನ ಯುದ್ಧ ನಿಯಮಾನುಸಾರ ಮುಸಲ್ಮಾನರಿಗೆ ಶತ್ರು ಸೈನ್ಯಗಳ ಸ್ತ್ರೀಯರನ್ನು ಮತ್ತು ಮಕ್ಕಳನ್ನು ಸೆರೆಹಿಡಿಯಬಹುದಿತ್ತು. ಏಕೆಂದರೆ ಶತ್ರುಸೈನ್ಯವು ಅವರನ್ನು ಬಿಟ್ಟು ಓಡಿ ಹೋಗಿದ್ದವು. ಆದರೆ ಮುಹಮ್ಮದ್ ಬಿನ್ ಮುಸ್ಲಿಮ ಸ್ತ್ರೀಯರ ಮತ್ತು ಮಕ್ಕಳ ಬಗ್ಗೆ ಗಮನ ಕೊಡಲಿಲ್ಲ, ಮತ್ತು ಸಾಮಾನ್ಯ ರೀತಿಯ ಯುದ್ಧ ಸಾಮಗ್ರಿಗಳನ್ನು ಅದು ಒಂಟೆಗಳನ್ನು ಮತ್ತು ಕುರಿಗಳನ್ನು ಒಳಗೊಂಡಿತ್ತು ಪಡೆದುಕೊಂಡು ಮದೀನಕ್ಕೆ ಹಿಂದಿರುಗಿದರು.

ಈ ಯುದ್ಧದಿಂದ ಮರಳುವ ಸಮಯದಲ್ಲಿ ಸಮಾಮ ಬಿನ್ ಉಸಾಲ್ ಖೈದಿ ಆಗುವ ಘಟನೆ ಎದುರಾಯಿತು. ಈ ವ್ಯಕ್ತಿ ಯಮಾಮ ನಿವಾಸಿಯಾಗಿದ್ದನು. ಬನು ಹನೀಫ ಗೋತ್ರದ ಪ್ರಸಿದ್ಧ ವ್ಯಕ್ತಿಗಳಲ್ಲೊಬ್ಬನಾಗಿದ್ದ ಯಾವಾಗಲೂ ಇಸ್ಲಾಮ್ ದ್ವೇಷಿಯಾಗಿದ್ದ ಮತ್ತು ಸಮಯ ಸಿಕ್ಕಾಗಲೆಲ್ಲಾ ಮುಗ್ಧ ಮುಸಲ್ಮಾನರನ್ನು ಹತ್ಯೆ ಮಾಡುತ್ತಿದ್ದನು. ಅಂದ ಹಾಗೆ ಒಂದು ಸಂದರ್ಭದಲ್ಲಿ ಹಝ್‌ರತ್ ರಸೂಲುಲ್ಲಾಹ್(ಸ) ರಾಯಭಾರಿಯೊಬ್ಬರನ್ನು ಅವನ ಕ್ಷೇತ್ರಕ್ಕೆ ಕಳುಹಿಸಿದರು. ಆಗ ಅವನು ಯುದ್ಧ ನಿಯಮಗಳನ್ನೆಲ್ಲಾ ಗಾಳಿಗೆ ತೂರಿ ಅವರ ಹತ್ಯೆಗೆ ಸಂಚು ಹೂಡಿದನು. ಅಷ್ಟೇ ಅಲ್ಲ ಒಂದು ಸಂದರ್ಭದಲ್ಲಿ ಸ್ವಯಂ ರಸೂಲುಲ್ಲಾಹ್(ಸ) ರವರ ಹತ್ಯೆಗೂ ತಯಾರಾಗಿದ್ದನು. ಮುಹಮ್ಮದ್ ಬಿನ್ ಮುಸ್ಲಿಮ ತಂಡದವರು ಸಮಾಮನನ್ನು ಸೆರೆಹಿಡಿದು ತರುತ್ತಿದ್ದರು. ಆಗ ಅವರಿಗೆ ಈ ವ್ಯಕ್ತಿಯ ಬಗ್ಗೆ ಅಷ್ಟೊಂದು ತಿಳಿದಿರಲಿಲ್ಲ. ಕೇವಲ ಒಂದು ಅನುಮಾನ ದೃಷ್ಟಿಯಿಂದ ಸೆರೆಹಿಡಿದಿದ್ದರು. ಸಮಾಮನು ತಮ್ಮ ವಿವೇಕದಿಂದ ತನ್ನ ನಿಜಸ್ಥಿತಿ ಅವರ ಮೇಲೆ ಜಾಹೀರುಪಡಿಸಲಿಲ್ಲ. ಏಕೆಂದರೆ ಅವನಿಗೆ ತಿಳಿದಿತ್ತು. ತಾನು ಇಸ್ಲಾಮಿನ ವಿರುದ್ಧ ಎಷ್ಟೆಲ್ಲ ಅಪಾಯಕರ ಅಪರಾಧಗಳನ್ನು ಎಸಗಿದ್ದೇನೆ ಎಂದು. ಒಂದು ವೇಳೆ ಇಸ್ಲಾಮಿನ ಈ ಸ್ವಾಭಿಮಾನಿ ತಂಡದವರಿಗೆ ತನ್ನ ಬಗ್ಗೆ ಗೊತ್ತಾದರೆ ನನ್ನ ಮೇಲೆ ಕಠಿಣ ಕ್ರಮ ಕೈಗೊಳ್ಳುವರು ಅಥವಾ ಕೊಲೆಯೂ ಮಾಡಬಹುದು, ಸ್ವಯಂ ಹಝ್‌ರತ್ ರಸೂಲುಲ್ಲಾಹ್(ಸ) ರವರಿಂದ ಅವನಿಗೆ ಉತ್ತಮ ವರ್ತನೆಯ ಆಶಯ ಹೊಂದಿದ್ದನು. ಅಂದ ಹಾಗೆ ಮದೀನ ಬರುವವರೆಗೆ ಮುಹಮ್ಮದ್ ಬಿನ್ ಮುಸ್ಲಿಮ ತಂಡದವರಿಗೆ ಸಮಾಮನ ಬಗ್ಗೆಯ ನಿಜಸ್ಥಿತಿ ಗೌಪ್ಯವಾಗಿತ್ತು.

ಮದೀನ ತಲುಪಿ ಸಮಾಮನಿಗೆ ಹಝ್‌ರತ್ ರಸೂಲುಲ್ಲಾಹ್(ಸ) ರವರ ಸಮಕ್ಷಮಕ್ಕೆ ಒಪ್ಪಿಸಿದರು. ಆಗ ಅವರು ಅವನನ್ನು ನೋಡುತ್ತಲೇ ಗುರುತಿಸಿದರು. ಮತ್ತು ಮುಹಮ್ಮದ್ ಬಿನ್ ಮುಸ್ಲಿಮ ಮತ್ತು ಅವರ ತಂಡದವರನ್ನು ಸಂಬೋಧಿಸಿ ಹೇಳಿದರು. ಈ ವ್ಯಕ್ತಿ ಯಾರು ಎಂದು ನೀವು ಬಲ್ಲರೇ? ಅವರು ಗೊತ್ತಿಲ್ಲ ಎಂದರು ಆಗ ಅವರು ಅವನ ವಾಸ್ತವ ಬಿಚ್ಚಿಟ್ಟರು. ಅನಂತರ ಅವರು ಯಥಾಪ್ರಕಾರದಂತೆಯೇ ಉತ್ತಮವಾಗಿ ವರ್ತಿಸಲು ಆಜ್ಞಾಪಿಸಿದರು. ಮತ್ತು ಗೃಹದೊಳಗೆ ಹೋಗುವಾಗ ಹೇಳಿದರು. ಊಟಕ್ಕಾಗಿ ಏನಿದೆಯೋ ಅದು ಸಮಾಮನಿಗಾಗಿ ಹೋಗಿ ಕೊಟ್ಟು ಬನ್ನಿರಿ. ಅವರ ಜೊತೆಗೆ ಸಹಾಬರಿಗೆ ನಿರ್ದೇಶಿಸಿದರು. ಸಮಾಮನಿಗೆ ಯಾವುದೇ ಪ್ರತ್ಯೇಕ ಮನೆಯಲ್ಲಿ ಇಡುವ ಬದಲು ನಬಿವರ್ಯರ ಮಸೀದಿಯ ಅಂಗಳದಲ್ಲಿಯೇ ಒಂದು ಕಂಬಕ್ಕೆ ಕಟ್ಟಿ ಹಾಕಿರಿ, ಅದರ ಆಶಯವೇನಿತ್ತೆಂದರೆ – ನಬಿ(ಸ) ರವರ ಸಭೆ ಮತ್ತು ಮುಸಲ್ಮಾನರ ನಮಾಝ್ ಅನುಷ್ಠಿಸುವ ದೃಶ್ಯ ಅವರು ಕಾಣುವಂತಾಗಲಿ, ಅದರ ಪ್ರಭಾವದಿಂದಾದರೂ ಅವನ ಹೃದಯ ಇಸ್ಲಾಮಿನತ್ತ ವಾಲುವಂತಾಗಲಿ ಎಂದು.

ಈ ಅವಧಿಯಲ್ಲಿ ಹಝ್‌ರತ್ ರಸೂಲುಲ್ಲಾಹ್(ಸ) ಪ್ರತಿದಿನ ಮುಂಜಾನೆ ಸಮಾಮನ ಸಮೀಪ ಹೋಗುತ್ತಿದ್ದರು ಮತ್ತು ಕುಶಲೋಪರಿ ವಿಚಾರಿಸುತ್ತಿದ್ದರು. "ಸಮಾಮ ಈಗ ಹೇಳು ನೀನು ಏನು ಬಯಸುವೆ? ಸಮಾಮ ಉತ್ತರ ನೀಡುತ್ತಿದ್ದನು. ಓ ಮುಹಮ್ಮದ್(ಸ) ನೀನು ನನಗೆ ಹತ್ಯೆಯ ಆಜ್ಞೆ ನೀಡಿದರೆ ನೀಡಬಹುದು. ಅದು ನಿಮಗೆ ಹಕ್ಕಿದೆ. ಏಕೆಂದರೆ ನನ್ನ ವಿರುದ್ಧ ಹತ್ಯೆಯ ಆರೋಪವಿದೆ. ಆದರೆ ನೀವು ನನ್ನ ಮೇಲೆ ಉಪಕಾರ ಮಾಡಿದರೆ ನನಗೆ ಕೃತಜ್ಞನಾಗಿ ಕಾಣುವಿರಿ. ನೀವು ಫಿದಿಯಾ (ದಂಡ) ಪಡೆಯಬಯಸುವುದಾದರೆ ಅದಕ್ಕೂ ನಾನು ಸಿದ್ಧನಾಗಿದ್ದೇನೆ." ಮೂರು ದಿವಸಗಳವರೆಗೆ ಅದೇ ಪ್ರಶ್ನೆ ಕೇಳುತ್ತಾ ಬಂದರು ಮತ್ತು ಅದೇ ಉತ್ತರ ಪಡೆಯುತ್ತಿದ್ದರು. ಅಂತಿಮವಾಗಿ ಮೂರನೆಯ ದಿನ ಹಝ್‌ರತ್ ರಸೂಲುಲ್ಲಾಹ್(ಸ) ಸ್ವತ: ಸಹಾಬರಿಗೆ ನಿರ್ದೇಶಿಸಿದರು. ಸಮಾಮನನ್ನು ಬಿಚ್ಚಿ ಸ್ವತಂತ್ರಗೊಳಿಸಿರಿ. ಸಹಾಬರು ತಕ್ಷಣದಿಂದ ಅವನನ್ನು ಬಿಡುಗಡೆಗೊಳಿಸಿದರು ಸಮಾಮನು ಬಹುಬೇಗ ಮಸೀದಿಯಿಂದ ಹೊರಟುಹೋದನು. ಸಹಾಬರು ಭಾವಿಸುತ್ತಿದ್ದರು. ಬಹುಶಃ ಅವನು ತನ್ನ ಜನ್ಮಸ್ಥಳಕ್ಕೆ ಮರಳುತ್ತಿದ್ದಾನೆ ಎಂದು. ಆದರೆ ರಸೂಲುಲ್ಲಾಹ್(ಸ) ರವರಿಗೆ ದೃಢವಾಗಿತ್ತು. ಸಮಾಮನ ಹೃದಯ ಪರಿವರ್ತನೆಯಾಗಿದೆ ಎಂದು. ಅಂದ ಹಾಗೆ ಅವನು ಪಕ್ಕದ ಒಂದು ತೋಟಕ್ಕೆ ಹೋದನು ಮತ್ತು ಅಲ್ಲಿ ಜಳಕ ಮಾಡಿ

ಹಿಂದಿರುಗಿ ಬಂದನು. ಬರುತ್ತಲೇ ಹಝ್ರತ್ ರಸೂಲುಲ್ಲಾಹ್(ಸ) ರವರ ಕೈಯು ಮೇಲೆ ಮುಸಲ್ಮಾನನಾದನು. ಅನಂತರ ಅವನು ಹಝ್ರತ್ ರಸೂಲುಲ್ಲಾಹ್(ಸ) ರೊಡನೆ ಹೇಳಿದನು. "ಓ ಪ್ರವಾದಿವರ್ಯರೇ ಒಂದು ಸಮಯವಿತ್ತು ನನಗೆ ತಮ್ಮ ವ್ಯಕ್ತಿತ್ವದಿಂದ ಮತ್ತು ತಮ್ಮ ಧರ್ಮದಿಂದ ಮತ್ತು ತಮ್ಮ ನಗರದಿಂದ ಅತ್ಯಧಿಕ ಶತ್ರುತ್ವವಿತ್ತು. ಆದರೆ ಈಗ ನನಗೆ ತಮ್ಮ ವ್ಯಕ್ತಿತ್ವ, ತಮ್ಮ ಧರ್ಮ ಮತ್ತು ತಮ್ಮ ನಗರದೊಂದಿಗೆ ಅತ್ಯಧಿಕ ಪ್ರೀತಿ ಹೊಂದಿದವನಾಗಿದ್ದೇನೆ."

ಆ ದಿನ ಸಂಜೆ ಮಾಮೂಲಿಯಂತೆ ಸುಮಾಮನಿಗೆ ಊಟ ತರಲಾಯಿತು. ಅವನು ಸ್ವಲ್ಪವೇ ಊಟ ಮಡಿ ಬಿಟ್ಟುಬಿಟ್ಟನು. ಆಗ ಸಹಾಬರು ಚಕಿತಗೊಂಡರು. ಇಂದು ಮುಂಜಾನೆಯವರೆಗೆ ಸಮಾಮ ಹೆಚ್ಚೆಚ್ಚು ಊಟ ಮಾಡುತ್ತಿದ್ದನು. ಆಂದರೆ ಹೊಟ್ಟೆಬಾಕನಾಗಿದ್ದನು. ಆದರೆ ಈಗ ಅವನು ಬಹಳ ಸ್ವಲ್ಪವೇ ಊಟ ಮಾಡಿದ್ದಾನೆ. ಈ ಮಾತು ಹಝ್ರತ್ ರಸೂಲುಲ್ಲಾಹ್(ಸ) ರವರೆಗೆ ತಲುಪಿತು. ಅವರು ಹೇಳಿದರು ಮುಂಜಾನೆಯವರೆಗೆ ಸುಮಾಮ ಅವಿಶ್ವಾಸಿಗಳ ರೀತಿಯಲ್ಲಿ ಊಟ ಮಾಡುತ್ತಿದ್ದನು. ಇದೀಗ ಅವನು ಮುಸಲ್ಮಾನರ ರೀತಿಯಲ್ಲಿ ಊಟ ಮಾಡಿದ್ದಾನೆ. ಮತ್ತು ಅವರು ಹೀಗೆ ವ್ಯಾಖ್ಯಾನಿಸಿದರು. ಅವಿಶ್ವಾಸಿಯು ಏಳು ನಗರಗಳೊಂದಿಗೆ ಊಟ ಮಾಡುತ್ತಾನೆ. ಆದರೆ ಮುಸಲ್ಮಾನನು ಕೇವಲ ಒಂದು ನಗರದಿಂದ ಊಟ ಮಾಡುತ್ತಾನೆ". ಅದರಿಂದ ಅವರ ತಾತ್ಪರ್ಯವೇನಿತ್ತೆಂದರೆ ಅವಿಶ್ವಾಸಿಯೊಬ್ಬನು ಐಹಿಕ ಮೋಹದಲ್ಲಿ ತುಂಬಿರುತ್ತಾನೆ. ಆದರೆ ಒಬ್ಬ ಸತ್ಯವಿಶ್ವಾಸಿಯು ತನ್ನ ದೇಹೇಚ್ಛೆಗಳನ್ನು ಪ್ರತಿಬಂಧಿಸುತ್ತಾನೆ ಮತ್ತು ಜೀವನಕ್ಕೆ ಅವಶ್ಯವಾದಷ್ಟೇ ಬಳಸಿಕೊಳ್ಳುತ್ತಾನೆ. ಏಕೆಂದರೆ ಅವನು ನಿಜವಾದ ಸಂತೋಷ ಧರ್ಮದಿಂದ ಪಡೆಯುತ್ತಾನೆ. ಇದು ಸಹ ನೆನಪಿಡಬೇಕಾಗಿದೆ. ಇಲ್ಲಿ ಏಳು ಸಂಖ್ಯೆ ಎಂದರೆ ಗಣಿತ ಆಧಾರದ್ದಲ್ಲ. ಬದಲು ಅರಬಿ ನುಡಿಗಟ್ಟಿನ ಅನುಸಾರ ಏಳರ ಸಂಖ್ಯೆಯು ಯಥೇಚ್ಛ ಅಥವಾ ಪರಿಪೂರ್ಣತೆಗಾಗಿ ಉಪಯೋಗಿಸುತ್ತಾರೆ. ಅಂದರೆ ತಾತ್ಪರ್ಯವು ಅವಿಶ್ವಾಸಿಯೊಬ್ಬನು ಐಹಿಕ ಸಂತೋಷಗಳಲ್ಲಿ ಮುಳುಗಿರುತ್ತಾನೆ. ಲೌಕಿಕ ಸಂತೋಷಗಳೇ ಅವನಿಗೆ ಸರ್ವಸ್ವ ಆಗಿರುತ್ತದೆ. ಆದರೆ ಸತ್ಯವಿಶ್ವಾಸಿಯು ದೇಹೆಚ್ಛೆಗಳಿಂದ ತನ್ನನ್ನು ತಡೆಹಿಡಿದಿರುತ್ತಾನೆ. ಅಗತ್ಯಗಳಿಗಷ್ಟೇ ಸೀಮಿತವಾಗಿರುತ್ತಾನೆ. ಏಕೆಂದರೆ ಅವನ ನಿಜವಾದ ಸಂತೋಷಗಳು ಬೇರೆಯೇ ಆಗಿರುತ್ತವೆ. ಈ ಶಿಕ್ಷಣ ಪ್ರಾಕೃತವು ಮತ್ತು ನಬಿ(ಸ) ರವರ ಚರಿತ್ರೆಯ ಒಂದು ಸತ್ಯವಾದ ಕನ್ನಡಿಯಾಗಿದೆ.

ಮುಸಲ್ಮಾನನಾದ ನಂತರ ಸುಮಾಮ ಹಝುರತ್ ರಸೂಲುಲ್ಲಾಹ್(ಸ) ರೊಡನೆ ಹೇಳಿದರು. ಓ ನಬಿವರ್ಯರೇ! ನಿಮ್ಮ ಜನರು ನನ್ನನ್ನು ಸೆರೆಹಿಡಿಯುವಾಗ ನಾನು ಆ ಸಮಯ ಉಮ್ರಾಹ್‌ಗೋಸ್ಕರ ಮಕ್ಕಕ್ಕೆ ಹೋಗುತ್ತಿದ್ದೆ. ಇದೀಗ ನನಗಾಗಿ ನಿಮ್ಮ ಆಜ್ಞೆಯೇನು? ಅವರು ಅದಕ್ಕಾಗಿ ಅವರಿಗೆ ಅನುಮತಿ ನೀಡಿದರು. ಮತ್ತು ದುಆ ಮಾಡಿದರು. ಆಗ ಸುಮಾಮ ಮಕ್ಕಕ್ಕೆ ತೆರಳಿದರು. ಅಲ್ಲಿ ತಲುಪಿ ಸುಮಾಮ ಪೂರ್ಣ ಉತ್ಸಾಹದಿಂದ ಖುರೇಶರೊಡನೆ ನಿರಾತಂಕವಾಗಿ ಪ್ರಚಾರ ಪ್ರಾರಂಭಿಸಿದರು. ಖುರೇಶರು ಈ ದೃಶ್ಯ ಕಂಡು ಅವರ ನೇತ್ರಗಳಲ್ಲಿ ರಕ್ತ ತುಂಬಿ ಬಂದಂತಾಯಿತು. ಅವರು ಸುಮಾಮನನ್ನು ಬಂಧಿಸಿ ಹತ್ಯೆ ಮಾಡಬಯಸಿದರು. ಮತ್ತೆ ಅವನು ಯಮಾಮ ಕ್ಷೇತ್ರದ ಶ್ರೀಮಂತರದಲ್ಲಿ ಒಬ್ಬನಾಗಿದ್ದಾನೆ. ಯಮಾಮರೊಂದಿಗೆ ಮಕ್ಕ ದೇಶದವರ ವ್ಯಾಪಾರಿಕ ಸಂಬಂಧ ತುಂಬಾ ಗಾಢವಾದುದಾಗಿದೆ ಎಂದು ಭಾವಿಸಿ ಕೇವಲ ಕೆಲ ಮಾತುಗಳನ್ನು ಹೇಳಿ ಬಿಟ್ಟುಬಿಟ್ಟರು. ಆದರೆ ಸುಮಾಮನು ತುಂಬಾ ಉತ್ಸಾಹಿಯಾಗಿದ್ದನು ಖುರೇಶರು ಹಝುರತ್ ರಸೂಲುಲ್ಲಾಹ್(ಸ) ಮತ್ತು ಅವರ ಸಹಾಬರೊಡನೆ ವರ್ತಿಸುತ್ತಿದ್ದ ದೌರ್ಜನ್ಯಗಳು ಅವರ ಕಣ್ಣೆದುರಿಗಿದ್ದವು. ಅಂದ ಹಾಗೆ ಅವರು ಮಕ್ಕದಿಂದ ಹಿಂದಿರುಗುವಾಗ ಖುರೇಶರಿಗೆ ಹೇಳಿದರು. ದೇವರಾಣೆ, ಇನ್ನು ಮುಂದೆ ರಸೂಲುಲ್ಲಾಹ್(ಸ) ರವರ ಅನುಮತಿಯಿಲ್ಲದೇ ಒಂದು ಕಾಳು ಸಹ ನಿಮಗೆ ಯಮಾಮದಿಂದ ದೊರೆಯಲಾರದು.

ತನ್ನ ಜನ್ಮಸ್ಥಳಕ್ಕೆ ಹೋದ ನಂತರ ನಿಜವಾಗಿಯೂ ಮಕ್ಕದೆಡೆ ಹೋಗುವ ಎಲ್ಲಾ ವ್ಯಾವಹಾರಿಕ ತಂಡಗಳನ್ನು ನಿಲ್ಲಿಸಿಬಿಟ್ಟರು. ಅಂದ ಹಾಗೆ ಆಹಾರದ ಬಹುಭಾಗ ಯಮಾಮದಿಂದ ಬರುತಿತ್ತು. ಅದರಿಂದ ಮಕ್ಕದ ಖುರೇಶರು ಕಷ್ಟಕ್ಕೆ ಸಿಲುಕಿದರು. ಇನ್ನು ಕೆಲ ಅವದಿ ಕಳೆದಿರಲಿಲ್ಲ. ಅವರು ಗಾಬರಿಗೊಂಡು ಹುಝೂರ್(ಸ) ರವರಿಗೆ ಪತ್ರ ಬರೆದರು

ನೀವು ಯಾವಾಗಲೂ ಸದ್ವರ್ತನೆಯ ಬೋಧನೆ ಮಾಡುತ್ತಿರುತ್ತಿರಿ ಮತ್ತು ನಾವು ಸಹೋದರ ಸಂಬಂಧಿಗಳಾಗಿದ್ದೇವೆ. ನಮಗೆ ಈ ಆಪತ್ತಿನಿಂದ ಮುಕ್ತಿ ಕೊಡಿಸಿರಿ. ಆ ಸಮಯ ಮಕ್ಕದ ಖುರೇಶರು ಎಷ್ಟೊಂದು ಗಾಬರಿಗೊಂಡಿದ್ದರೆಂದೆ ಅವರು ಕೇವಲ ಪತ್ರ ಬರೆದು ಸಾಕು ಎನ್ನಲಿಲ್ಲ. ಬದಲು ತಮ್ಮ ಸರದಾರರಾದ ಅಬೂ ಸುಫಿಯಾನ್ ಬಿನ್ ಹರಬ್‌ರವರನ್ನು ಹಝ್ರತ್ ರಸೂಲುಲ್ಲಾಹ್(ಸ) ರವರ ಬಳಿ ಕಳುಹಿಸಿದರು. ಆಗ ಹಝ್ರತ್ ರಸೂಲುಲ್ಲಾಹ್(ಸ) ಸುಮಾಮ ಬಿನ್ ಉಸಾಲ್‌ರಿಗೆ ನಿರ್ದೇಶಿಸಿದರು. ಖುರೇಶರ ತಂಡಗಳಿಗೆ ಮಕ್ಕಕ್ಕಾಗಿ ಆಹಾರ ಸಾಮಾಗ್ರಿಗಳಿದ್ದರೆ ಅದನ್ನು ತಡೆಯಬೇಡಿರಿ. ಅಂದ ಹಾಗೆ ವ್ಯಾಪಾರಿಕ ವ್ಯವಹಾರ ಮತ್ತೆ ಜಾರಿಯಾಯಿತು. ಹೀಗೆ ಮಕ್ಕದವರಿಗೆ ಈ ಆಪತ್ತಿನಿಂದ ಮುಕ್ತಿ ದೊರೆಯಿತು. ಈ ಘಟನೆಯು ಹಝ್ರತ್ ರಸೂಲುಲ್ಲಾಹ್(ಸ) ರವರ ಅದ್ವಿತೀಯ ಕರುಣೆಯ ಮತ್ತು ದಯೆ ಹಾಗೂ ಕ್ಷಮಾಶೀಲತೆಯ ಒಂದು ಜ್ವಲಂತ ಉದಾಹರಣೆಯಾಗಿದೆ. (ಅದೇ ಪುಟ 662).

ಒಂದು ಸಂದರ್ಭದಲ್ಲಿ ಅಬು ಸೂಫಿಯಾನನು ಮತ್ತೊಮ್ಮೆ ಹಝ್ರತ್ ರಸೂಲುಲ್ಲಾಹ್(ಸ) ರವರನ್ನು ಹತ್ಯೆ ಮಾಡುವ ಸಂಚು ನಡೆಸಿದನು. ಬದ್ವಿ ಒಬ್ಬನನ್ನು ಅವರ ಹತ್ಯೆ ಮಾಡಲು ಕಳುಹಿಸಿದನು. ಹಝ್ರತ್ ರಸೂಲುಲ್ಲಾಹ್(ಸ) ರವರ ಸುರಕ್ಷತೆಯ ಹೊಣೆ ಅಲ್ಲಾಹನು ಪಡೆದಿದ್ದನು. ಹಾಗಿರುವಾಗ ಯಾವೊಬ್ಬ ಹತ್ಯೆಗಾರನು ಅವರೆಡೆ ಹೋಗಲು ಹೇಗೆ ಸಾಧ್ಯವಿತ್ತು? ಅಂದ ಹಾಗೆ ಅವರು ಎಷ್ಟೋ ಸಲ ಸಂಚು ನಡೆಸಿದರು ಏನೋ. ಅಂತೂ ಹತ್ಯೆಗಾರನು ಸಿಕ್ಕಿಬಿದ್ದನು. ಹಝುರತ್ ರಸೂಲುಲ್ಲಾಹ್(ಸ) ಅವನನ್ನು ಸಹ ಕ್ಷಮಿಸಿದರು. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ ಎ.(ರ) ಹೇಳುತ್ತಾರೆ.

ಅಹಮ್ಮದ್ ಯುದ್ಧದ ಶೋಚನೀಯ ಸೋಲಿನ ನಂತರ ಮಕ್ಕ ಖುರೇಶರ ತನುಮನದಲ್ಲಿ ಅಗ್ನಿಬಿದ್ದ ಹಾಗಾಗಿತ್ತು. ಸಹಜವಾಗಿಯೇ ಈ ಅಗ್ನಿ ಅಬು ಸುಫಿಯಾನಿನ ಪಾಲಿಗೆ ಯಥೇಚ್ಛವಾಗಿ ಬಂದಿತ್ತು. ಏಕೆಂದರೆ ಅವರು ಮಕ್ಕದ ನೇತಾರನಾಗಿದ್ದನು ಮತ್ತು ಅಹಝಾಬ್ ಯುದ್ಧದಲ್ಲಿ ವಿಶೇಷವಾಗಿ ಅಪಮಾನಿತನಾಗಿದ್ದನು. ಕೆಲ ಅವಧಿಯವರೆಗೆ ಅಬೂ ಸುಫಿಯಾನ್ ತನ್ನ ಅಗ್ನಿಯಲ್ಲಿ ತಾನೇ ಸುಡುತ್ತಿದ್ದ. ಆದರೆ ಅಂತಿಮವಾಗಿ ಆ ಬೆಂಕಿಯ ಗೌಪ್ಯ ಜ್ವಾಲೆಗಳಿಂದ ಹೊರ ಬರಲು ಪ್ರಾರಂಭಿಸಿದರು. ಸಹಜವಾಗಿಯೂ ಅವಿಶ್ವಾಸಿಗಳ ಸರ್ವಾಧಿಕ ಶತ್ರುತ್ವ ಅಲ್ಲದೇ ನಿಜವಾದ ಶತ್ರುತ್ವ ಹಝ್ರತ್ ರಸೂಲುಲ್ಲಾಹ್(ಸ) ರೊಂದಿಗೆಯೇ ಇತ್ತು. ಆದುದರಿಂದ ಅಬೂ ಸುಫಿಯಾನನು ಯೋಚಿಸಿದನು ಬಾಹ್ಯ ಎಲ್ಲಾ ತಂತ್ರ ಕುತಂತ್ರಗಳು ವಿಫಲವಾಗಿವೆ. ಗೋಪ್ಯ ತಂತ್ರಗಳನ್ನು ಏಕೆ ಬಳಸಿ ಮುಹಮ್ಮದ್ (ಸ) ರವರನ್ನು ಅಂತ್ಯಗೊಳಿಸಬೇಕು. ಹಝುರತ್ ರಸೂಲುಲ್ಲಾಹ್(ಸ) ರವರ ಅಕ್ಕಪಕ್ಕ ವಿಶೇಷವಾದ ಸುರಕ್ಷಾ ಕ್ರಮ ಅಂತೂ ಇರುವುದಿಲ್ಲ. ಬದಲು ಕೆಲ ಸಂದರ್ಭಗಳಲ್ಲಂತೂ ಸುರಕ್ಷತೆಯಿಲ್ಲದೆ ಆಚೆ ಈಚೆ ಬರುತ್ತಿರುತ್ತಾರೆ ಮಸೀದಿಗೆ ಅಂತು ಐದು ಹೊತ್ತು ನಮಾಝುಗೋಸ್ಕರ ಆಗಮಿಸುತ್ತಾರೆ. ಪ್ರಯಾಣದಲ್ಲೂ ನಿರಾತಂಕವಾಗಿ ಸ್ವತಂತ್ರ ರೀತಿಯಲ್ಲಿ ಬರುತ್ತಿರುತ್ತಾರೆ. ಅದಕ್ಕಿಂತ ಉತ್ತಮ ವಿಧಾನ ಒಬ್ಬ ಹತ್ಯೆಗಾರನಿಗೆ ಇನ್ನೇನಾಗಬಹುದು? ಈ ಯೋಚನೆ ಬರುತ್ತಲೇ ಅಬೂ ಸುಫಿಯಾನ್ ಒಳಗೊಳಗೆ ಹಝುರತ್ ರಸೂಲುಲ್ಲಾಹ್(ಸ) ರವರ ಹತ್ಯೆಗಾಗಿ ದೃಢವಾದ ಯೋಜನೆ ರೂಪಿಸಲು ಪ್ರಾರಂಭಿಸಿದನು.

ಪೂರ್ಣ ನಿಶ್ಚಯದಿಂದ ಆ ಯೋಜನೆಗೆ ಬದ್ಧನಾಗಿ ಒಂದು ದಿನ ಸಂದರ್ಭ ಪಡೆದು ತನ್ನ ದಾಳದವರನ್ನು ಕೆಲ ಯುವ ಖುರೇಶರೊಂದಿಗೆ ಹೇಳಿದನು. ನಿಮ್ಮಲ್ಲಿ ಯಾವೊಬ್ಬ ಪುರುಷ ಸಾಹಸಿ ಗೌಪ್ಯವಾಗಿ ಹೋಗಿ ಮುಹಮ್ಮದ್(ಸ) ರವರನ್ನು ಕೊಲ್ಲುವವರು ಇಲ್ಲವೇ? ನಿಮಗೆ ತಿಳಿದ ವಿಷಯವೇ ಆಗಿದೆ. ಮುಹಮ್ಮದ್ ಸಾಮಾನ್ಯ ರೀತಿಯಲ್ಲಿ ಮದೀನನ ಬೀದಿ ಬೀದಿಯಲ್ಲಿ ಅಲೆದಾಡುತ್ತಿರುತ್ತಾರೆ. ಆ ಯುವಕರು ಈ ಭಾವನೆಗಳನ್ನು ಆಲಿಸಿದರು ಮತ್ತು ತಯಾರಾದರು. ಇನ್ನೂ ಹೆಚ್ಚು ದಿನಗಳೇನು ಕಳೆದಿರಲಿಲ್ಲ. ಬದ್ವಿಯೊಬ್ಬನು ಅಬೂ ಸುಫಿಯಾನನ ಬಳಿಗೆ ಬಂದು ಹೇಳಿದನು. ನಾನು ನಿಮ್ಮ ಯೋಜನೆಯನ್ನು ಅಲಿಸಿದ್ದೇನೆ ಮತ್ತು ಅದಕ್ಕಾಗಿ ಹಾಜರಾಗಿದ್ದೇನೆ. ನಾನೊಬ್ಬ ದೃಢ ನಿಶ್ಚಯದ ಸ್ತಿರಚಿತ್ತ ಮನುಷ್ಯನಾಗಿದ್ದೇನೆ. ನನ್ನ ಹಿಡಿತ ಕಠಿಣವು ಮತ್ತು ಬಹಳ ಆಕ್ರಮಣವಾಗಿರುತ್ತದೆ. ನೀವು ನನಗೆ ಈ ಕಾರ್ಯಕ್ಕಾಗಿ ನಿಯುಕ್ತಗೊಳಿಸಿ ನನಗೆ ನೆರವು ನೀಡಿದರೆ ನಾನು ಮುಹಮ್ಮದ್(ಸ) ರವರನ್ನು ಕೊಲೆ ಮಾಡಲು ಹೋಗುತ್ತೇನೆ. ನನ್ನ ಬಳಿ ಒಂದು ಎಂತಹ ಅಸ್ತ್ರವಿದೆ ಅಂದರೆ ಅದು ಹದ್ದಿನ ಭೇಟೆಯ ರೀತಿ ಗೌಪ್ಯ ರೆಕ್ಕೆಯಂತಿರುತ್ತದೆ. ಅಂದ ಹಾಗೆ ನಾನು ಮುಹಮ್ಮದ್(ಸ) ರವರ ಮೇಲೆ ಆಕ್ರಮಣ ಮಾಡುವೆನು ಮತ್ತು ಓಡಿ ಹೋಗಿ ಯಾವುದಾದರೊಂದು ತಂಡದಲ್ಲಿ ಸೇರಿಕೊಳ್ಳುವೆನು. ಮುಸಲ್ಮಾನರು ನನ್ನನು ಹಿಡಿಯಲಾರರು. ಮದೀನದ ಎಲ್ಲಾ ರಸ್ತೆಗಳು ಸಹ ನನಗೆ ಗೊತ್ತಿದೆ. ಅಬೂ ಸುಫಿಯಾನ್ ಹೇಳಿದನು, ಸಾಕು ಸಾಕು. ನೀನು ನಮ್ಮ ಕಾರ್ಯದ ಮನುಷ್ಯನಾಗಿದ್ದೀ. ಅನಂತರ ಅಬೂ ಸುಫಿಯಾನ್ ಒಂದು ವೇಗವಾದ ಒಂಟೆ ಮತ್ತು ಕೆಲ ಸಂಪತ್ತು ಇತ್ಯಾದಿ ಕೊಟ್ಟು ಬೀಳ್ಕೊಟ್ಟನು ಮತ್ತು ತಾಕೀತು ಮಾಡಿದನು ರಹಸ್ಯ ಬಯಲಾಗಬಾರದು.

ಮಕ್ಕದಿಂದ ಹೊರಟ ಈ ವ್ಯಕ್ತಿ ಗುಪ್ತ ರೀತಿಯಲ್ಲಿ ರಾತ್ರಿ ಪ್ರಯಾಣ ಮಾಡುತ್ತಾ ಮದೀನಕ್ಕೆ ಹೊರಟ. ಹಝ್ರತ್ ರಸೂಲುಲ್ಲಾಹ್(ಸ) ರವರನ್ನು ಹುಡುಕುತ್ತಾ ನೇರವಾಗಿ ಬನಿ ಅಬ್ದುಲ್ ಅಶ್ಹಲ್ ಗೋತ್ರದವರ ಮಸೀದಿಗೆ ತಲುಪಿದ. ಆಗ ಹುಝೂರ್(ಸ) ಅಲ್ಲಿ ಆಗಮಿಸಿದ್ದರು. ಆಗ ಆ ದಿನಗಳಲ್ಲಿ ಹೊಸ ಹೊಸ ಜನರು ಮದೀನಕ್ಕೆ ಬರುತ್ತಿದ್ದರು. ಆದ್ದರಿಂದ ಯಾವ ಮುಸಲ್ಮಾನನಿಗೆ ಸಂಶಯ ಉಂಟಾಗಲಿಲ್ಲ. ಆದರೆ ಹಝ್ರತ್ ರಸೂಲುಲ್ಲಾಹ್(ಸ) ಅವರತ್ತ ಬರುತ್ತಲೇ ಹೇಳಿದರು. ಈ ವ್ಯಕ್ತಿ ಕಪಟತನದಿಂದ ಬಂದಿರುತ್ತಾನೆ. ಈ ಶಬ್ಧಗಳನ್ನು ಕೇಳುತ್ತಲೇ ಇನ್ನೂ ವೇಗವಾಗಿ ಅವರತ್ತ ಬರತೊಡಗಿದ. ಅಷ್ಟರಲ್ಲಿಯೇ ಅನ್ಸಾರಿಯೊಬ್ಬರು ಉಸೇದ್ ಬಿನ್ ಹಝೀರ್ ಧಾವಿಸಿ ಅವನನ್ನು ಹಿಡಿಯಲೆನ್ನಿಸಿದರು. ಅಷ್ಟರಲ್ಲಿ ಅವರ ಕೈ ಗೌಪ್ಯವಾಗಿಟ್ಟುಕೊಂಡ ಚಾಕುವಿನ ಮೇಲೆ ಬಿತ್ತು. ಆಗ ಅವನು ಗಾಬರಿಗೊಂಡು ಹೇಳಿದ. "ನನ್ನ ರಕ್ತ ನನ್ನ ರಕ್ತ" ಅವನು ಹಿಡಿಯಲ್ಪಟ್ಟ ಹಝುರತ್ ರಸೂಲುಲ್ಲಾಹ್(ಸ) ಕೇಳಿದರು. ಸತ್ಯವಾಗಿ ಹೇಳು, ನೀನು ಯಾರು, ಏತಕ್ಕಾಗಿ ಇಲ್ಲಿ ಬಂದಿರುವೆ? ಅವನು ಹೇಳಿದ. ನನ್ನ ಪ್ರಾಣ ರಕ್ಷಿಸಿದರೆ ನಾನು ಸತ್ಯ ಹೇಳುವೆನು. ಅವರು ಹೇಳಿದರು. ನೀನು ಎಲ್ಲವೂ ಸತ್ಯವಾಗಿ ಹೇಳಿದರೆ ನಿನನ್ನು ಕ್ಷಮಿಸಲಾಗುವುದು. ಆಗ ಇಡೀ

ಘಟನೆ ಇದ್ದ ಹಾಗೆ ಹಝ್ರತ್ ರಸೂಲುಲ್ಲಾಹ್(ಸ) ರವರ ಮುಂದೆ ವಿವರಿಸಿದನು. ಅಬೂ ಸುಫಿಯಾನ್ ಅಷ್ಟಷ್ಟು ಬಹುಮಾನ ಕೊಡುವೆನು ಎಂದು ಸಹ ಹೇಳಿದ್ದಾನೆ. ಅನಂತರ ಈ ವ್ಯಕ್ತಿ ಕೆಲ ದಿನಗಳವರೆಗೆ ಮದೀನದಲ್ಲಿ ವಾಸಿಸಿದ ಮತ್ತೆ ಸ್ವಯಂಪ್ರೇರಿತವಾಗಿ ಸಂತೋಷದಿಂದ ಮುಸಲ್ಮಾನನಾಗಿ ಹಝ್ರತ್ ರಸೂಲುಲ್ಲಾಹ್(ಸ) ರವರ ಬಳಗಕ್ಕೆ ಸೇರಿಕೊಂಡನು. (ಅದೇ ಪುಟ 741)

ಖೈಬರ್ ಯುದ್ಧ ಸಂದರ್ಭದಲ್ಲಿ ಯಹೂದಿ ಮಹಿಳೆಯೊಬ್ಬಳಿಗೆ ತನ್ನ ಹೃದಯದಲ್ಲಿ ಹಝ್ರತ್ ರಸೂಲುಲ್ಲಾಹ್(ಸ) ರವರ ಬಗ್ಗೆ ತುಂಬಾ ಶತ್ರುತ್ವ ಹಾಗೂ ಹಗೆತನವಿತ್ತು. ಅವರಿಗೆ ವಿಷಕೊಟ್ಟು ಸಾಯಿಸಬೇಕು ಎಂದುಕೊಂಡಿದ್ದಳು. ಅದರಿಂದ ಒರ್ವ ಸಹಾಬಿಯ ಮೃತ್ಯು ಆಯಿತು. ಆದರೂ ಸಹ ಹಝ್ರತ್ ರಸೂಲುಲ್ಲಾಹ್(ಸ) ಯಾವ ಪ್ರತಿಕಾರವನ್ನು ಮಾಡಲಿಲ್ಲ ಮತ್ತು ಅವಳನ್ನು ಕ್ಷಮಿಸಿದರು. ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ.

ಮೂರನೆ ಘಟನೆ ಆದದ್ದೇನೆಂದೆ ಯಹೂದಿ ಮಹಿಳೆಯೋರ್ವಳು ಸಹಾಬರೊಂದಿಗೆ ಕೇಳಿದಳು. ರಸೂಲುಲ್ಲಾಹ್(ಸ) ರವರಿಗೆ ಕುರಿಯ ಯಾವ ಭಾಗದ ಮಾಂಸ ಇಷ್ಟ? ಸಹಾಬರು ಹೇಳಿದರು. ಅವರಿಗೆ ಪಕ್ಕೆಲುಬಿನ ಭಾಗ ಇಷ್ಟ. ಆಗ ಅವಳು ಒಂದು ಕುರಿ ಝಿಬ ಮಾಡಿದಳು ಮತ್ತು ಬಂಡೆಗಳ ಮೇಲೆ ಅದರ ಕಬಾಬ್ ಮಾಡಿಸಿದಳು ಮತ್ತು ಆ ಮಾಂಸದಲ್ಲಿ ವಿಷ ಸೇರಿಸಿದಳು. ವಿಶೇಷವಾಗಿ ಪಕ್ಕೆಲುಬುಗಳ ಭಾಗದಲ್ಲಿ ಹೆಚ್ಚು ವಿಷ ಸೇರಿಸಿದಳು. ಏಕೆಂದರೆ ಅದು ಅವರಿಗೆ ಇಷ್ಟದಾಯಕ ಎಂದು ತಿಳಿದಿತ್ತು.

ಸೂರ್ಯಾಸ್ತನಂತರ ರಸೂಲುಲ್ಲಾಹ್(ಸ) ಸಂಜೆಯ ನಮಾಝ್ ನಿರ್ವಹಿಸಿ ತಮ್ಮ ಸ್ಥಳಕ್ಕೆ ಮರಳಿ ಹೋಗುತ್ತಿದ್ದಾಗ ನೋಡಿದರು. ಅದರ ಸಮೀಪ ಹೆಣ್ಣೊಬ್ಬಳು ನಿಂತುಕೊಂಡಿದ್ದಾಳೆ. ಅವರು ಅವರೊಡನೆ ಕೇಳಿದರು. ಬೀಬೀ ಇಲ್ಲಿ ನಿಮ್ಮ ಕೆಲಸವೇನು? ಅವಳು ಹೇಳಿದಳು. ಓ ಅಬ್ದುಲ್ ಖಾಸಿರಿ! ನಾನು ನಿಮಗಾಗಿ ಒಂದು ಉಡುಗೊರೆ ತಂದಿರುವೆನು. ರಸೂಲುಲ್ಲಾಹ್(ಸ) ತನ್ನ ಸಂಗಡಿಗನೊಬ್ಬನಿಗೆ ಹೇಳಿದರು. ಅವಳು ಕೊಡುವುದನ್ನು ತೆಗೆದುಕೊಳ್ಳಿರಿ. ಅನಂತರ ಅವರು ಊಟಕ್ಕೆ ಕುಳಿತುಕೊಡರು. ಆಗ ಅವರಿಗೆ ಆ ಕರಿದ ಮಾಂಸ ಕೊಟ್ಟರು. ರಸೂಲುಲ್ಲಾಹ್(ಸ) ಅದರಿಂದ ಒಂದು ತುತ್ತು ತೆಗೆದುಕೊಂಡರು. ಅವರ ಸಂಗಡಿಗರೊಬ್ಬರು ಬಶೀರ್ ಬಿನ್ ಅಲ್‌ವಿರಾ ಬಿನಲ್ ಮಅಕ್ಷರ್ ಸಹ ಒಂದು ತುತ್ತು ತೆಗೆದುಕೊಂಡರು. ಅಷ್ಟರಲ್ಲಿ ಉಳಿದ ಸಹಾಬರು ಸಹ ಮಾಂಸ ತಿನ್ನಲು ಕೈ ಮುಂದೆ ಮಾಡಿದರು. ಆಗ ಅವರು ಹೇಳಿದರು. ತಿನ್ನಬೇಡಿರಿ ಏಕೆಂದರೆ ಈ ಮಾಂಸವು ನನಗೆ ಸುದ್ದಿ ನೀಡಿದೆ. ಅದರಲ್ಲಿ ವಿಷ ಸೇರಿಸಲಾಗಿದೆ. ಅದರ ಅರ್ಥ ಅವರಿಗೆ ದೇವವಾಣಿಯಾಗಿತ್ತು ಎಂಬುದೇನಿಲ್ಲ. ಬದಲು ಅರಬರ ಒಂದು ನುಡಿಗಟ್ಟಾಗಿದೆ. ಅದರ ಅರ್ಥವೇನೆಂದರೆ, ಈ ಮಾಂಸದ ರುಚಿ ನೋಡುತ್ತಲೇ ನನಗೆ ಅದರಲ್ಲಿ ವಿಷ ಸೇರಿಸಿದಂತೆ ಗೋಚರವಾಯಿತು. ಅಂದ ಹಾಗೆ ಪವಿತ್ರ ಖುರ್‌ಆನ್‌ನಲ್ಲಿ ಹಝ್ರತ್ ಮೂಸ(ಅ) ರವರ ಕಾಲದ ಒಂದು ಘಟನೆ ವಿವರಿಸುತ್ತಾ. ಒಂದು ಗೋಡೆಯ ಕುರಿತು ಬರುತ್ತದೆ. ಅದು ಬೀಳುವ ಹಾಗೆ ಕಾಣುತ್ತಿತ್ತು. ಅದರ ಅರ್ಥದಷ್ಟೇ ಅದು ಬೀಳುವ ಹಂತಕ್ಕೆ ತಲುಪಿತ್ತು. ಹಾಗೆಯೇ ಇಲ್ಲಿಯೂ ಸಹ ಮಾಂಸ ಹೇಳಿದೆ ಎಂದರ್ಥವಲ್ಲ. ಬದಲು ಮಾಂಸದ ರುಚಿ ನೊಡುತ್ತಲೇ ಹಾಗೆ ಎನಿಸಿದೆ ಎಂದರ್ಥ. ಅದರ ಮುಂದಿನ ನುಡಿ ಅದನ್ನು ಸ್ಪಷ್ಟಪಡಿಸುತ್ತದೆ. ಆಗ ಬಶೀರ್(ರ) ಹೇಳಿದರು. ಯಾವ ಅಲ್ಲಾಹನು ನಿಮಗೆ ಗೌರವ ನೀಡಿದ್ದಾನೆ. ಅವನಾಣೆ, ನಾನು ಹೇಳುತ್ತೇನೆ. ನನಗೂ ಸಹ ಈ ತುತ್ತಿನಲ್ಲಿ ವಿಷವಿದ್ದಂತೆ ಕಂಡಿತು. ನನ್ನ ಮನಸ್ಸು ಅದನ್ನು ಬಿಸಾಡಬೇಕು ಎನ್ನುತ್ತಿತ್ತು. ಆದರೆ ನಾನು ನಿಮ್ಮ ಊಟ ಕೇಳಬಾರದು ಅಂದುಕೊಂಡು ಹೇಳಲಿಲ್ಲ. ನೀವು ಆ ತುತ್ತು ತೆಗೆದುಕೊಂಡಾಗ ನಾನು ತೆಗೆದುಕೊಂಡೆ, ಮನಸ್ಸಿನಲ್ಲಿ ನನಗೆ ಮೊದಲೇ ಅನುಮಾನ ಬಂದಿತ್ತು. ಅದರಲ್ಲಿ ವಿಷವಿದೆ, ಅವರು ತೆಗೆದುಕೊಳ್ಳಬಾರದಿತ್ತು ಎಂದು. ಅದರ ಸ್ವಲ್ಪವೇ ಸಮಯದಲ್ಲಿ ಬಶೀರರ ಆರೋಗ್ಯ ಕೆಟ್ಟಿತು. ಕೆಲವರ ವರದಿಗಳ ಪ್ರಕಾರ ಅವರು ಕೆಲ ಸಮಯ ಅಸ್ವಸ್ಥರಾದರು. ಅಲ್ಲೇ ಮೃತಪಟ್ಟರು. ಆಗ ರಸೂಲುಲ್ಲಾಹ್(ಸ) ಅದರ ಸ್ವಲ್ಪ ಮಾಂಸ ನಾಯಿಯ ಮುಂದೆ ಹಾಕಿದರು. ಅದು ತಿನ್ನುತ್ತಲೇ ಸತ್ತು ಹೋಯಿತು. ಆಗ ರಸೂಲುಲ್ಲಾಹ್(ಸ) ಆ ಮಹಿಳೆಗೆ ಕರೆಸಿ ಕೇಳಿದರು. ಈ ಕುರಿ ಮಾಂಸದಲ್ಲಿ ವಿಷ ಸೇರಿಸಿದ್ದಿಯೇ? ಅವಳು ಕೇಳಿದಳು. ನಿಮಗೆ ಹೇಗೆ ಗೊತ್ತಾಯಿತು. ಅವರ ಕೈಯಲ್ಲಿ ಆ ಮಾಂಸದ ತುಂಡಿತ್ತು. ಹೇಳಿದರು. ಈ ಮಾಂಸದ ತುಂಡು ನನಗೆ ತಿಳಿಸಿದೆ. ಆಗ ಆ ಮಹಿಳೆ ತಿಳಿದುಕೊಂಡಳು. ರಹಸ್ಯವೆಲ್ಲ ಬಯಲಾಗಿದೆ ಎಂದು ಒಪ್ಪಿಕೊಂಡಳು. ಹೌದು ವಿಷ ಸೇರಿಸಿದ್ದೆ. ಆಗ ಅವರು ಅವಳಿಗೆ ಕೇಳಿದರು ಈ ಅನಿಷ್ಠ ಕೆಲಸ ಮಾಡಲು ಯಾರು ನಿಮಗೆ ಹೇಳಿದ್ದು? ಅವಳು ಉತ್ತರ ನೀಡಿದಳು. ನನ್ನ ಸಮುದಯದವರೊಂದಿಗೆ ನಿಮ್ಮ ಯುದ್ಧ ನಡೆದಿತ್ತು, ನನ್ನ ಸಂಬಂಧಿಕರು ಆ ಯುದ್ಧದಲ್ಲಿ ತೀರಿಹೋಗಿದ್ದರು. ಆದ್ದರಿಂದ ನನ್ನ ಮನಸ್ಸಿನಲ್ಲಿ ಯೋಚನೆ ಬಂತು. ಅವರಿಗೆ ವಿಷ ಕೊಡಬೇಕು ಎಂದು, ಇವರು ಮಾಡುವ ಕಾರ್ಯಗಳು ಲೌಕಿಕವಾಗಿದ್ದರೆ ನನಗೆ ಅದರಿಂದ ಮುಕ್ತಿ ಸಿಗುವುದು ಇಲ್ಲ. ಅವರು ಸತ್ಯವಾಗಿಯೇ ಪ್ರವಾದಿಯಾಗಿದ್ದರೆ ಅಲ್ಲಾಹನು ಅವರಿಗೆ ಸಂರಕ್ಷಿಸುವನು ಎಂದು. ರಸೂಲುಲ್ಲಾಹ್(ಸ) ಅವಳ ಈ ಮಾತುಗಳನ್ನು ಕೇಳಿ ಅವಳನ್ನು ಕ್ಷಮಿಸಿದರು. ನಿಶ್ಚಯುವಾಗಿಯೂ ಅವಳಿಗೆ ಮರಣದಂಡನೆ ನೀಡಹುದಾಗಿತ್ತೆಂದು. ಈ ಘಟನೆ ಸೂಚಿಸುತ್ತದೆ. ರಸೂಲುಲ್ಲಾಹ್(ಸ) ಯಾವ ರೀತಿ ತಮ್ಮ ಪ್ರಾಣಶತ್ರುಗಳನ್ನು ತಮ್ಮ ಸಂಗಡಿಗರ ಹತ್ಯೆಗಾರರನ್ನು ಸಹ ಕ್ಷಮಿಸುತ್ತಿದದರು ಎಂದು. ವಾಸ್ತವವಾಗಿ ಅವರಿಗೆ ಜೀವಂತವಾಗಿ ಬಿಟ್ಟಲ್ಲಿ ಮುಂದೆ ಇನ್ನಷ್ಟು ಅನಾಹುತಗಳು ಆಗುವ ಶಂಕೆ ಬಂದಲ್ಲಿ ಮಾತ್ರ ಅವರನ್ನು ಶಿಕ್ಷಿಸುತ್ತಿದ್ದರು. (ನಬಿಯೊಂ ಕಾ ಸರದಾರ್, ಪುಟ–193, ಖಾದಿಯಾನ್ ಮದ್ರಣ 2013).

ಮಕ್ಕ ವಿಜಯದ ಸಂದರ್ಭದಲ್ಲಿ ಹಝ್ರತ್ ರಸೂಲುಲ್ಲಾಹ್(ಸ) ಯಾವ ರೀತಿ ತನ್ನ ಮತ್ತು ತನ್ನ ಸಹಾಬಿ ಸಹಾಬಿಯರಿಗೆ ಮತ್ತು ತನ್ನ ನಿಕಟ ಬಂಧುಗಳಿಗೆ ಕ್ಷಮಿಸಿದ ವಿಷಯ ಗೌಪ್ಯವಾದುದೇನಲ್ಲ. ಈ ಪೈಕಿ ಎರಡು ಘಟನೆಗಳು ಪ್ರಸ್ತುತವಿದೆ. ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ. ಯಾವ ಜನರ ಪ್ರತಿ ಅವರ ಅತ್ಯಂತ ದೌರ್ಜನ್ಯ, ಕ್ರೂರ ಕಾರಣಗಳಿಂದಾಗಿ ರಸೂಲುಲ್ಲಾಹ್(ಸ) ಅವರ ಹತ್ಯೆಗಾಗಿ ನಿರ್ಣಯ ತೆಗೆದುಕೊಂಡಿದ್ದರು. ಮುಸಲ್ಮಾನರ ಶಿಫಾರಸ್ಸಿನ ಮೇರೆಗೆ ಅವರನ್ನು ಸಹ ಬಿಟ್ಟುಬಿಟ್ಟರು. ಅದೇ ಜನರಲ್ಲಿ ಅಬೂಜಹಲಿನ ಪುತ್ರ ಇಕ್ರಮ ಸಹ ಇದ್ದನು. ಇಕ್ರಮನ ಹೆಂಡತಿ ಮನದಲ್ಲಿಯೇ ಮುಸಲ್ಮಾನನಾಗಿದ್ದಳು. ಅವಳು ರಸೂಲುಲ್ಲಾಹ್(ಸ) ರೊಡನೆ ಹೇಳಿದಳು. ಓ ನಬಿವರ್ಯರೇ! ಇಕ್ರಮನಿಗೆ ಸಹ ನೀವು ಕ್ಷಮಿಸಿಬಿಡಿ. ಅವರು ಹೇಳಿದರು. ಆಯಿತು ನಾವು ಅವನನ್ನು ಕ್ಷಮಿಸುತ್ತೇವೆ. ಇಕ್ರಮ ಓಡಿ ಯಮನ್ ಕಡೆ ಪಲಾಯನ ಮಾಡುತ್ತಿದ್ದನು. ಅವನ ಪತ್ನಿ ತನ್ನ ಪತಿಯ ಪ್ರೀತಿಯಲ್ಲಿ ಅವನ ಹುಡುಕಾಟಕ್ಕೆ ಹೊರಟಳು. ಕಡಲತೀರದಲ್ಲಿ ಹಡಗಿನಲ್ಲಿ ಕುಳಿತು ಅರಬ್ ದೇಶವನ್ನು ತ್ಯಜಿಸಲು ಪೂರ್ಣ ಸಿದ್ಧನಾಗಿದ್ದನು. ಬಾಬರಿಗೊಂಡು ಹೈರಾಣಾಗಿ ಪತ್ನಿಯು ಅವನ ಬಳಿಗೆ ತಲುಪಿ ಹೇಳಿದಳು. ಓ ನನ್ನ ಚಿಕ್ಕಪ್ಪನ ಪುತ್ರನೇ (ಅರಬ್ ಮಹಿಳೆಯು ತನ್ನ ಪತಿಯನ್ನು ಚಿಕ್ಕಪ್ಪನ ಪುತ್ರ ಎಂದು ಸಂಬೋಧಿಸುತ್ತಿದ್ದರು) ಅಷ್ಟೊಂದು ಸಜ್ಜನ ಮತ್ತ ಕರುಣಾಮಯಿ ವ್ಯಕ್ತಿಯುನ್ನು ಬಿಟ್ಟು ಎಲ್ಲಿಗೆ ಹೋಗುತ್ತಿರುವಿರಿ. ಇಕ್ರಮ ಚಕಿತಗೊಂಡು ತನ್ನ ಪತ್ನಿಗೆ ಕೇಳಿದರು. ಅಷ್ಟೆಲ್ಲ ಶತ್ರುತನದ ನಂತರವು ರಸೂಲುಲ್ಲಾಹ್(ಸ) ನನ್ನನ್ನು ಕ್ಷಮಿಸುವರೇ? ಇಕ್ರಮನ ಹೆಂಡತಿ ಹೇಳಿದಳು. ಹೌದು, ಹೌದು ನಾನು ಅವರಿಂದ ಮಾತು ಪಡೆದಿದ್ದೇನೆ. ಅವರು ನಿಮ್ಮನ್ನು ಕ್ಷಮಿಸಿದ್ದಾರೆ. ಆಗ ಅವರು ರಸೂಲುಲ್ಲಾಹ್(ಸ) ರವರೆದುರು ಹಾಜರಾದಾಗ ಹೇಳಿದರು. ಓ ಪ್ರವಾದಿವರ್ಯರೇ! ನನ್ನ ಹೆಂಡತಿ ಹೇಳುತ್ತಿದ್ದಾರೆ. ತಾವು ನನ್ನಂತಹ ಮನುಷ್ಯನನ್ನು ಸಹ ಕ್ಷಮಿಸಿದ್ದೀರೆಂದು? ಅವರು ಹೇಳಿದರು. ನಿಮ್ಮ ಹೆಂಡತಿ ಸರಿಯಾಗಿಯೇ ಹೇಳುತ್ತಿದ್ದಾಳೆ. ನಾವು ನಿಮ್ಮನ್ನು ಕ್ಷಮಿಸಿದೆವು. ಇಕ್ರಮ ಹೇಳಿದನು. ಯಾವ ವ್ಯಕ್ತಿ ಅಷ್ಟೊಂದು ಕಡು ವೈರಿಗಳನ್ನು ಸಹ ಕ್ಷಮಿಸಬಲ್ಲರೋ ಅವರು ಸುಳ್ಳುಗಾರನಾಗಲು ಸಾಧ್ಯವಿಲ್ಲ. ನಾನು ಸಾಕ್ಷವಹಿಸುತ್ತೇನೆ. ಅಲ್ಲಾಹನು ಏಕನು ಮತ್ತು ಅವನ ಸಹಭಾಗಿಯಾಗಿ ಯಾರೂ ಇಲ್ಲ. ನಾನು ಸಾಕ್ಷವಹಿಸುತ್ತೇನೆ. ಓ ಮುಹಮ್ಮದ್(ಸ) ನೀವು ಅವನ ದಾಸರು ಹಾಗೂ ಅವನ ಸಂದೇಶವಾಗಹಕರಾಗಿದ್ದೀರಿ ಮತ್ತು ನಾಚಿಕೆಯಿಂದ ತಲೆ ತಗ್ಗಿಸಿಕೊಂಡರು. ರಸೂಲುಲ್ಲಾಹ್(ಸ) ಅವನ ಈ ನಾಚಿಕೆಯನ್ನು ಕಂಡು ಅವನಿಗೆ ಸಮಾಧಾನ ನೀಡಲು ಹೇಳಿದರು. ಇಕ್ರಮ ನಾವು ನಿಮ್ಮನ್ನು ಕೇವಲ ಕ್ಷಮಿಸಲಿಲ್ಲ. ಬದಲು ಇಂದು ಏನಾದರು ನನ್ನಿಂದ ನನ್ನ ಸಾಮರ್ಥ್ಯದಲ್ಲಿರುವಂತಹ ಯಾವುದಾದೂ ವಸ್ತುವನ್ನು ಬೇಡು ಅದು ನಾನು ನಿನಗೆ ಕೊಡುವೆನು. ಇಕ್ರಮ ಹೇಳಿದನು ಯಾ ರಸೂಲಲ್ಲಾಹ್! ನನ್ನೆಲ್ಲ ಶತ್ರು ಕಾರ್ಯಗಳನ್ನೆಲ್ಲ ಅಲ್ಲಾಹನು ಕ್ಷಮಿಸುವಂತೆ ಪ್ರಾರ್ಥಿಸಿರಿ. ಅದಕ್ಕಿಂತ ಉತ್ತಮ ಉಡುಗೊರೆ ಏನಾದೀತು. ರಸೂಲುಲ್ಲಾಹ್(ಸ) ಅಲ್ಲಾಹನನ್ನು ಸಂಬೋಧಿಸಿ ಹೇಳಿದರು. ಓ ನನ್ನ ಅಲ್ಲಾಹ್! ಇಕ್ರಮ ನನ್ನೊಡನೆ ಮಾಡಿದ ಎಲ್ಲಾ ಶತ್ರು ಕಾರ್ಯಗಳನ್ನು ಕ್ಷಮಿಸು, ಅವನ ನಾಲಿಗೆಯಿಂದ ಹೊರಟ ಎಲ್ಲಾ ಬಯ್ಗುಳಗಳನ್ನು ಕ್ಷಮಿಸು. ಮತ್ತೆ ರಸೂಲುಲ್ಲಾಹ್(ಸ) ಎದ್ದು ನಿಂತು ತನ್ನ ಚಾದರವನ್ನು ಅವರ ಮೇಲೆ ಹಾಕಿದರು ಮತ್ತು ಹೇಳಿದರು. ಯಾರ ಅಲ್ಲಾಹನ ಮೇಲೆ ವಿಶ್ವಾಸ ತಂದು ನಮ್ಮ ಬಳಿ ಬರುತ್ತಾರೆ. ನಮ್ಮ ಮನೆ ಅವರ ಮನೆಯಾಗಿರುತ್ತದೆ ಮತ್ತು ಸ್ಥಳ ಅವನ ಸ್ಥಳವಾಗಿರುತ್ತದೆ. ಹತ್ಯೆಂಯು ಆಜ್ಞೆ ನೀಡಲಾಗಿದ್ದು ಆ ಜನರಲ್ಲಿ ಆ ವ್ಯಕ್ತಿಯು ಇದ್ದ ಅವನು ರಸೂಲುಲ್ಲಾಹ್(ಸ) ರವರ ಪುತ್ರಿ ರೆನ್ಯೆಬ್ ಹತ್ಯೆಗೆ ಕಾರಣನಾಗಿದ್ದ, ಆ ವ್ಯಕ್ತಿಯ ಹೆಸರು ಹಿಬಾರ್ ಎಂದಾಗಿತ್ತು. ಅವನು ಹಝ್ರತ್ ಝ್ಯೆನಬ್ ರವರ ಒಂಟೆಯ ದೇಹ ಕತ್ತರಿಸಿದ್ದನು. ಹಝುರತ್ ಝೆನಬ್ ಒಂಟೆಯಿಂದ ಕೆಳಗೆ ಬಿದ್ದಿದ್ದರು. ಆ ಕಾರಣದಿಂದ ಅವರ ಗರ್ಭವು ನಷ್ಟವಾಗಿತ್ತು ಮತ್ತು ಕೆಲವೇ ದಿನಗಳಲ್ಲಿ ಅವರು ನಿಧನ ಹೊಂದಿದರು. ಇನ್ನಿತರ ಅಪರಾಧಗಳಲ್ಲದೆ ಈ ಒಂದೇ ಅಪರಾಧ ಅವನನ್ನು ಹತ್ಯೆಯ ಶಿಕ್ಷೆಗೆ ಸಾಕಾಗಿತ್ತು. ಆ ವ್ಯಕ್ತಿಯು ಸಹ ರಸೂಲುಲ್ಲಾಹ್(ಸ) ರವರ ಸಮ್ಮುಖದಲ್ಲಿ ಹಾಜರಾದನು. ಮತ್ತು ಹೇಳಿದನು. ಓ ನವಿವರ್ಯರೇ! ನಾನು ನಿಮ್ಮಿಂದ ಓಡಿ ಇರಾನಿಗೆ ಹೋಗುತ್ತಿದ್ದೆ. ಮತ್ತೆ ನನ್ನ ಹೃದಯದಲ್ಲಿ ಯೋಚನೆ ಬಂತು. ಅಲ್ಲಾಹನು ತನ್ನ ಸಂದೇಶವಾಹಕನ ಮೂಲಕ ನಮ್ಮ ಬಹುದೇವಾರಾಧನೆಗಳ ಭಾವನೆಗಳನ್ನು ದೂರ ಮಾಡಿದ್ದಾನೆ ಮತ್ತು ನಮಗೆ ಆಧ್ಯಾತ್ಮಿಕ ಮರಣದಿಂದ ಕಾಪಾಡಿದ್ದಾನೆ. ನಾನು ಇತರೆಡೆ ಹೋಗುವ ಬದಲಿಗೆ ಏಕೆ ಅವರ ಬಳಿ ಹೋಗಿ ಕ್ಷಮೆ ಕೇಳಬಾರದು. ರಸೂಲುಲ್ಲಾಹ್(ಸ) ಹೇಳಿದರು. ಹಿಬಾರ್! ಅಲ್ಲಾಹನು ನಿಮ್ಮ ಹೃದಯದಲ್ಲಿ ಇಸ್ಲಾಮಿನ ಪ್ರೀತಿ ಸೃಷ್ಟಿಸಿದಾಗ ನಾನೇಕೆ ನಿನಗೆ ಕ್ಷಮಿಸದಿರಲಿ. ಹೋಗು ನಾನು ನಿನ್ನನ್ನು ಕ್ಷಮಿಸುತ್ತೇನೆ. ಇಸ್ಲಾಮ್ ನಿಮ್ಮ ಎಲ್ಲಾ ಹಿಂದಿನ ಪಾಪಗಳನ್ನು ಅಳಿಸಿ ಹಾಕಿದೆ. (ಅದೇ ಪುಟ 221).

**(ಉಳಿದ ಭಾಗ ಪುಟ ಸಂಖ್ಯೆ 10ರಲ್ಲಿ ಮುಂದುವರಿಸಲಾಗಿದೆ)**

**ಪುಟ ಸಂಖ್ಯೆ 01ರ ಉಳಿದ ಭಾಗ**

ಮಾನವೀಯತೆ ತಲೆ ತಗ್ಗಿಸಬೇಕಾಗುತ್ತದೆ. ಅವರ ಈ ದುಸ್ಸಾಹಸಕ್ಕೆ ಕ್ರೈಸ್ತರ ಆಡಳಿತ ಗರ್ವವಾಗಿದೆ. ಅವರಿಗೆ ಅಷ್ಟು ಲಜ್ಜೆ ಇಲ್ಲ. ಮುಸಲ್ಮಾನರು ಆಡಳಿತದಲ್ಲಿದ್ದಾಗ ಮಸೀಹರ ಗತಿ ನಮಗಿಂತಲೂ ಹೀನವಾಗಿತ್ತು. ಆಗ ಮುಸಲ್ಮಾನರು ಎಂದೂ ಮಸೀಹರ ಬಗ್ಗೆ ದುಷ್ಟ ಪದಗಳನ್ನು ಬಳಸಲಿಲ್ಲ. ಮುಸಲ್ಮಾನರು ಸಾವಿರ ಒಂದು ಸಾವಿರ ವರ್ಷದವರೆಗೆ ಮಸೀಹಿ ದೇಶಗಳ ಮೇಲೆ ಆಡಳಿತ ನಡೆಸಿದ್ದಾರೆ. ಆದರೂ ಅವರ ಮುಖಂಡರನ್ನು ಆದರಿಸಿದರು. ಅಕಟಾ! ಮಸೀಹಿ ಜನರು ಎರಡು, ಮೂರು ನೂರು ವರ್ಷಗಳ ಆಡಳಿತದಲ್ಲೇ ಅಷ್ಟೊಂದು ಅಹಂಕಾರಿಗಳಾಗಿದ್ದಾರೆ. ನಬಿ ಶ್ರೇಷ್ಠರ ಮೇಲೆ ಕ್ರೂರ ಪ್ರಾಣಿಗಳಂತೆ ಆಕ್ರಮಣ ಮಾಡುತ್ತಿದ್ದಾರೆ. ಮುಸಲ್ಮಾನರ ಆ ಉಪಕಾರವನ್ನು ಸ್ವಲ್ಪವಾದರೂ ನೆನೆಯಬೇಕಿತ್ತು. ಅವರು ಯೇಸುವಿನ ವಿರುದ್ಧ ಎಂದೂ ಆಕ್ರಮಣ ಹೆಜ್ಜೆ ಇಡಲಿಲ್ಲ. ಬೇಕಾಗಿದಲ್ಲಿ ಅವರಿಗೆ ಹಕ್ಕಿತ್ತು. ಯೇಸುವಿನ ಬಗ್ಗೆ, ನೀವು ಹಝ್ರತ್ ರಸೂಲುಲ್ಲಾಹ್(ಸ) ರವರಿಗೆ ಹೇಳುವುದಕ್ಕಿಂತ ಹೆಚ್ಚು ಹೇಳಬಹುದಿತ್ತು. (ತಫ್ಸೀರ್ ಕಬೀರ್ ಸಂ 1, ಪುಟ 253)

**ಹಝ್ರತ್ ಆಯಿಷಾ(ರ) ರವರ ವಿವಾಹ 9 ವರ್ಷದಲ್ಲಿ ಆದ ಆಕ್ಷೆಪಕ್ಕೆ ಉತ್ತರ**

ಈಗ ನಾವು, ಪಾದರಿ ಫತಹ ಮಸೀಹನ ಈ ಪ್ರಶ್ನೆ– ಹಝ್ರತ್ ರಸೂಲುಲ್ಲಾಹ್(ಸ) ಈ ಕಾಲಘಟ್ಟದಲ್ಲಿ ಬ್ರಿಟಿಷ್ ಸರಕಾರದ ಆಡಳಿತದಲ್ಲಿರುತ್ತಿದ್ದರೆ ಬ್ರಿಟಿಷ್ ಸರಕಾರ ಅವರೊಡನೆ ಹೇಗೆ ವರ್ತಿಸುತ್ತಿತ್ತು? ಅದೇ ರೀತಿ 9 ವರ್ಷ ವಯಸ್ಸಿನಲ್ಲಿ ವಿವಾಹದ ಆಕ್ಷೇಪ ಬಗ್ಗೆ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ತನ್ನ ಗೌರವಯುತ ಶಬ್ಧಗಳಲ್ಲಿ ಹೀಗೆ ಉತ್ತರ ನೀಡಿದರು.

ನೀವು ಹಝ್ರತ್ ಆಯಿಷಾ(ರ) ರವರ ಬಗ್ಗೆ 9 ವರ್ಷದಲ್ಲಿ ವಿವಾಹ ಕುರಿತು ಬರೆದಿದ್ದೀರಿ. ಮೊದಲನೇ ವಿಷಯವಾಗಿ ಹೇಳಬೇಕಾದರೆ ಹಝ್ರತ್ ರಸೂಲುಲ್ಲಾಹ್(ಸ) ರವರ ಹೇಳಿಕೆಯಿಂದ 9 ವರ್ಷ ಎಂದು ಸಾಬೀತಾಗಿಲ್ಲ. ಅಲ್ಲದೇ ಆ ರೀತಿಯ ದೇವವಾಣಿಯೂ ಇಲ್ಲ. ಪತ್ರಿಕೆಗಳಿಂದಲು ಒಂಭತ್ತು ವರ್ಷವೇ ವಯಸ್ಸಾಗಿತ್ತು ಎಂದಿಲ್ಲ. ಕೇವಲ ಒಬ್ಬ ವರದಿಗಾರನಿಂದ ವರದಿಯಾಗಿದೆ. ಅರಬಿಯರು ಕ್ಯಾಲಂಡರ್ ಇತ್ಯಾದಿ ಇಡುತ್ತಿರಲಿಲ್ಲ. ಏಕೆಂದರೆ ಅವರು ಉಮ್ಮಿ (ಅನಕ್ಷರಸ್ಥ) ಆಗಿದ್ದರು. ಎರಡೂ ಮೂರು ವರ್ಷ ಹೆಚ್ಚು ಕಡಿಮೆ ಎಂದು ಅಂದಾಜಿಸಿ ಹೇಳುವುದು ಒಂದು ಸಾಮಾನ್ಯ ಮಾತಾಗಿದೆ. ಉದಾಹರಣೆಗೆ ನಮ್ಮ ದೇಶದಲ್ಲೂ ಹೆಚ್ಚಾಗಿ ಅನಕ್ಷರಸ್ಥ ಜನರು ಎರಡು ಮೂರು ವರ್ಷಗಳ ವ್ಯತ್ಯಾಸವನ್ನು ಸರಿಯಾಗಿ ನೆನಪಿಡುವುದಿಲ್ಲ. ಆಕಸ್ಮತ್ತಾಗಿ ನಿಜವಾಗಿಯೂ ದಿನ ದಿನಕ್ಕೆ ಲೆಕ್ಕ ಹಾಕಿ 9ವರ್ಷವೇ ಆಗಿತ್ತು ಎಂದು ಒಪ್ಪಿಕೊಳ್ಳೋಣ. ಆದರೂ ಯಾವ ಒಬ್ಬ ವಿವೇಕವಂತನು ಆಕ್ಷೇಪ ಎತ್ತಲಿಕ್ಕಿಲ್ಲ. ಆದರೆ ಮೂಢತನಕ್ಕೆ ಯಾವ ಮದ್ದಿದೆ. ನಾವು ನಿಮಗೆ ತಮ್ಮ ಪತ್ರಿಕೆಯ ಮೂಲಕ ಸಾಬೀತು ಮಾಡಿ ತೋರಿಸುವೆವು. ಪ್ರಸಕ್ತ ಡಾಕ್ಟರುಗಳ ಸಂಶೋಧನೆಗಳಿಂದ ದೃಢಪಟ್ಟಿದೆ. ಒಂಭತ್ತು ವರ್ಷದಲ್ಲೂ ಪ್ರೌಢಾವಸ್ಥೆಗೆ ಬರಬಹುದು. ಅಲ್ಲದೇ 7 ವರ್ಷದಲ್ಲು ಸಂತಾನ ಆಗಬಹುದಾಗಿದೆ. ದೊಡ್ಡ ದೊಡ್ಡ ಸಂಶೋಧನೆಗಳನ್ನು ನಡೆಸಿ ಡಾಕ್ಟರುಗಳು ಸಾಬೀತುಪಡಿಸಿದ್ದಾರೆ. ಸ್ವಯಂ ನೂರಾರು ಜನ ಮೂಖತಃ ನೋಡಿದ್ದಾರೆ. ನಮ್ಮದೇ ದೇಶದಲ್ಲಿ 8, 9 ವರ್ಷಗಳಲ್ಲಿ ಸಂತಾನ ಆಗಿದಿದ್ದೆ. (ನೂರುಲ್ ಖುರ್‌ಆನ್ –2, ರೂಹಾನಿ ಖಝಾಈನ್, ಸಂಪುಟ–9, ಪುಟ–377)

**ಸರಕಾರ ಕಾನೂನು ಪ್ರಕಾರ ವಿವಾಹದ ವಯಸ್ಸು 18 ವರ್ಷವಾಗಿದೆ ಎಂಬ ಆಕ್ಷೇಪಕ್ಕೆ ಉತ್ತರ**

ನಿಮ್ಮ ಮೇಲೆ ವಿಷಾದವು ಇಲ್ಲ. ಇರಬೆಕಾಗಲಿಲ್ಲ ಸಹ. ಏಕೆಂದರೆ ನೀವು ದ್ವೇಷಯುಳ್ಳವರಷ್ಟೇ ಅಲ್ಲ ಪ್ರಥಮ ದರ್ಜೆಯ ಮೂಢರು ಸಹ ಆಗಿದ್ದೀರಿ. ನಿಮಗೆ ಇಷ್ಟು ತಿಳಿದಿಲ್ಲ. ಸರಕಾರದ ಕಾನೂನುಗಳು ಪ್ರಜೆಗಳ ಇಂಗಿತದನ್ವಯ ಮತ್ತು ಸಮಾಜದ ಆಶಯದ ಮೇರೆಗೆ ತಯಾರಿಸಲಾಗುತ್ತದೆ. ಅದರಲ್ಲಿ ತತ್ವಜ್ಞಾನ ರೀತಿಯಲ್ಲಿ ಸಂಶೋಧನೆ ಮಾಡಿ ತಯಾರಿಸಲಾಗುವುದಿಲ್ಲ. ನೀವು ಪದೇ ಪದೇ ಬ್ರಿಟಿಷ್ ಸರಕಾರದ ಮಾತನಾಡುತ್ತೀರಿ. ಈ ನಾವು ಬ್ರಿಟಷ್ ಸರಕಾರಕ್ಕೆ ಕೃತಜ್ಞರಾಗಿದ್ದೇವೆ. ಮತ್ತು ಅದರ ಶುಭಾಕಾಂಕ್ಷಿಗಳಾಗಿದ್ದೇವೆ. ಜೀವನಪರ್ಯಂತ ಇರುವೆವು. ಆದರೆ ಅದಾಗ್ಯೂ ನಾವು ಅದನ್ನು ತಪ್ಪಿನಿಂದ ಮುಕ್ತವಾದರು ಎಂದು ಭಾವಿಸುವುದಿಲ್ಲ. ಅಲ್ಲದೇ ಅವರ ಎಲ್ಲಾ ಕಾನೂನುಗಳು ವೈಜ್ಞಾನಿಕವಾಗಿವೆ ಎಂದು ನಂಬುವುದಿಲ್ಲ, ಬದಲು ಪ್ರಜೆಯ ತತ್ವ ಸಿದ್ಧಾಂತಗಳನ್ನು ಅನುಸರಿಸಿ ಸಿದ್ಧಗೊಳಿಸಲಾಗುತ್ತದೆ. ಸರಕಾರದ ಮೇಲೇನೂ ದೇವವಾಣಿ ಅವತರಿಸುವುದಿಲ್ಲ. ಹೇಗೆ ತಾನೇ ನಾವು ತಪ್ಪಿನಿಂದ ಅತೀತರು ಎಂದು ಭಾವಿಸುವುದು, ಕಾನೂನುಗಳ ಮೇಲೆ ಅಷ್ಟೇ ಭರವಸೆ ಇರುತ್ತಿದ್ದರೆ ಏಕೆ ಯಾವಾಗಲೂ ಹೊಸ ಹೊಸ ಕಾನೂನುಗಳನ್ನು ರಚಿಸುತ್ತಾರೆ. ಬ್ರಿಟಾನಿಯಾದಲ್ಲಿ ಬಾಲಕಿಯರ ಪ್ರೌಢಾವಸ್ಥೆಯ ವಯಸ್ಸು (18) ವರ್ಷ ಎಂದು ಪರಿಗಣಿಸಲಾಗಿದೆ. ಉಷ್ಣಾಂಶ ಹೆಚ್ಚಿರುವ ದೇಶಗಳಲ್ಲಿ ಹುಡುಗಿಯರು ಬೇಗ ಪ್ರೌಢಾವಸ್ಥೆಗೆ ಬರುತ್ತಾರೆ. ನೀವು ಸರಕಾರದ ಕಾನೂನುಗಳನ್ನು ದೈವಿಕವಾಣಿಯಂತೆ ಏನಾದರೂ ಭಾವಿಸಿದಂತಿದ್ದರೆ, ಯಾವ ತಪ್ಪಿಗೆ ಆಸ್ಪದವಿಲ್ಲ ಎಂತಾದರೆ ನಮಗೆ ತಿಳಿಸಿ, ಇಂಜೀಲ್ ಮತ್ತು ಕಾನೂನುಗಳಿಗೆ ತುಲನೆ ಮಾಡಿ ಒಂದಿಷ್ಟು ಸೇವೆ ಮಾಡುವೆವು. ಅಂತೆಯೇ ಸರಕಾರ ಇಲ್ಲಿಯವರೆಗೂ ನಮ್ಮ ಕಾನೂನುಗಳು ಸಹ ತೌರಾತ್ ಮತ್ತು ಇಂಜಿಲ್ ರೀತಿ ಯಾವುದೇ ತಪ್ಪುಗಳಿಂದ ಮುಕ್ತವಾಗಿಲ್ಲ ಎಂದು ಜಾಹೀರಾತು ಪ್ರಕಟಿಸಲಿಲ್ಲ. ನಿಮಗೇನಾದರೂ ತಲುಪಿದರೆ ನಮಗೆ ಒಂದು ಪ್ರತಿ ಕೊಡಿ ಇಲ್ಲ, ಸರಕಾರದ ಕಾನೂನುಗಳು ಸಹ ದೈವಿಕ ಗ್ರಂಥಗಳಂತೆ ತಪ್ಪಿನಿಂದ ಮುಕ್ತವಾಗಿಲ್ಲ ಎಂದಾದರೆ ಅದರ ವಿವರ ನೀಡುವುದು ಮೂರ್ಖತನವಾಗಿದೆ. ಇಲ್ಲ ದ್ವೇಷ ಕಾರಣಗಳಿಂದಾಗಿ ನೀವು ವಿವಶರಾಗಿದ್ದೀರಿ. (ಅದೇ ಪುಟ 378).

**ಯೂರೋಪಿಯನ್ ವೈದ್ಯರ ಸಂಶೋಧನೆ ಪ್ರಕಾರ ಬಾಲಕಿಯರು 9 ವರ್ಷ ಅಲ್ಲದೇ 7 ವರ್ಷದಲ್ಲೂ ಪ್ರೌಢವಸ್ಥೆಗೆ ಬರುತ್ತಾರೆ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು. ಸರಕಾರಕ್ಕೆ ಅಷ್ಟೇ ಭರವಸೆಯಿಂದಿದ್ದರೆ ಏಕೆ ಆ ವೈದ್ಯರಿಗೆ ಶಿಕ್ಷೆ ವಿಧಿಸಲಿಲ್ಲ. ಅವರು ಇತ್ತೀಚಿಗಷ್ಟೇ ಯೂರೋಪಿನಲ್ಲಿ ಸಂಶೋಧನೆಯ ನಂತರ 9 ವರ್ಷ ಅಷ್ಟೇ ಅಲ್ಲ. 7 ವರ್ಷದಲ್ಲೂ ಸಹ ಕೆಲ ಸ್ತ್ರೀಯರು ಪ್ರೌಢಾವಸ್ಥೆಗೆ ಬರುತ್ತಾರೆ ಎಂದು ಘೋಷಿಸಿದ್ದಾರೆ. ನೀವು 9 ವರ್ಷದವರ ಬಗ್ಗೆ ಆಕ್ಷೇಪ ಎತ್ತುತಿದ್ದೀರಿ. ಆದೆ ತೌರಾತ್ ಅಥವಾ ಇಂಜೀಲಿನ ಯಾವ ಪುರಾವೆ ಸಹ ಒದಗಿಸಲಿಲ್ಲ. ಕೇವಲ ಸರಕಾರದ ಕಾನೂನುಗಳ ಬಗ್ಗೆ ವಿವರ ನೀಡಿದ್ದೀರಿ. ಅದರಿಂದ ತಿಳಿದುಬರುವುದೇನೆಂದೆ ತೌರಾತ್ ಮತ್ತು ಇಂಜೀಲಿನ ಮೇಲೆ ನಿಮಗೆ ವಿಶ್ವಾಸವಿಲ್ಲ. ಇಲ್ಲದಿದ್ದರೆ 9 ವರ್ಷಗಳ ಬಗ್ಗೆ ತೌರಾತ್ ಅಥವಾ ಇಂಜೀಲಿನಿಂದ ಸಾಬೀತುಪಡಿಸಬಹುದಾಗಿತ್ತು. ಪಾದರಿ ಸಾಹೇಬ ಅದೇ ಮೋಸಗಾರಿಕೆಯಲ್ಲವೆ, ದೈವಿಕ ಸಮಸ್ಯೆಗಳನ್ನು ನೀವು ಸರಕಾರದ ಕಾನೂನುಗಳ ಮುಂದೆ ಪ್ರಸ್ತುತಪಡಿಸಿದ್ದೀರಿ. (ಅದೇ ಪುಟ 379).

**ಈ ಅವಹೇಳನಕಾರಿ ಪ್ರಶ್ನೆಯ ಪ್ರತ್ಯಾರೋಪಿ ರೀತಿಯ ಉತ್ತರ ಹಝ್ರತ್ ರಸೂಲುಲ್ಲಾಹ್(ಸ) ಈ ಕಾಲಘಟ್ಟದಲ್ಲಿ ಇರುತ್ತಿದ್ದರೆ ಬ್ರಿಟಿಷ್ ಸರಕಾರ ಅವರೊಡನೆ ಏಕೆ ವರ್ತಿಸುತ್ತಿತ್ತು?**

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ.

ನಿಮ್ಮ ದೃಷ್ಟಿಯಲ್ಲಿ ಸರಕಾರದ ಎಲ್ಲಾ ಕಾನೂನುಗಳು ಎಲ್ಲಾ ನ್ಯೂನತೆಗಳಿಂದ ಮುಕ್ತವಾಗಿವೆ ಮತ್ತು ದೈವಿಕ ಗ್ರಂಥಗಳಂತೆ ಬದಲು ಅದಕ್ಕಿಂತ ಶ್ರೇಷ್ಠವಿದೆ ಎಂದಾರೆ ನಾನು ನಿಮ್ಮೊಂದಿಗೆ ಕೇಳುವೆ.

(1) ಆ ಪ್ರವಾದಿಗಳ ಕುರಿತು ಅವರು ಬ್ರಿಟಿಷ್ ಕಾನೂನುಗಳ ವಿರುದ್ಧವಾಗಿ ಎಷ್ಟೋ ಲಕ್ಷ ಮೊಲೆಯುನ್ನುವ ಮಕ್ಕಳನಕ್ಕು ಹತ್ಯೆ ಮಾಡಿರುವರು, ಅವರು ಈ ಸಮಯವಿರುತ್ತಿದ್ದರೆ ಸರಕಾರ ಅವರೊಡನೆ ಯಾವ ರೀತಿ ವರ್ತಿಸುತಿತ್ತು.

(2) ಆ ಜನರು ಚಲಾನ್ ಪಡೆದು, ಅವರು ಅನ್ಯರ ಹೊಲಗಳ ತೆನೆಗಳನ್ನು ಮುರಿದು ತಿನ್ನುತ್ತಿದ್ದರು ಸರಕಾರ ಅವರಿಗೆ ಮತ್ತು ಅವರಿಗೆ ಅನುಮತಿ ನೀಡಿದವರಿಗೆ ಯಾವ ಯಾವ ಶಿಕ್ಷೆ ವಿಧಿಸುತ್ತಿತ್ತು?

(3) ಮತ್ತೆ ನಾನು ಕೇಳುವೆನು ಆ ವ್ಯಕ್ತಿ ಅಂಜೀರ್ ತಿನ್ನಲು ಧಾವಿಸಿದ್ದ. ಇಂಜೀಲಿನಿಂದ ಸಾಬೀತಾಗಿದೆ ಆ ಅಂಜೀರದ ಮರ ಅವರ ಆಸ್ತಿಯಾಗಿರಲಿಲ್ಲ. ಬದಲು ಅನ್ಯರ ಆಸ್ತಿಯಾಗಿತ್ತು. ಆ ವ್ಯಕ್ತಿ ಸರಕಾರದ ಮುಂದೆ ಈ ಕಾರ್ಯ ಮಾಡುತ್ತಿದ್ದರೆ ಯಾವ ಶಿಕ್ಷೆ ಕೊಡುತ್ತಿದ್ದೀರಿ?

(4) ಇಂಜೀಲಿನಿಂದ ಇದು ಸಹ ಸಾಬೀತಾಗಿದೆ. ಹಲವು ಅನ್ಯರ ಸಂಪತ್ತಾದ ಹಂದಿಗಳನ್ನು, (ಪಾದರಿ ಕ್ಲಾರ್ಕ್ ಹೇಳೀಕೆ ಪ್ರಕಾರ ಅದರ ಸಂಖ್ಯೆ 2 ಸಾವಿರದವರಗೆ ಇತ್ತು.) ಮಸೀಹನು ನಾಶಪಡಿಸಿದನು. ಈಗ ನೀವೇ ಹೇಳಿರಿ. ಕಾನೂನಿನ ಪ್ರಕಾರ ಅವರಿಗೆ ಯಾವ ಶಿಕ್ಷೆ ಇದೆ?

ಅಂತಿಮವಾಗಿ ಇಷ್ಟೇ ಬರೆದಿದ್ದು ಸಾಕೆನಿಸುತ್ತದೆ. ಉತ್ತರ ಅವಶ್ಯವಾಗಿ ಬರೆಯಬೇಕು. ಇನ್ನು ಹಲವು ಪ್ರಶ್ನೆಗಳಿವೆ.

**ಪಾದರಿ ಫತಹ ಮಸೀಹನಿಗೆ ಉಪದೇಶ. ಇಂತಹ ಆರೋಪ ಮಾಡುವುದರಿಂದ ದೂರ ಇರಬೇಕಾಗಿದೆ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು. ಪಾದರಿ ಸಾಹಿಬ್ ನಿಮ್ಮ ಈ ಭಾವನೆ 9 ವರ್ಷದ ಹುಡುಗಿಯೊಡನೆ ಸಂಪರ್ಕ ಮಾಡುವುದು ವ್ಯಭಿಚಾರವಾಗಿದೆ ಎಂಬುದು ಅಪ್ಪಟ ತಪ್ಪಾಗಿದೆ. ನೀವು ಏನಾದರೂ ಇಂಜೀಲಿನಿಂದ ಸಾಬೀತುಪಡಿಸುತ್ತಿದ್ದರೆ ನಿಮ್ಮ ವಿಶ್ವಾಸಕ್ಕೆ ಬೆಲೆ ಸಿಗುತ್ತಿತ್ತು. ಇಂಜೀಲಿನಿಂದ ನಿಮಗೆ ಮುಖಭಂಗವಾಗಿದೆ. ಅಲ್ಲಿ ಕೈ ನಡೆಯಲಿಲ್ಲದ ಕಾರಣ ಸರಕಾರದ ಕಾಲುಗಳಲ್ಲಿ ಬಂದು ಬಿದ್ದೀರಿ. ನೆನಪಿಡಬೇಕು. ಈ ಬೈಗಳಗಳೆಲ್ಲ ಶೈತಾನಿನ ದ್ವೇಷವಾಗಿದೆ. ಪವಿತ್ರ ಪ್ರವಾದಿಯ ಬಗ್ಗೆ ಇಲ್ಲಸದಲ್ಲದ ಆರೋಪ ಹಚ್ಚುವುದು ಮಿಥ್ಯ ಹಾಗೂ ಶೈತಾನಿನ ಕಾರ್ಯವಾಗಿದೆ. ಆ ಎರಡು ಪವಿತ್ರ ಪ್ರವಾದಿಗಳ ಮೇಲೆ ಅಂದರೆ ಹಝ್ರತ್ ರಸೂಲುಲ್ಲಾಹ್(ಸ) ಮತ್ತು ಹಝ್ರತ್ ಮಸೀಹ್(ಅ) ಅವರ ಮೇಲೆ ಕೀಳುಜಾತಿಯವರು ಮತ್ತು ದುಷ್ಟರೆಂದು ಕಠಿಣವಾದ ಸುಳ್ಳು ಆರೋಪಗಳನ್ನು ಮಾಡಿರುತ್ತಾರೆ. ಅಂದ ಹಾಗೆ ಆ ದುಷ್ಟರು "ಲಅನತುಲ್ಲಾಹಿ ಅಲೈಹಿಂ" ಮೊದಲು ನಬಿ(ಸ) ರವರನ್ನು ವ್ಯಭಿಚಾರಿ ಎಂದು ಹೇಳಿದ್ದೀರಿ. ಹಾಗೆಯೇ ನೀಮ್ಮ ಬಗ್ಗೆ ಇನ್ನೊಬ್ಬರು "ಎಲದುಜಿನಾ" ಅಕ್ರಮ ಸಂತಾನದಂತಹ ಅಪವಿತ್ರ ಶಬ್ಧವನ್ನು ಯಹೂದ್ಯರು ಬಳಸಿದ್ದಾರೆ. ನೀವು ಇಂತಹ ಅಪವಾದ ಹೊರಿಸುವುದರಿಂದ ದೂರವಿರಿ. (ಅದೇ ಪುಟ 680).

**ಅವಹೇಳನದಿಂದ ತುಂಬಿದ ವಾಸ್ತವಿಕ ಮತ್ತು ಗಾಂಭಿರ್ಯಯುಳ್ಳ ಉತ್ತರ, ಹಝ್ರತ್ ರಸೂಲುಲ್ಲಾಹ್(ಸ) ಈ ಕಾಲದಲ್ಲಿರುತ್ತಿದ್ದರೆ ಬ್ರಿಟಿಷ್ ಸರಕಾರ ಅವರೊಡನೆ ಹೇಗೆ ವರ್ತಿಸುತಿತ್ತು?**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಪಾದರಿ ಸಾಹೇಬ್ ನಿಮ್ಮ ಈ ಪ್ರಶ್ನೆ ಇಂದು ಹಝ್ರತ್ ರಸೂಲುಲ್ಲಾಹ್(ಸ) ರವರಂತಹ ವ್ಯಕ್ತಿ ಬ್ರಿಟಿಷ್ ಸರಕಾರದ ಕಾಲದಲ್ಲಿರುತ್ತಿದ್ದರೆ, ಸರಕಾರ ಅವರೊಡನೆ ಹೇಗೆ ವರ್ತಿಸುತಿತ್ತು. ನಿಮಗೆ ತಿಳಿದಿರಲಿ. ಆ ಲೋಕಗಳ ಸರದಾರ ಈ ಸರಕಾರದ

ಕಾಲದಲ್ಲಿರುತ್ತಿದ್ದರೆ, ಈ ಶುಭಾಕಾಂಕ್ಷಿ ಸರಕಾರ ಅವರನ್ನು ಸನ್ಮಾನಿಸುವುದು ತಮ್ಮ ಕರ್ತವ್ಯ ಎಂದು ಗೌರವಪಡುತಿತ್ತು. ಅಂದ ಹಾಗೆ ಖೈಸರ ರೋಮು (ರೋಮಿನ ಅರಸ) ಕೇವಲ ಅವರ ಚಿತ್ರ ನೋಡಿ ಎದ್ದು ನಿಂತಿದ್ದರು. ಇದು ನಿಮ್ಮ ದೌರ್ಭಾಗ್ಯ ಹಾಗೂ ಅಸಮರ್ಥತೆಯಾಗಿದೆ. ಈ ಸರಕಾರದ ಮೇಲೆ ಅನುಮಾನಪಡುತ್ತಿದ್ದೀರಿ. ನೀವು ಸರಕಾರವನ್ನು ದೈವಿಕ ಪುರುಷರ ಶತ್ರು ಎಂದು ಭಾವಿಸಿದ್ದೀರಿ. ಈ ಸರಕಾರ ಈ ಕಾಲಘಟ್ಟದಲ್ಲಿ ಕಿರಿಯರಾದ ಮುಸಲ್ಮಾನರಿಗೆ ಸಹ ಗೌರವ ನೀಡುತ್ತಿದೆ. ನೋಡಿ ನಸ್ರುಲ್ಲಾಹ್ ಖಾನ್ ಅವರು ನಮ್ಮ ಸೇವೆಯಲ್ಲಿರುವರು, ಅವರೇನು ಉನ್ನತ ದರ್ಜೆ ಹೊಂದಿಲ್ಲ. ನಮ್ಮ ಈ ಸರಕಾರ ಅವರನ್ನು ಎಂತಹ ಗೌರವ ನೀಡಿದೆ. ಆ ಪವಿತ್ರ ಪ್ರವಾದಿ ಇಹಲೋಕದಲ್ಲೂ ರಾಜರು ಮಹಾರಾಜರು ಸಹ ಅವರ ಕಾಲುಗಳಲ್ಲಿ ಬೀಳುತ್ತಿದ್ದರು. ಅವರು ಈ ಸಮಯದಲ್ಲಿರುತ್ತಿದ್ದರೆ ನಿಸ್ಸಂಶಯವಾಗಿ ಈ ಸರಕಾರ ಅವರೊಡನೆ ಅತ್ಯಂತ ಗೌರವದಿಂದ ವರ್ತಿಸುತ್ತಿತ್ತು. ದೈವಿಕ ಸರಕಾರಗಳ ಮುಂದೆ ಮಾನವ ಸರಕಾರಗಳಿಗೆ ತಲೆಬಾಗದೆ ಬೇರೆ ದಾರಿ ಇಲ್ಲ. ನಿಮಗೆ ತಿಳಿದಿಲ್ಲವೆ, ಖೈಸರ್ ರೋಮು (ರೋಮು ದೊರೆ) ಅವರು ಆಗ ಕ್ರೈಸ್ತ ರಾಜರಾಗಿದ್ದರು.  ಘನತೆ ಗೌರವಗಳಲ್ಲಿ ಯಾವ ಕೊರತೆಯೂ ಇರಲಿಲ್ಲ. ಹೇಳುತ್ತಾರೆ. ನನಗೆ ಆ ಮಹಾನ್ ಪ್ರವಾದಿಯ ಸಹವಾಸ ದೊರೆಯುತ್ತಿದ್ದರೆ ಅವರ ಕಾಲುಗಳನ್ನು ತೊಳೆಯುವುದು ನನ್ನ ಗೌರವ ಎಂದು ಭಾವಿಸುತ್ತಿದ್ದೆ. ಇದು ಖೈಸರ ರೋಮನ ಹೇಳಿಕೆಯಾಗಿದೆ. ನಿಶ್ಚಯವಾಗಿಯೂ ಈ ಅದೃಷ್ಟವಂತ ಸರಕಾರ ಅದೇ ಮಾತು ಹೇಳುತಿತ್ತು. ಬದಲು ಅದಕ್ಕಿಂತ ಮಿಗಿಲಾಗಿ ಹೇಳುತ್ತಿತ್ತು.

"ಒಂದು ಸಾವಿರ ರೂಪಾಯಿಯ ವೈಭವಯುತ ಬಹುಮಾನದ ಪಂಥ್ವಾನ" ದಲ್ಲಿ ಹೇಳಿದರು. ಯಾವ ರೀತಿ ಹಝ್ರತ್ ರಸೂಲುಲ್ಲಾಹ್(ಸ) ರವರ ಕುರಿತು ಖೈಸರ ರೋಮರು ಹೇಳಿದ್ದಾರೆ. ಹಝ್ರತ್ ಮಸೀಹನ ಕುರಿತು ಆ ಸಮಯದ ಒಬ್ಬ ಕಿರಿಯ ಜಾಗೀರದಾರನಾದರು ಸರಿ ಇಂತಹ ಹೇಳಿಕೆ ನೀಡಿದ್ದು ಇದ್ದರೆ ಅದು ಇಲ್ಲಿಯವರೆಗಿನ ಇತಿಹಾಸದಲ್ಲಿ ಮತ್ತು ಸಹಿ ಹದೀಸುಗಳಲ್ಲಿ ಬರೆದಿದ್ದರೆ. ನಾವು ನಿಮಗೆ ಈಗಲೇ ಸಾವಿರ ರೂಪಾಯಿ ನಗದು ಬಹುಮಾನ ರೂಪದಲ್ಲಿ ಕೊಡುವೆವು. ನೀವು ಸಾಬೀತು ಮಾಡಿ ತೋರಿಸಬೇಕು. ಸಾಬೀತು ಮಾಡಿ ತೋರಿಸಲಿಲ್ಲ ಎಂದಾದರೆ ಇಂತಹ ಅಪಮಾನಿತ ಜೀವನಕ್ಕಿಂತ ಸಾಯುವುದೇ ಲೇಸು. ಏಕೆಂದರೆ ನಾವು ಸಾಬೀತುಪಡಿಸಿದೆವು. ಖೈಸರ ರೋಮು ಈ ಕಾಲದ ಘನ ಸರಕಾರದ ತುಲ್ಯವಾಗುವ ಬದಲು ಇತಿಹಾಸದಿಂದ ತಿಳಿದುಬರುತ್ತದೆ. ಆ ಕಾಲದಲ್ಲಿ ಅವರ ಶಕ್ತಿ ಸಾಮರ್ಥ್ಯದವರು ಯಾರೂ ಇರಲಿಲ್ಲ. ನಮ್ಮ ಸರಕಾರವಂತೂ ಆ ದರ್ಜೆಗೆ ತಲುಪಲಿಲ್ಲ. ಅದಾಗ್ಯೂ ಖೈಸರನು ದೊರೆಯಾಗಿಯೂ ತನ್ನ ಆಶೆ ವ್ಯಕ್ತಪಡಿಸುತ್ತಾರೆ. ಅಕಟಾ! ನಾನು ಅವರ ಸಹವಾಸದಲ್ಲಿದ್ದರೆ ಅವರ ಕಾಲು ತೊಳೆಯುತ್ತಿದೆ. ಈ ಸರಕಾರ ಅದಕ್ಕಿಂತ ಕಡಿಮೆ ಮಾಡುತ್ತಿದೆ. ನಾನು ದಾವೆ ಹೂಡಿ ಹೇಳುತ್ತೇನೆ ಅವಶ್ಯವಾಗಿ. ಈ ಸರಕಾರವು ಸಹ ಇಂತಹ ಬಾದಶಾಹನ ಕಾಲುಗಳಲ್ಲಿ ಬೀಳುವುದು ತನ್ನ ಗೌರವ ಎಂದು ಭಾವಿಸುತ್ತಿತ್ತು. ಏಕೆಂದರೆ ಈ ಸರಕಾರ ದೈವಿಕ ಸರಕಾರದ ವಿರುದ್ಧವಿಲ್ಲ. ಅದರ ಶಕ್ತಿಗಳ ಮುಂದೆ ಮನುಷ್ಯನು ಒಂದು ಸತ್ತ ಕ್ರಿಮಿಯ ಸಮಾನವೂ ಇಲ್ಲ. ಹೌದು ಅಂತಹ ವ್ಯಕ್ತಿಯೊಬ್ಬನು ನಾನು ದೇವನು, ದೇವಪುತ್ರನು ಎಂದು ಹಾರಾಡುವ ಪ್ರಶ್ನೆ ಎದುರಾಗುತ್ತಿದ್ದರೆ ಸರಕಾರ ಅದರ ನಿವಾರಣೆಗಾಗಿ ಏನು ಮಾಡುತ್ತಿತ್ತು? ಅದರ ಉತ್ತರ ಆಗಿದೆ. ಈ ಕೃಪಾಧಾರಿತ ಸರಕಾರ ಅವನನ್ನು ಯಾವುದೇ ವೈದ್ಯನೊಬ್ಬನಿಗೆ ಅವನ ಮಾನಸಿಕ ಚಿಕಿತ್ಸೆಗಾಗಿ ಒಪ್ಪಿಸುತಿತ್ತು. ಅಥವಾ ಆ ಅರಮನೆಗಳಲ್ಲಿ ಸುರಕ್ಷಿತವಾಗಿಡುತ್ತಿತ್ತು. ಇದೀಗ ಲಾಹೋರಿನಲ್ಲಿ ಈ ತರಹದ ಸುಮಾರು ಜನರು ಒಟ್ಟಾಗಿದ್ದಾರೆ (ಅದೇ ಪುಟ 382)

**ಹಝ್ರತ್ ರಸೂಲುಲ್ಲಾಹ್(ಸ) ಮತ್ತು ಮಸೀಹನ ಸ್ಥಾನಮಾನದಲ್ಲಿ ಘನವಾದ ಅಂತರವಿದೆ. ಒಂದು ವೈಭವಯುತ ತುಲನೆ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು.**

ನಾವು ಹಝ್ರತ್ ಮಸೀಹ್ ಮತ್ತು ಜನಾಬ್ ಖಾತಮುಲ್ ಅಂಬಿಯಾ(ಸ) ಇಬ್ಬರ ನಡುವೆ ಈ ಮಾತಿನಲ್ಲಿ ತುಲನೆ ಮಾಡಿ ನೋಡಿದರೆ ಆ ಕಾಲದ ಸರಕಾರಗಳು ಅವರೊಡನೆ ಯಾವ ರೀತಿ ವರ್ತಿಸಿದರು.  ಅವರ ದೈವಿಕ ಪ್ರತಾಪ ಅಥವಾ ದೈವಿಕ ಪುಷ್ಟಿ ಅವರ ಮೇಲೆ ಯಾವ ರೀತಿಯ ಪ್ರಭಾವ ಬೀರಿತು. ನಮಗೆ ಸಾಕ್ಷ್ಯ ವಹಿಸಬೇಕಾಗುವುದು ಹಝ್ರತ್ ಮಸೀಹರ ಎದುರು ಪವಿತ್ರ ಪ್ರವಾದಿಗಳಾದ ಖಾತಮಲ್ ಅಂಬಿಯಾ ಮುಂದೆ ಅವರ ದೇವತ್ವ ಒಂದೆಡೆ ಇರಲಿ. ಪ್ರವಾದಿತ್ವದ ಘನತೆ ಉಳಿಯುವುದಿಲ್ಲ ನಬಿ(ಸ) ರವರ ಪತ್ರಗಳು ದೊರೆಗಳಿಗೆ ತಲುಪಿದಾಗ ಖೈಸರ ರೋಮನು ವಿಷಾದ ವ್ಯಕ್ತಪಡಿಸುತ್ತಾ ಹೇಳಿದನು. ಅಕಟಾ!  ನಾನು ಕ್ರೈಸ್ತರ ಕಪಿಮುಷ್ಟಿಯಲ್ಲಿದ್ದೇವೆ. ಇಲ್ಲಿಂದ ಹೊರಡುವ ಸಂದರ್ಭವಿದ್ದಿದ್ದರೆ ನಾನು ಅವರ ಸೇವಕರಲ್ಲಿ ಸೇವಕರಂತೆ ಹಾಜರಾಗಿ ಅವರ ಪವಿತ್ರ ಪಾದಗಳನ್ನು ತೊಳೆಯುತ್ತಿದ್ದೆ. ಆದರೆ ದುಷ್ಟನೊಬ್ಬನು ಕಿಸ್ರಾಯೆ ಇರಾನ್ (ಇರಾನ್ ದೊರೆ)  ಕೋಪ್ರೋದ್ರೇಕವಾಗಿ ಅವರನ್ನು ಸೆರೆ ಹಿಡಿದು ತರಲು ಪೇದೆಗಳನ್ನು ಕಳುಹಿಸಿದನು. ಅವರು ಸಂಜೆಯ ವೇಳೆಗೆ ತಲುಪಿದರು. ಹೇಳಿದರು. ನಿಮಗೆ ಸೆರೆ ಹಿಡಿಯುವ ಆದೇಶವಿದೆ.  ಅವರು ಈ ಮಾತಿಗೆ ಅಲಕ್ಷ್ಯಪಡುತ್ತಾ ಹೇಳಿದರು. ನೀವು ಇಸ್ಲಾಮ್ ಸ್ವೀಕರಿಸಿರಿ. ಆ ಸಮಯ ಅವರು ಕೇವಲ ಇಬ್ಬರು ನಾಲ್ಕು ಸಿಷ್ಯರೊಂದಿಗಷ್ಟೇ ಮಸೀದಿಯಲ್ಲಿ ಕುಳಿತುಕೊಂಡಿದ್ದರು. ಆದರೆ ದೈವಿಕ ಪ್ರತಾಪದ ಪ್ರಭಾವದಿಂದಾಗಿ ಅವರಿಬ್ಬರು ಬೇದಿನ ಬೆತ್ತದ ಹಾಗೆ ಕಂಪಿಸುತ್ತಿದದರು. ಕೊನೆಗೆ ಅವರು ಹೇಳಿದರು. ನಮ್ಮ ಖುದಾವಂದು (ಪ್ರಭೂ) ವಿನ ಆದೇಶವಿದೆ. ನಿಮ್ಮನ್ನು ಸೆರೆ ಹಿಡಿಯಬೇಕೆಂದು ಅದಕ್ಕೆ ನಿಮ್ಮ ಉತ್ತರವೇನು, ನಾವು ಆ ಉತ್ತರವನ್ನೇ ಕೊಡುವೆವು. ಹಝ್ರತ್ ನಬಿ(ಸ) ಹೇಳಿದರು. ಅದಕ್ಕೆ ನಾಳೆ ನಾನು ಉತ್ತರ ನೀಡುವೆನು. ಮರುದಿನ ಮತ್ತೆ ಅವರು ಹಾಜರಾದರು. ಆಗ ರಸೂಲುಲ್ಲಾಹ್(ಸ) ಹೇಳಿದರು. ಯಾರನ್ನು ನೀವು ಪ್ರಭೂ ಎನ್ನುತ್ತೀರಲ್ಲ. ಅವನು ಪ್ರಭೂ ಅಲ್ಲ. ಪ್ರಭುವಿಗೆ ಎಂದೂ ಸಾವು ಮತ್ತು ವಿನಾಶ ಉಂಟಾಗುವುದಿಲ್ಲ. ಆದರೆ ನಿಮ್ಮ ಪ್ರಭೂ ಇಂದು ರಾತ್ರಿ ಹತ್ಯೆಯಾಗಿರುತ್ತಾನೆ. ನನ್ನ ಸತ್ಯ ಪ್ರಭುವಾದ ಆ ದೇವನು ಅವನ ಪುತ್ರ ಶೇರ್ವಿಯನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿದ್ದಾನೆ. ಅಂದ ಹಾಗೆ ಅವನು ಇಂದು ರಾತ್ರಿ ಅವನ ಕೈಯಿಂದಲೇ ಹತ್ಯೆಯಾಗಿರುವನು. ಅದೇ ನನ್ನ ಉತ್ತರವಾಗಿದೆ. ಇದೊಂದು ದೊಡ್ಡ ಪವಾಡವಾಗಿತ್ತು. ಅದನ್ನು ಕಂಡು ಆ ದೇಶದ ಸಾವಿರಾರು ಜನರು ವಿಶ್ವಾಸ ತಂದರು. ಏಕೆಂದರೆ ಅದೇ ರಾತ್ರಿ ವಾಸ್ತವವಾಗಿ ಖುಸ್ರೋ ಪರವೇಝ್ ಅಂದರೆ ಇರಾನಿನ ದೊರೆ ಕೊಲ್ಲಲ್ಪಟ್ಟಿದ್ದನು. ಬದಲು ಸಹೀ ಹದೀಸುಗಳ ಹಾಗೂ ಇತಿಹಾಸದ ಸಾಕ್ಷ್ಯ ಮತ್ತು ವಿರೋಧಿಗಳ ಸಮ್ಮತಿಯೊಂದಿಗೆ ಸಾಬೀತಾಗಿದೆ. ಅಂದ ಹಾಗೆ ಡೇವಿನ್ ಫೋರ್ಟ್ ಸಾಹಿಬ್ ಸರ್ ಈ ಘಟನೆಯನ್ನು ತನ್ನ ಗ್ರಂಥದಲ್ಲಿ ಬರೆದಿರುತ್ತಾರೆ ಆದರೆ ಆ ಸಮಯದ ದೊರೆಗಳ ಮುಂದೆ ಹಝ್ರತ್ ಮಸೀಹರ ಗೌರವವೇನಿತ್ತು. ನಿಮ್ಮಿಂದ ಗೌಪ್ಯವೇನಿಲ್ಲ. ಆ ಪುಟಗಳು ಬಹುಶಃ ಇಂದಿಗೂ ಇಂಜೀಲಿನಲ್ಲಿರಬೇಕು. ಅದರಲ್ಲಿ ಬರೆಯಲಾಗಿದೆ. ಹೇರೋಡಸನು ಹಝ್ರತ್ ಮಸೀಹರನ್ನು ಅಪರಾಧಿಯ ರೀತಿ ಪಿಲಾತೂಸಿನ ಮುಂದೆ ಚಾಲಾನ್ ಮಾಡಿದನು ಮತ್ತು ಒಂದು ಅವಧಿಯವರೆಗೆ ರಾಜರ ಜೈಲಿನಲ್ಲಿದ್ದರು. ಅವರ ಯಾವ ದೇವತ್ವವು ನಡೆಯಲಿಲ್ಲ ಮತ್ತು ಯಾವ ದೊರೆಯು ಅವರ ಪೈಕಿ ಹೀಗೆ ಹೇಳಲಿಲ್ಲ. ನನ್ನ ಗೌರವವಾಗಿದೆ ಎಂದು. ನಾನು ಅವರ ಸೇವೆಯಲಿರುತ್ತಿದ್ದರೆ ಅವರ ಪಾದಗಳನ್ನು ತೊಳೆಯುತ್ತಿದ್ದೆ ಎನ್ನುವ ಬದಲು ಪಿಲಾತೂಸನು ಯಹೂದ್ಯರಿಗೆ ಒಪ್ಪಿಸಿದನು. ಅದೇ ಅವರ ದೇವತ್ವ ಆಗಿದೆಯೇ ವಿಚಿತ್ರ ತುಲನೆಯಿದೆ, ಉಭಯೇತರಿಗೂ ಒಂದೇ ರೀತಿಯ ಘಟನೆ ಎದುರಾಗಿದೆ, ಫಲಿತಾಂಶ ಮಾತ್ರ ಒಬ್ಬರಿಂದ ಒಬ್ಬರಿಗೆ ತೀರ ಭಿನ್ನವಾಗಿದೆ. ಒಬ್ಬರನ್ನು ಸೆರೆ ಹಿಡಿಯಲು ಸರ್ವಾಧಿಕಾರಿ ಅಹಂಕಾರಿ ಶೈತಾನನ್ನು ಕ್ರೋಪೋದ್ರೋಕವಾಗಿ ಮುಂದಾಗುವುದು ಮತ್ತು ಕೊನೆಗೆ ಸ್ವಯಂ ದೈವಿಕ ಶಾಪಕ್ಕೆ ಗುರಿಯಾಗಿ ತನ್ನ ಪುತ್ರನ ಕೈಯಲ್ಲಿಯೇ ಅತ್ಯಂತ ಹೀನ ರೀತಿಯಲ್ಲಿ ಕೊಲ್ಲಲ್ಪಡುತ್ತಾನೆ. ಇನ್ನೊಬ್ಬನ ಸ್ಥಿತಿ ಅವನ ಅಸಲು ದಾವೆ ಹೊರತುಪಡಿಸಿ ಅತಿಶಯೋಕ್ತಿಗೈದು ಅವನನ್ನು ಆಕಾಶಕ್ಕೇರಿಸಿದ್ದಾರೆ. ನಿಜವಾಗಿಯೂ ಸೆರೆ ಹಿಡಿಯಲ್ಪಡುವುದು. ಚಾಲಾನ್ ಮಾಡಲಾಗುತ್ತದೆ ಮತ್ತು ವಿಚಿತ್ರ ರೀತಿಯಲ್ಲಿ ದೌರ್ಜನ್ಯಕರ ಪೋಲೀಸರು ಒಂದು ನಗರದಿಂದ ಇನ್ನೊಂದು ನಗರದ ಜೈಲುಗಳಿಗೆ ಹಸ್ತಾಂತರಿಸುತ್ತಾರೆ. ಅಕಟಾ! ಇದು ಬುದ್ಧಿವಂತರ ಆಲವಾಗಿದೆ. ಪ್ರಗತಿಯ ಕಾಲವಾಗಿದೆ. ಅಂತಹ ನಿರರ್ಥಕ ವಿಶ್ವಾಸವೇಕೆ, ನಾಚಿಕೆ! ನಾಚಿಕೆ! ನಾಚಿಕೆ. (ಅದೇ ಪುಟ 384).

**ಖೈಸರನು ಪಾದಗಳನ್ನು ತೊಳೆಯಲು ಇಚ್ಛಿಸುವ ಹದೀಸಿನ ವಿವರ**

"ಖೈಸರನ ರೋಮನು ಜನಾಬ್ ರಸೂಲುಲ್ಲಾಹ್(ಸ) ರವರ ಪಾದಗಳನ್ನು ತೊಳೆಯುತ್ತಿದ್ದೆ ಎಂಬ ವಿವರ ಯಾವ ಗ್ರಂಥದಲ್ಲಿದೆ ಎಂದು ಪ್ರಶ್ನೆ ಮಾಡಿದರೆ, ಅದರ ಉತ್ತರವಾಗಿ ನಿಮ್ಮನ್ನು "ಅಸಹಲ್ ಕುತುಬ್ ಬಾದ್ ಕಿತಾಬುಲ್ಲಾಹ್ ಸಹೀ ಬುಖಾರಿ" (ದೇವಗ್ರಂಥಧ ನಂತರ ನಂಬಲಾರ್ಹ ಹದೀಸ್ ಗ್ರಂಥ ಬುಖಾರಿ) ಯ ಬರಹ ಮುಂದಿಡುತ್ತೇನೆ. ಸ್ವಲ್ಪ ಕಣ್ಣು ತೆರೆದು ನೋಡಿ ಅದು ಇಂತಿದೆ:


**ವಖದ್‌ಕುನ್ತು ಆಲಮು ಅನ್ನಹೂ ಖಾರಿಜುನ್ ವಲಮ್ ಅಕು ಅಝುನ್ನು ಅನ್ನಹೂ ಮಿನ್ಕುಮ್ ಫಲೌ ಅನ್ನಿ ಅಲಮು ಅನ್ನಿ ಅಖ್ಲುಸು ಇಲೈಹಿ ಲತಜಶ್ಶಮ್‌ತು ಲಿಖಾಅಹೂ ವಲೌ ಕುನ್ತು ಇಂದಹೂ ಲಗಸಲ್ತು ಅನ್‌ಖದ್‌ಮೈಹೀ** ಅನುವಾದ: ಅಂದರೆ, ಅಂತ್ಯಕಾಲಗಟ್ಟದ ಪ್ರವಾದಿಯೊರ್ವರು ಬರುವರೆಂಬ ಜ್ಞಾನವೇನಿತ್ತು. ಆದರೆ ಅವರು ನಿಮ್ಮಲ್ಲಿ (ಅರಬರಲ್ಲಿ) ಜನ್ಮ ತಾಳುವರು ಎಂಬ ಜ್ಞಾನವಿರಲಿಲ್ಲ. ನಾನು ಅವರ ಸೇವೆಯಲ್ಲಿ ಹಾಜರಾಗುವಂತಿದ್ದರೆ ಶಕ್ತಿಮೀರಿ ಅವರನ್ನು ಕಾಣಲು ಪ್ರಯತ್ನ ಮಾಡುತ್ತಿದ್ದೆ. ನಾನು ಅವರ ಸನ್ನಿಧಿಯಲ್ಲಿರುತ್ತಿದ್ದರೆ ಅವರ ಪಾದಗಳನ್ನು ತೊಳೆಯುತ್ತಿದ್ದೆ." ಇದೀಗ ನಿಮ್ಮಲ್ಲಿ ಏನಾದರು ನಾಚಿಕೆಯಿದ್ದರೆ ತೋರಿಸಿರಿ. ಮಸೀಹರಿಗಾಗಿ ಯಾವ ದೊರೆಯು ಈ ರೀತಿಯ ಗೌರವ ವ್ಯಕ್ತಪಡಿಸಿರುವರು. ಅದನ್ನು ತೋರಿಸಿಕೊಟ್ಟರೆ ನಗದು ಸಾವಿರ ರೂಪಾಯಿಗಳನ್ನು ನಮ್ಮಿಂದ ಪಡೆಯಿರಿ. ಬೇರೆ ಯಾವುದರಿಂದ ಅಲ್ಲದಿದ್ದರೂ ಕನಿಷ್ಟಪಕ್ಷ ಇಂಜೀಲಿನಿಂದಲೇ ಪ್ರಸ್ತುತಪಡಿಸಿ. ಎಲ್ಲೋ ಬಿದ್ದ ಹಾಳೆಯಿಂದಾದರೂ ಪ್ರಸ್ತುತಪಡಿಸಿ, ಯಾವನೋ ದೊರೆ, ಅಮೀರ್, ಇಲ್ಲದಿದ್ದರೂ ಕಿರಿಯ ನವಬನದ್ದದಾರೂ ಇದ್ದರೆ ಪ್ರಸ್ತುತಪಡಿಸಿ. ನೆನಪಿಡಿರಿ. ನಿಶ್ಚಿತವಾಗಿಯೂ ಪ್ರಸ್ತುತಪಡಿಸಲಾರಿರಿ. ಅಂದ ಹಾಗೆ ಇದು ನರಕ ಶಿಕ್ಷೆಯಿಂದ ಕಡಿಮೆಯೇನೂ ಇಲ್ಲ.  ನೀವು ಮಾತನ್ನು ಎತ್ತಿ ನೀವೇ ಅಪರಾಧಿ ಆಗಿದ್ದೀರಿ. ಭೇಷ್! ಭೇಷ್! ಭೇಷ್! ಒಳ್ಳೆಯ ಪಾದರಿಗಳಾಗಿದ್ದೀರಿ. (ಅದೇ ಪುಟ 386).

ಮುಂದೆ ಇನ್‌ಶಾ ಅಲ್ಲಾಹ್ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಇನ್ನೊಂದು ಬಹುಮಾನದ ಪಂಥ್ವಾನ ನಾವು ಓದುಗರ ಸೇವೆಯಲ್ಲಿ ಪ್ರಸ್ತುತಪಡಿಸುವೆವು.    **(ಮನ್ಸೂರ್ ಅಹ್ಮದ್ ಮಸ್ರೂರ್)**

*********************

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.


## ನಾವು ಯಾವಾಗಲೂ ನಮ್ಮ ಪ್ರೀತಿಯ ಯಜಮಾನನನ್ನು ನಮಗಾಗಿ ಉತ್ತಮ ಮಾದರಿಯನ್ನಾಗಿರಿಸುತ್ತೇವೆ



ಹಝ್ರತ್ ಖಲೀಫತುಲ್ ಮಾಸಿಹ್ ಸಾಲಿಸ್(ರ) ನುಡಿಯುತ್ತಾರೆ:

"ನಾವು ಉದಾತ್ತ ಪ್ರವಾದಿ(ಸ) ಅವರನ್ನು ನಮ್ಮ ಮಾರ್ಗದರ್ಶಕ ಹಾಗೂ ನಾಯಕರನ್ನಾಗಿ ಸ್ವೀಕರಿಸಿದ್ದೇವೆ. ಮತ್ತು ಕಾರುಣ್ಯನಿಧಿಯಾದ ಅಲ್ಲಾಹನ ಆಜ್ಞೆಗೆ ವಿಧೇಯರಾಗಿ ಆತನ ಸಂತೋಷ ಮತ್ತು ಒಪ್ಪಿಗೆಯನ್ನು ಪಡೆಯಲು ನಾವು ಪ್ರತಿಜ್ಞೆ ಮಾಡಿರುವುದೇನೆಂದರೆ, ನಾವು ಯಾವಾಗಲೂ ನಮ್ಮ ಪ್ರೀತಿಯ ನಾಯಕರಾದ ಹಝ್ರತ್ ಮುಹಮ್ಮದ್(ಸ) ಅವರನ್ನು ನಮ್ಮ ಮಾರ್ಗದರ್ಶಕರನ್ನಾಗಿ ಇರಿಸುವೆವು. ಮತ್ತು ಸರ್ವಶಕ್ತನಾದ ಅಲ್ಲಾಹನು ಪ್ರವಾದಿ ಮುಹಮ್ಮದ್(ಸ) ರವರ ನೈಜ್ಯ ಸ್ವರೂಪದ ಮೇಲೆ ಚಿತ್ರಿಸಿದ ಬಣ್ಣವನ್ನು ನಾವು ನಮ್ಮ ಸ್ವಭಾವದಲ್ಲಿ ಹಾಗೂ ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತೇವೆ. ಮತ್ತು ಇದು ಸರ್ವಶಕ್ತನಾದ ಅಲ್ಲಾಹನ ಬಣ್ಣಗಳ ಸುಂದರವಾದ ಬಣ್ಣವಾಗಿದೆ." (ಖುತ್‌ಬಾತೆ ನಾಸಿರ್, ಸಂಪುಟ–1, ಪುಟ–588, ಖುತ್‌ಬಾ ಜುಮುಅ 24 ಫೆಬ್ರವರಿ 1967)

## ಪ್ರಪಂಚದ ಬೇರೆ ಯಾವುದೇ ಪ್ರಕಾಶವು ಅದರ ಮುಂದೆ ಪ್ರಕಾಶಿಸಲು ಅವಕಾಶವಿಲ್ಲ



ಹಝ್ರತ್ ಖಲೀಫತುಲ್ ಮಾಸಿಹ್ ರಾಬಿ(ರ) ನುಡಿಯುತ್ತಾರೆ:

"ಲೌಕಿಕ ವ್ಯವಸ್ಥೆಯಲ್ಲಿ ಸೂರ್ಯನು ಹೇಗೆ ಉದಾಹರಣೆಯಾಗಿದ್ದಾನೆಯೋ ಅದೇ ರೀತಿ ಆಧ್ಯಾತ್ಮಿಕ ವ್ಯವಸ್ಥೆಯಲ್ಲಿ ಪ್ರವಾದಿ ಮುಹಮ್ಮದ್ ಮುಸ್ತಫಾ(ಸ) ಅವರಾಗಿದ್ದಾರೆ. ಅವರು ಆಧ್ಯಾತ್ಮಿಕ ವ್ಯವಸ್ಥೆಯಲ್ಲಿ ಅಲ್ಲಾಹನ ಪ್ರಕಾಶದ ಮುಸುಕಾಗಿದ್ದಾರೆ. ಅದಕ್ಕಿಂತ ಹೆಚ್ಚು ಪ್ರಕಾಶಮಾನವಾದ ಮುಸುಕು ನಮ್ಮ ಲೌಕಿಕ ಜನರಿಗೆ ಕಣಿಸಲಿಲ್ಲ, ಕಾಣಿಸಲು ಸಾಧ್ಯವೂ ಇಲ್ಲ. ಅದು ಎಷ್ಟು ಪ್ರಕಾಶಮಾನವಾದ ಬೆಳಕಿನ ಮುಸುಕು ಎಂದರೆ ಅದು ಕಾಣಿಸಿಕೊಂಡಾಗ, ಅದರ ಮುಂದೆ ಪ್ರತಿ ಪ್ರಕಾಶವೂ ಮಾಯವಾಗುತ್ತದೆ, ಚಂದ್ರ ಅಥವಾ ನಕ್ಷತ್ರಗಳು ಹೊಳೆಯುವುದಿಲ್ಲ. ಮತ್ತು ಪ್ರಪಂಚದ ಬೇರೆ ಯಾವುದೇ ಪ್ರಕಾಶವೂ ಅದರ ಮುಂದೆ ಹೊಳೆಯಲು ಅವಕಾಶವಿಲ್ಲ...... ಈ ಪ್ರಕಾಶದಿಂದ ನಾವು ಇಡೀ ವಿಶ್ವವನ್ನೇ ಅಹ್ವಾನಿಸಬೇಕು, ಮತ್ತು ಇದಕ್ಕಾಗಿಯೇ ನಮಗೆ ಅನುಮತಿ ನೀಡಲಾಗಿದೆ." (ಖುತ್‌ಬಾತೆ ತಾಹಿರ್, ಸಂಪುಟ–15, ಪುಟ–160, ಖುತ್‌ಬಾ ಜುಮುಅ ಮಾರ್ಚ್ 1, 1996)

## ಪ್ರಾಮಾಣಿಕತೆ ತುಂಬು ಹೃದಯದಿಂದ ದುರೂದನ್ನು ಹರಡಿರಿ, ಅದರಿಂದ ವಾತಾವರಣದ ಪ್ರತಿಯೊಂದು ಕಣವು ದುರೂದ್‌ನ ಸುವಾಸನೆಯಿಂದ ಕೂಡಿಕೊಳ್ಳಬೇಕು



ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬ) ನುಡಿಯುತ್ತಾರೆ:

"ನಮ್ಮ ಕರ್ತವ್ಯವೇನೆಂದರೆ......... ನಾವು ನಮ್ಮ ಪ್ರಾರ್ಥನೆಗಳನ್ನು ದುರೂದ್ ಆಗಿ ಪರಿವರ್ತಿಸುವುದು ಮತ್ತು ಪರಿಸರದಲ್ಲಿ ದುರೂದನ್ನು ಪ್ರಾಮಾಣಿಕವಾಗಿ ಹರಡುವುದು. ಎಂದರೆ ಪರಿಸರದ ಪ್ರತಿಯೊಂದು ಕಣದಲ್ಲಿಯೂ ದುರೂದ್‌ನ ಸುವಾಸನೆ ತುಂಬಿಕೊಳ್ಳಬೇಕು ಮತ್ತು ನಮ್ಮ ಎಲ್ಲಾ ಪ್ರಾರ್ಥನೆಗಳು ಈ ದುರೂದ್‌ನ ಮೂಲಕ ಸರ್ವಶಕ್ತನಾದ ಅಲ್ಲಾಹನ ಆಸ್ಥಾನವನ್ನು ತಲುಪಿ ಸ್ವೀಕೃತ ಮಟ್ಟವನ್ನು ಗಳಿಸಬೇಕು. ಇದು ಪ್ರವಾದಿ(ಸ) ಹಾಗೂ ಅವರ ಕುಟುಂಬದೊಂದಿಗೆ ನಾವು ಹೊಂದಿರಬೇಕಾದ ಪ್ರೀತಿ ಮತ್ತು ವಾತ್ಸಲ್ಯದ ಅಭಿವ್ಯಕ್ತಿಯಾಗಿರಬೇಕು." (ಖುತ್‌ಬಾ ಜುಮುಅ 24 ಫೆಬ್ರವರಿ 2006, ಅಖ್ಬಾರೆ ಬದರ್ 13–04–2006 ಉರ್ದು)

EDITOR
TARIQ AHMED IDRIS.
Mobile : +91 8050330779
e-mail:
kannadabadar@gmail.com
website:
www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

ಕನ್ನಡ ಬದರ್ ವಾರ ಪತ್ರಿಕೆ **Weekly BADAR Qadian**

Qadian - 143516 Distt. Gurdaspur (Pb.) INDIA

Vol No.02, Thursday, 30 September / 07 October 2021, Issue No. 39-40

MANAGER
SHAIKH MUJAHID AHMAD
Mobile : +91 99153 79255
e -mail:managerbadrqnd@gmail.com
SUBSCRIPTION
ANNUAL: Rs: 575/-
WEIGHT: 50-100 gms / issue

## ಎಲ್ಲಾ ಪ್ರವಾದಿಗಳಲ್ಲಿ ಸರ್ವಶ್ರೇಷ್ಠ ಪ್ರವಾದಿಗಳಾದ ಪ್ರವಾದಿ(ಸ) ರವರೇ ಲೋಕದ ಸರ್ವಶ್ರೇಷ್ಠ ಅಧ್ಯಾಪಕರಾಗಿ ರುವರು.

ಸತ್ಯಸಂಗತಿ ಏನೆಂದರೆ ಎಲ್ಲಾ ಪ್ರವಾದಿಗಳಲ್ಲಿ ಸರ್ವಶ್ರೇಷ್ಠ ಪ್ರವಾದಿಗಳಾದ ಪ್ರವಾದಿ(ಸ) ರವರೇ ಲೋಕದ ಸರ್ವಶ್ರೇಷ್ಠ ಅಧ್ಯಾಪಕರಾಗಿರುವರು. ಅಂದರೆ ಆ ವ್ಯಕ್ತಿಯ ಕೈಯಿಂದ ಲೋಕದ ಗೊಂದಲಗಳು ಪರಿಹರಿಸಲ್ಪಟ್ಟವು. ಅವರು ಕಳೆದು ಹೋದ ಹಾಗೂ ಕಾಣೆಯಾಗಿದ್ದ ಏಕದೇವತ್ವವನ್ನು ಪುನಃ ಭೂಮಂಡಲದಲ್ಲಿ ಸ್ಥಾಪಿಸಿದರು. ಅವರು ಎಲ್ಲಾ ಮಿಥ್ಯ ಧರ್ಮಗಳನ್ನು ನ್ಯಾಯತೀರ್ಪಿನೊಂದಿಗೆ ಮತ್ತು ಸತ್ಯಸಾಕ್ಷ್ಯಗಳೊಂದಿಗೆ ಸೋಲಿಸಿ ಪ್ರತಿಯೊಬ್ಬ ತಪ್ಪಿತಸ್ಥನಗೆ ಅವನ ಎಲ್ಲಾ ಸಂಶಯಗಳನ್ನು ಅಳಿಸಿ ಹಾಕಿದರು. ಅವರು ಪ್ರತಿಯೊಬ್ಬ ಮುಶ್ರಿಕನ (ಅವಿಶ್ವಾಸಿಯ) ಸಂಶಯಗಳನ್ನು ನಿವಾರಿಸಿದರು ಮತ್ತು ಮುಕ್ತಿಯ ಸರಿಯಾದ ಪಥ ತೋರಿಸಿಕೊಟ್ಟರು. ಸತ್ಯಸಾಕ್ಷ್ಯಗಳ ನಿಜವಾದ ತತ್ವಗಳಿಗೆ ಪುನರ್ಜನ್ಮ ನೀಡಿದರು. (ಬರಾಹೀನ್ ಎ ಅಹ್ಮದಿಯಾ, ಭಾಗ–2, ರೂಹಾನಿ ಖಝಾಈನ್, ಸಂಪುಟ–1, ಪುಟ–97, ಟಿಪ್ಪಣಿ ಸಂಖ್ಯೆ 6)

## ಅತ್ಯಂತ ಶ್ರೇಷ್ಠ ಆಂತರಿಕ ಪರಿಶುದ್ಧಿ ಹೊಂದಿದ ನಬಿ

ಪ್ರವಾದಿಗಳಲ್ಲಿ ಶ್ರೇಷ್ಠರಾದ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಜೀವಿತದ ಸಂಭವಗಳನ್ನು ಅಧ್ಯಯನ ಮಾಡಿದರೆ ಅವರು ಆಂತರಿಕ ಪರಿಶುದ್ಧಿಯನ್ನು ಹೊಂದಿದವರಾಗಿದ್ದರೆಂದೂ ಒಳಗೊಂದು ಹೊರಗೊಂದು ಎಂಬ ದ್ವಿಗುಣವನ್ನು ಹೊಂದಿದವರಾಗಿರಲಿಲ್ಲವೆಂದೂ ಬಹಳ ಸ್ಪಷ್ಟವಾಗಿಯೂ ಪ್ರಕಾಶಮಾನವಾಗಿಯೂ ಎದ್ದು ತೋರುತ್ತದೆ. ಅವರು ದೇವನಿಗೆ ತಮ್ಮ ಜೀವವನ್ನು ಅರ್ಪಿಸಲು ಸದಾ ಸನ್ನದ್ಧರಾಗಿದ್ದರು. ಅವರು ಜನರ ಬಗ್ಗೆ ಭಯ ಮತ್ತು ಪ್ರತೀಕ್ಷೆಗಳಿಂದ ಸಂಪೂರ್ಣವಾಗಿ ವಿಮುಖರಾಗಿದ್ದು ಅಲ್ಲಾಹನ ಮೇಲೆ ಮಾತ್ರ ಭರವಸೆಯಿಡುವವರಾಗಿದ್ದರು. ಅವರು ದೇವನ ನಿರ್ಧಾರಗಳಿಗೆ ಮತ್ತು ಇಚ್ಛೆಗಳಿಗೆ ತನ್ನನ್ನು ಅಡಿಯಾಳನ್ನಾಗಿ ಮಾಡಿ, ಏಕದೇವವಿಶ್ವಾಸದ ಘೋಷಣೆಯಿಂದ ತನ್ನ ತಲೆಯ ಮೇಲೆ ಏನೆಲ್ಲ ಗಂಡಾಂತರ ಬರಬಹುದು ಮತ್ತು ಬಹುದೇವಾರಾಧಕರ ಕೈಗಳಿಂದ ಏನೆಲ್ಲ ದುಃಖ ಮತ್ತು ನೋವು ಅನುಭವಿಸಬೇಕಾಗಿ ಬರಬಹುದು ಎಂಬುದರ ಬಗ್ಗೆ ಸ್ವಲ್ಪವೂ ಲಕ್ಷಿಸದೆ ಕಾರ್ಯಪ್ರವೃತ್ತರಾಗಿದ್ದರು.
(ಬರಾಹೀನೆ ಅಹ್ಮದಿಯಾ ಭಾಗ–2; ರೂಹಾನೀ ಖ಼ಝ಼ಾಈನ್, ಸಂಪುಟ–1, ಪುಟ–111)

## ಈ ಅರಬಿ ಪ್ರವಾದಿ, ಎಂತಹ ಉನ್ನತ ಅಂತಸ್ತನ್ನು ಪಡೆದ ಪ್ರವಾದಿಯಾಗಿರುವರು!

ನಾನು ಯಾವಾಗಲೂ ಆಶ್ಚರ್ಯಚಕಿತನಾಗಿ ನೋಡುತ್ತಿದ್ದೇನೆ. ಈ ಅರಬಿ ಪ್ರವಾದಿ, ಅವರ ಹೆಸರು ಮುಹಮ್ಮದ್(ಸ) (ಸಾವಿರ ಸಾವಿರ ಇಷ್ಟಾಶೀರ್ವಾದಗಳೂ ಶಾಂತಿಯೂ ಅವರ ಮೇಲೆ ಸುರಿಯಲ್ಪಡಲಿ) ಎಂತಹ ಉನ್ನತ ಅಂತಸ್ತನ್ನು ಪಡೆದ ಪ್ರವಾದಿಯಾಗಿರುವರು! ಅವರ ಉನ್ನತಸ್ಥಾನದ ಕೊನೆ ಎಲ್ಲಿದೆಯೆಂದು ತಿಳಿಯಲು ಸಾಧ್ಯವಿಲ್ಲ. ಅವರ ಪವಿತ್ರ ಪ್ರಭಾವದ ಅಂದಾಜು ಮಾಡುವುದು ಸಹ ಮನುಷ್ಯನಿಂದ ಸಾಧ್ಯವಾಗುವ ಕೆಲಸವಲ್ಲ. ಅವರ ಸ್ಥಾನಮಾನಗಳನ್ನು ಗುರುತಿಸಬೇಕಾದ ರೀತಿಯಲ್ಲಿ ಗುರುತಿಸಲಾಗಿಲ್ಲ ಎಂಬುದು ದುಃಖಕರವಾದ ಸಂಗತಿಯಾಗಿದೆ. ಏಕಾದೇವಾರಾಧನೆ ಲೋಕದಿಂದ ಕಣ್ಮರೆಯಾಗಿದ್ದಾಗ ಅದನ್ನು ಮರಳಿ ತಂದ ಒಬ್ಬನೇ ಒಬ್ಬ ಪಹಿಲ್ವಾನ್ ಅವರೇ ಆಗಿದ್ದಾರೆ. ಅವರು ಅಲ್ಲಾಹನೊಂದಿಗೆ ಅತ್ಯಂತ ಉನ್ನತ ಮಟ್ಟದ ಪ್ರೀತಿಯನ್ನು ಹೊಂದಿದ್ದರು. ಮಾನವರ ಹಿತಕಾಂಕ್ಷೆಯಲ್ಲಿ ಅತ್ಯುನ್ನತ ಮಟ್ಟವನ್ನು ತಲಪಿ ಅವರ ಜೀವ ಕರಗಿತು. ಅಲ್ಲಾಹನಿಗೆ ಅವರ ಹೃದಯದ ರಹಸ್ಯ ತಿಳಿದಿದ್ದುದರಿಂದ ಅವರಿಗೆ ಎಲ್ಲ ಪ್ರವಾದಿಗಳ ಮೇಲೆಯೂ (ಅವರ) ಹಿಂದಿನ ಮತ್ತು ಅನಂತರದ ಎಲ್ಲರ ಮೇಲೆಯೂ ಅವನು ಶ್ರೇಷ್ಠತೆಯನ್ನು ಅನುಗ್ರಹಿಸಿದನು. ಅವರ ಅಭಿಲಾಷೆಗಳನ್ನು ಅವರ ಜೀವಿತದಲ್ಲಿಯೇ ಅವನು ಈಡೇರಿಸಿಕೊಟ್ಟನು.

(ಹಖೀಖತುಲ್ ವಹ್ಯ್; ರೂಹಾನೀ ಖ಼ಝ಼ಾಈನ್, ಸಂಪುಟ 22, ಪುಟ 118 – 119)

Printed & Published by: Jameel Ahmed Nasir On Behalf Of Nigran Board Of Badar, Name Of Owner: Nigran Board Of Badar. And Printed at Fazle-Umar Printing Press, Harchowal Road, Qadian. Dist. Gurdaspur-143516, Punjab. And Published at Office Of Weekly Badar Mohalla Ahmadiyya, Qadian. Dist. Gurdaspur-143516, Punjab. INDIA. Editor: Tariq Ahmed Idris.